ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 35

ಆಗಸ್ಟ್ 31. 2008

ಕನ್ನಡ ವಾರಪತ್ರಿಕೆ

ರೂ. 5/-

www.janashakthi.org

ಯಶಸ್ವಿ ಸಾರ್ವತ್ರಿಕ ಮುಷ್ಕರ



ಬೆಲೆ ಏರಿಕೆ
ದುಡಿವ ಜನರ ಸಮಸ್ಯೆಗಳ
ವಿರುದ್ಧ
ಭುಗಿಲೆದ್ದ ಪ್ರತಿಭಟನೆ



ಕೋಲಾರದಲ್ಲಿ
ಲಾಠಿ ನರ್ತನ



ಜೀವಜಲದ
ನಿರ್ದಯ ದಂಧೆ

ಬಿಜೆಪಿ :
ಪ್ರಜಾಪ್ರಭುತ್ವಕ್ಕೆ ಕುತ್ತು








ಮುಷರಫ್
ಪತನ

ಗೋಕರ್ಣದ ಹುಂಡಿಗೆ
ಗೋ ಸ್ವಾಮಿಯ ಕೈ

ನೋಟ



ಡಾ. ಜಿ. ಭಾಸ್ಕರ ಮಯ್ಯ

ಸಾಮ್ರಾಜ್ಯಶಾಹಿ ಮತ್ತು ವಿಜ್ಞಾನ

ಸಾಮ್ರಾಜ್ಯಶಾಹಿಯಿಂದ ಈ ಬುದ್ಧಿಮಾಪನವನ್ನು ಮುಖ್ಯವಾಗಿ ದುಡಿಯುವ ವರ್ಗ ಹಾಗೂ ಕರಿಯರ ವಿರುದ್ಧ ಬಳಸಲು ವಿಕಾಸಪಡಿಸಲಾಯಿತು. ಶೈಕ್ಷಣಿಕಸಾಮರ್ಥ್ಯದ ಕೊರತೆಯು ಜೈವಿಕವಾದುದೆಂದು ಈ ಪರೀಕ್ಷೆಗಳು ಸಾರುತ್ತವೆ. ಇದರರ್ಥ ಮೇಲು ಜಾತಿಯವರಿಗೆ ಐ. ಕ್ಯೂ. ಹೆಚ್ಚು ಹಾಗೂ ಕೆಳಜಾತಿಯವರಿಗೆ ಐ. ಕ್ಯೂ. ಕಡಿಮೆ!


ವೈಜ್ಞಾನಿಕ ಪ್ರಗತಿಯು ಯಾವುದೇ ದೇಶದ ಪ್ರಗತಿಗೆ ಮೂಲ ಸಾಧನ. ಮುಂದುವರಿದ ಜಗತ್ತು ಈ ದಾರಿಯಲ್ಲಿ ನಡೆದುದರಿಂದಲೇ ಔದ್ಯೋಗಿಕರಣವು ಸಾಧ್ಯವಾದುದು. ಈ ದಿಸೆಯಲ್ಲಿ ಅಮೆರಿಕಾ, ರಷ್ಯಾ, ಜಪಾನ್ ಇತ್ಯಾದಿ ದೇಶಗಳು ಮುಂಚೂಣಿಯಲ್ಲಿದ್ದುವು. ಆದರೆ ಈ ವಿಚಾರ ಮತ್ತೊಂದು ಆಯಾಮ ಇದೆ. ವಿಜ್ಞಾನವು ಕುಂಠಿತ ಪ್ರಗತಿಗೆ ಮತ್ತು ನವವಸಾಹತು ಶೋಷಣೆಗೆ ಸಾಧನವೂ ಆಗುತ್ತದೆ. (ಕೆ. ಆರ್. ಭಟ್ಟಾಚಾರ್ಯ. ಪುಟ: 52, ಸೋಶಿಯಲ್ ಸೈಂಟಿಸ್ಟ್, 1973) ಅಂದರೆ, ವಿಜ್ಞಾನವು ಅದರಷ್ಟಕ್ಕೆ ಪ್ರಗತಿಗೆ ಮತ್ತು ನವ ವಸಾಹತುಶಾಹಿಗೆ ಕಾರಣವಾಗುವುದಿಲ್ಲ. ಬದಲಿಗೆ ವಿಜ್ಞಾನದ ಮೇಲೆ ಇರುವ ಸಾಮ್ರಾಜ್ಯಶಾಹಿಯ ಹಿಡಿತವು ಇಂತಹ ಫಲಿತಾಂಶಕ್ಕೆ ಎಡೆಮಾಡಿಕೊಡುತ್ತದೆ.

ಈ ದಿಕ್ಕಿನಲ್ಲಿ ಡಾ. ರಾಮವಿಲಾಸ್ ಶರ್ಮಾರ ಮಾರ್ಮಿಕವಾದ ಮಾತು ಗಮನಾರ್ಹವಾದುದು: 'ಉತ್ಪಾದನೆ, ವಿನಿಮಯ ಮತ್ತು ವಿತರಣೆಯ ಮೇಲೆ ಬಡ್ಡಿಯ ಗೀಳು ಏರಿ ಕುಳಿತಿದೆ. ಬಡ್ಡಿಯ ಸ್ವಾಭಾವಿಕ ಮೈತ್ರಿಯು ಹಾಗೂ ಅದರ ಸೋದರಿಕೆಯಿರುವುದು ಪಾಳೆಗಾರಿ ನಿರಂಕುಶತೆಯೊಂದಿಗೆ. ಜಗತ್ತಿನಲ್ಲಿ ಪಾಳೆಗಾರಿ ಅವಶೇಷಗಳ ಎಲ್ಲಕ್ಕಿಂತ ದೊಡ್ಡ ರಕ್ಷಕ ಅಮೆರಿಕಾ.'

ಇದರಿಂದಾಗಿ ವಿಜ್ಞಾನವು ವೈಜ್ಞಾನಿಕ ಮನೋಧರ್ಮಕ್ಕೆ ಎಡೆಮಾಡಿಕೊಡುವ ಬದಲಿಗೆ ಗೊಡ್ಡು ಪಾಳೆಗಾರೀ ನಂಬಿಕೆಗಳನ್ನು ಮತ್ತಷ್ಟು ದೃಢಪಡಿಸಿ ಸಾಮ್ರಾಜ್ಯಶಾಹಿಯನ್ನು ಅಜೇಯವಾಗಿ ಇರಿಸುವಂತಾಯಿತು. ಇದನ್ನು ಮೂರು ಉಪಶೀರ್ಷಿಕೆಗಳಲ್ಲಿ ಗಮನಿಸುವುದು ಈ ಲೇಖನದ ವಸ್ತು.

1. ಬುದ್ಧಿಮಾಪನ ಪರೀಕ್ಷೆ (ಐ.ಕ್ಯೂ ಟೆಸ್ಟ್) ಎಂಬ ಜನಾಂಗೀಯವಾದ :

ಬುದ್ಧಿಮತ್ತೆಯ ವಿವಿಧ ಸ್ತರಗಳನ್ನು ಮಾಪನ ಮಾಡಲು ಈ ಬಗೆಯ ಪರೀಕ್ಷೆಯು ಫ್ರೆಂಚ್ ವಿಜ್ಞಾನಿ ಅಲ್ಬರ್ಟ್ ಬಿಯನಟ್‌ನಿಂದ 1900 ರಲ್ಲಿ ಜಾರಿಗೆ ಬಂದಿತು, ಇದರ ಪ್ರಕಾರ ಪ್ರಕೃತಿ - ಸಾಮಾಜಿಕ ಪರಿಸರ ಮತ್ತು ಆನುವಂಶೀಯತೆಯ ನಡುವೆ ಆನುವಂಶೀಯತೆಯನ್ನು ಪ್ರಧಾನವಾಗಿ ಪರಿಗಣಿಸಲಾಗುತ್ತದೆ. ವ್ಯಕ್ತಿಗಳಂತೆ ಜನಾಂಗಗಳ ವ್ಯಾವಹಾರಿಕ ಲಕ್ಷಣಗಳೂ ಕೂಡಾ ಆನುವಂಶೀಯತೆಯ ಪ್ರಾಬಲ್ಯವಿದೆಯೆಂದರೆ, ವ್ಯಕ್ತಿಯ ಬುದ್ಧಿಯ ಮಾಪನದಲ್ಲಿ ಸಾಮಾಜಿಕ ಪರಿಸರ ಮತ್ತು ಸಮಾಜದ ಪಾಲು ಶೇಕಡಾ 20 ಮಾತ್ರ. ಅಂದರೆ ಉಳಿದ 80 ಶೇಕಡಾ ಆನುವಂಶೀಯವಾಗಿರುತ್ತದೆ. ಆದ್ದರಿಂದ ನಮ್ಮ ಬೌದ್ಧಿಕ ಸಾಧ್ಯತೆಗಳನ್ನು ಬಹಳವೆಂದರೆ ಒಂದು ಮಿತಿಯ ತನಕ ಮಾತ್ರ ನಾವು ಅಭಿವೃದ್ಧಿಸಿಕೊಳ್ಳಬಲ್ಲೆವು. ಈ ವಾದ ಹಿಟ್ಲರನ ಜನಾಂಗೀಯವಾದಂತಹ ಜನಾಂಗೀಯವನ್ನು ವೈಜ್ಞಾನಿಕವೆಂದು ಸಾಧಿಸುವ ಗುಪ್ತ ಹುನ್ನಾರವಲ್ಲದೆ ಮತ್ತೇನೂ ಅಲ್ಲ.



ವಿಜ್ಞಾನದ ಲೇಬಲ್‌ನ್ನು ಹೊತ್ತ ಈ ಪರೀಕ್ಷಾ ಸಾಧನದಿಂದಾಗಿ ಒಮ್ಮೆಗೇನೆ ನೀಗ್ರೊ, ಶೂದ್ರ, ಅಸ್ಪರ್ಶ ಇತ್ಯಾದಿ ತುಳಿತಕ್ಕೊಳಗಾದ ಜಾತಿ ಜನಾಂಗಗಳು ಶಾಶ್ವತವಾಗಿ ಹಿಂದುಳಿದವರು ಅಥವಾ ಬೌದ್ಧಿಕ ಸಾಮರ್ಥ್ಯದಲ್ಲಿ ಹೀನರೆಂಬುದನ್ನು 'ವೈಜ್ಞಾನಿಕ'ವಾಗಿ 'ಸಾಧಿಸಿ'ದಂತಾಯಿತು. ಈ ಕುರಿತು ಭಾರತದ ಮನುವೆ ಆಗಲಿ, ಗುಲಾಮರನ್ನು ಮನುಷ್ಯ ರೀತಿಯಲ್ಲಿ ಗುರುತಿಸಲು ಒಲ್ಲದ ಪ್ಲೇಟೋ - ಅರಿಸ್ಟಾಟಲ್‌ರವರೇ ಆಗಲಿ ಆ ಕಾಲದಲ್ಲಿಯೇ ಎಷ್ಟೊಂದು ವೈಜ್ಞಾನಿಕವಾಗಿ(!) ಚಿಂತಿಸಿದ್ದಾರೆಂದು ತಿಳಿದು ಬರುತ್ತದೆ!

ಇಂಥ ವಿಚಾರಗಳು ಜನಾಂಗೀಯವಾದಕ್ಕೆ ಎಂತಹ ಸಮರ್ಥನೆಯನ್ನು ಒಡ್ಡುತ್ತವೆ ಮತ್ತು ಅವುಗಳ ಪರಿಣಾಮ ಎಷ್ಟು ಬೀಕರವಾಗಬಲ್ಲುದೆಂಬುದನ್ನು ಜಗತ್ತನ್ನೇ ನಡುಗಿಸಿದ ಜರ್ಮನಿ, ಇಟೆಲಿ ಮತ್ತು ಜಪಾನಿನ ಫ್ಯಾಸಿಸ್ಟರ ನರಮೇಧಗಳಲ್ಲಿ ಕಾಣಬಹುದು. ಸಾಮ್ರಾಜ್ಯಶಾಹಿ ದೇಶಗಳು ಇಂದು ಕೂಡಾ ಜನಾಂಗೀಯವಾದಕ್ಕೆ ಬಲವಾದ ಸಮರ್ಥನೆಯನ್ನು ನೀಡುತ್ತಿವೆ. ಇದರಿಂದಾಗಿ ಮತ್ತೆ ವಿಶ್ವದ ಹಲವಾರು ದೇಶಗಳಲ್ಲಿ ಈ ನವಜನಾಂಗೀಯವಾದವು ತಲೆಯೆತ್ತುತ್ತಿದೆ.

ನಮ್ಮ ದೇಶದಲ್ಲಿಯೂ ಈ ಬಗೆಯ ಬಲ ಪ್ರತಿಗಾಮಿವಲಯದ ಒರ್ವ ವ್ಯಕ್ತಿ (ಹಿಟ್ಲರನ ದತ್ತು ಪುತ್ರ) ಎಮ್. ಎಸ್. ಗೋಳವಾಲ್ಕರ್ ತಮ್ಮ 'ನಾವು ಮತ್ತು ನಮ್ಮ ರಾಷ್ಟ್ರೀಯತೆಯ ವ್ಯಾಖ್ಯೆ'ಎಂಬ ಗ್ರಂಥದಲ್ಲಿ ಹೇಳಿದ ಮಾತನ್ನು ಗಮನಿಸಬಹುದು: 'ನಮ್ಮ ಹಿಟ್ಲರ್ ಜನಾಂಗ ಮತ್ತು ಸಂಸತಿಯ ಶುದ್ಧತೆಯನ್ನು ಶಾಶ್ವತವಾಗಿರಿಸಲು ಜರ್ಮನಿಯ ಸೆಮಿಟಿಕ್ ಜಾತಿಯ ಯಹೂದಿಗಳನ್ನು ದೇಶದಿಂದ ಹೊರಗಟ್ಟಿ ವಿಶ್ವವೇ ಸ್ಥಂಬಿತವಾಗುವಂತೆ ಮಾಡಿದ. ಇಲ್ಲಿ ಜನಾಂಗಗೌರವವು ತನ್ನ ಸರ್ವೋಚ್ಚ ರೂಪದಲ್ಲಿ ಪ್ರಕಟವಾಗಿದೆ. ಮೂಲಭೂತ ವ್ಯತ್ಯಾಸವಿರುವ ಜನಾಂಗಗಳು ಮತ್ತು ಸಂಸತಿಗಳು ಒಂದಾಗುವುದು ಎಷ್ಟೊಂದು ಅಸಂಭವವೆಂಬುದನ್ನು ಹಿಟ್ಲರನ ಜರ್ಮನಿ ತೋರಿಸಿತು. ಹಿಂದೂಸ್ಥಾನದಲ್ಲಿರುವ ನಮಗೂ ಇದೊಂದು ಒಳ್ಳೆಯ ಪಾಠ. ಇದನ್ನು ನಾವು ಸ್ವೀಕರಿಸಬೇಕು.' ಭಾರತದಲ್ಲಿ ಫ್ಯಾಸಿಸಮ್‌ನ ಬೀಜಗಳನ್ನು ಬಿತ್ತಿದವನು ಇದೇ ಗೋಳವಾಲ್ಕರ್ ಮತ್ತವನ ಗುರು ಹೆಡಗೆವಾರ್.

ಸಾಮ್ರಾಜ್ಯಶಾಹಿಯಿಂದ ಈ ಬುದ್ಧಿಮಾಪನವನ್ನು ಮುಖ್ಯವಾಗಿ ದುಡಿಯುವ ವರ್ಗ ಹಾಗೂ ಕರಿಯರ ವಿರುದ್ಧ ಬಳಸಲು ವಿಕಾಸಪಡಿಸಲಾಯಿತು. ಶೈಕ್ಷಣಿಕಸಾಮರ್ಥ್ಯದ ಕೊರತೆಯು ಜೈವಿಕವಾದುದೆಂದು ಈ ಪರೀಕ್ಷೆಗಳು ಸಾರುತ್ತವೆ. ಇದರರ್ಥ ಮೇಲು ಜಾತಿಯವರಿಗೆ ಐ. ಕ್ಯೂ. ಹೆಚ್ಚು ಹಾಗೂ ಕೆಳಜಾತಿಯವರಿಗೆ ಐ. ಕ್ಯೂ. ಕಡಿಮೆ!

ಈ ರೀತಿಯಲ್ಲಿ ಈ ಬುದ್ಧಿಮಾಪನವು ಊಳಿಗಮಾನ್ಯ ಮೌಲ್ಯವೊಂದರ ವೈಜ್ಞಾನಿಕ ಪರಿಷತ ರೂಪ. ಏಕೆಂದರೆ ಬುದ್ಧಿ ಮತ್ತು ವ್ಯವಹಾರ ಜ್ಞಾನವು ಸಾಮಾಜಿಕ ಹಾಗೂ ಸಾಂಸತಿಕ ಕೊಡುಗೆ. ಇದನ್ನು ಶುದ್ಧ ವಿಜ್ಞಾನದ ಚರ್ಚೆಯ ವಿಷಯವನ್ನಾಗಿ ಮಾಡಲು ಸಾಧ್ಯವಿಲ್ಲ. ಸಮಾಜದಲ್ಲಿ ಶೋಷಣೆಯನ್ನು ನಿರಂತರವಾಗಿಸಲು ಶೋಷಕವರ್ಗವು ವಿಜ್ಞಾನದ ಇಂತಹ ಅನೈತಿಕ ಅಥವಾ ಅನ್ಯಾಯದ ತಪ್ಪು ಪ್ರಯೋಗಗಳನ್ನು ಚೆನ್ನಾಗಿ ಉಪಯೋಗಿಸುತ್ತದೆ. ವಿಜ್ಞಾನವನ್ನು ಸಾಮಾಜಿಕ ಸಾಂಸತಿಕ ಜೀವನದಿಂದ ಪ್ರತ್ಯೇಕಿಸಿ ಕೇವಲ ಸೈದ್ಧಾಂತಿಕ ಅಥವಾ ಅಂಕಿ ಅಂಶಗಳ ಸೂತ್ರಗಳಲ್ಲಿ ಬದಲಿಸುವುದು ಧೂರ್ತತೆ ಮಾತ್ರವಲ್ಲದೆ; ಜನವಿರೋಧಿ ಒಳಸಂಚು ಕೂಡಾ ಹೌದು!

ವಿಜ್ಞಾನಿಗಳು ಮತ್ತು ಅರ್ಥವಾದ :

ಸರಿಯಾದ ಸಾಮಾಜಿಕ ಬದಲಾವಣೆಗಳಾಗದೆ ಅಧಿಕ ಉತ್ಪಾದನೆ ಮತ್ತು ನವೀನ ತಂತ್ರಜ್ಞಾನವನ್ನು ಹೊಂದುವುದು ಅಭಿವೃದ್ಧಿಹೊಂದದ ದೇಶಗಳ ಮೇಲೆ ಮಾರಕ ಪರಿಣಾಮವನ್ನುಂಟುಮಾಡುತ್ತದೆ. ಇದನ್ನು ಹತ್ತು ಹಲವು ಬಗೆಗಳಲ್ಲಿ ಗಮನಿಸಬಹುದು. ಸಾಮ್ರಾಜ್ಯಶಾಹಿಯ ಆದೇಶಕ್ಕನುಗುಣವಾಗಿ ಭಾರತದಲ್ಲಿ ಕೃಷಿಯ ಸಂಶೋಧನೆ ಮತ್ತು ಉತ್ಪಾದನೆಗೆ ನೆಲ ಹದಗೊಳಿಸಲಾಯಿತು. ಇಲ್ಲಿ ಪ್ರೋಟೀನಿನ ಅಭಾವ ತೀವ್ರವಿದೆ ಎಂಬುದು ಸತ್ಯ. ಇದಕ್ಕಾಗಿ ಭಾರತ ಸರಕಾರದ ಯೋಜನೆ ಹಾಗೂ ನಮ್ಮ ವಿಜ್ಞಾನಿಗಳ ಪರಿಶ್ರಮ ಅಹೋರಾತ್ರಿ ಕಾರ್ಯನಿರತವಾಗಿದೆ. ಆದರೆ ಪ್ರೋಟೀನಿನ ಸಮಸ್ಯೆಗೆ ಮಾತ್ರ ಪರಿಹಾರ ಸಿಕ್ಕಿಲ್ಲ. ಬಡವರು ಮತ್ತಷ್ಟು ಬಡವರಾಗುತ್ತಾ ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಾ ಇದ್ದಾರೆ. ಹಾಗಿದ್ದರೆ ಇದರಲ್ಲಿ ನಮ್ಮ ವಿಜ್ಞಾನಿಗಳ ಪಾತ್ರವೇನು?

ಇದನ್ನು ಒಂದು ಸೋಯಾಬೀನಿನ ಉದಾಹರಣೆಯಿಂದ ಗಮನಿಸಬಹುದು. ಅಮೆರಿಕಾದ ಸಹಾಯ, ಸಹಕಾರ ಸಲಹೆಗಳಿಂದ ಇಲ್ಲಿ ಸೋಯಾಬೀನನ್ನು ಬೆಳೆಯಲಾಗುತ್ತಿದೆ. ಆದರೆ ಸೋಯಾಬೀನನ್ನು ಹಾಗೇನೇ ಆಹಾರ ಪದಾರ್ಥವಾಗಿ ಉಪಯೋಗಿಸುವಂತಿಲ್ಲ. ಆದರೆ ಅದೇ ಜಾತಿಯ ನೆಲಗಡಲೆಯನ್ನು ಹಾಗೆಯೇ ಉಪಯೋಗಿಸಬಹುದು. ಆದರೆ ನೆಲಗಡಲೆಯಲ್ಲಿ ಸೋಯಾಬೀನಿನಲ್ಲಿರುವಷ್ಟು ಪ್ರೋಟೀನು ಇಲ್ಲ. ಅಂತೆಯೇ ಎಣ್ಣೆ ಪ್ರಮಾಣವೂ ಅಷ್ಟೇ ಕಡಿಮೆ. ಸೋಯಾಬೀನಿನ ಪ್ರೋಟೀನು ಹಾಗಿದ್ದರೆ ಯಾವ ರೀತಿಯಲ್ಲಿ ಉಪಯೋಗಿಸಲ್ಪಡುತ್ತದೆ? ಅದಕ್ಕೆ ಅಮೆರಿಕಾದ ತಂತ್ರಜ್ಞಾನ ಆಧಾರಿತ ದೊಡ್ಡ ಕಾರ್ಖಾನೆಗಳು ಬೇಕು. ಅವುಗಳಿಂದ ತಯಾರಾಗುವ ಪ್ರೋಟೀನು - ಚಾಕಲೇಟು, ಟೆಕ್ಸ್‌ಶ್ಚರ್ಡ್ ಪ್ರೋಟೀನು - ಇವುಗಳನ್ನು ಬಡವರು ಕೊಳ್ಳಲಾರರು. ಇದು

ಪುಟ 13 ಕ್ಕೆ

ಮನೆಗೆ ಹೋಗುತ್ತೇನೆಂದವ ದಡ್ಡ

ಯಾವುದೇ ಪರೀಕ್ಷೆಯು ವ್ಯಕ್ತಿ ಯಾವಾಗ ಯಾವ ವಿಷಯದಲ್ಲಿ ತರಬೇತು ಪಡೆದಿದ್ದನೊ ಆ ವಿಷಯದಲ್ಲಿ ಮಾತ್ರ ನಡೆಸುವ ಪರೀಕ್ಷೆಯಾಗಿರುತ್ತದೆ. ಮೌಲ್ಯಮಾಪನದ ನಿಜವಾದ ಕ್ರಮವಾಗಿರುತ್ತದೆ. ಪರೀಕ್ಷೆಯು ಯಾವುದೇ ವಿಶೇಷ ಸಾಮಾಜಿಕ ಆರ್ಥಿಕ ರಚನೆಯನ್ನು ಹೊಂದಿಕೊಂಡಿರುತ್ತದೆ. ಪರೀಕ್ಷೆಯು ಒಂದು ಸಾಮಾಜಿಕ ಕೃತಿ, ಜೈವಿಕ ಅಲ್ಲ. ಇದರ ವರ್ತುಲದಲ್ಲಿ ಸಾಮಾಜಿಕ ವಾಸ್ತವವನ್ನು ಅಲ್ಲಗಳೆಯಲಾಗುವುದಿಲ್ಲ. ಹಾಗಿರುವಲ್ಲಿ ಈ ಐ. ಕ್ಯೂ. ಪರೀಕ್ಷೆ ಎಂಥ ಮೋಸದ್ದು ಎಂಬುದಕ್ಕೆ ಒಂದು ಉದಾಹರಣೆ:

7 ನೆಯ ವರ್ಷದ ಹುಡುಗನಿಗೆ ಅಮೆರಿಕಾದಲ್ಲಿ ಈ ಪ್ರಶ್ನೆ ಕೇಳಲಾಯಿತು. - 'ನಿನ್ನನ್ನು ರೊಟ್ಟಿ ತರಲು ಅಂಗಡಿಗೆ ಕಳುಹಿಸಿದರೆ ಅಂಗಡಿಯವರು ರೊಟ್ಟಿಯಿಲ್ಲವೆಂದರೆ ನೀನೇನು ಮಾಡುತ್ತಿ' ಆಗ ಹುಡುಗ - ಇನ್ನೊಂದು ಅಂಗಡಿಗೆ ಹೋಗುವುದಾಗಿ ಹೇಳಿದ. ಆತ ಹೆಚ್ಚು ಅಂಕವನ್ನು ಪಡೆದ. ನಾನು ವಾಪಾಸು ಮನೆಗೆ ಹೋಗುತ್ತೇನೆಂದ ಇನ್ನೊಬ್ಬನಿಗೆ ಐ. ಕ್ಯೂ. ಕಡಿಮೆಯೆಂದು ನಿರ್ಧರಿಸಲಾಯಿತು. ಆತ ಕರಿಯನಾಗಿದ್ದ. ಹೆಚ್ಚಿನ ಕರಿಯ ಹುಡುಗರು ಮನೆಗೆ ಹೋಗುತ್ತೇನೆಂಬ ಉತ್ತರವನ್ನೇ ಕೊಟ್ಟರು!

ಈ ಉತ್ತರಗಳು ಬಿಳಿಯ ಮತ್ತು ಕರಿಯ ಹುಡುಗರ ಪರಿಸ್ಥಿತಿಗಳಿಂದ ಉತ್ಪನ್ನವಾದವುಗಳು. ಜಿರೋಮ್‌ಕಾನಿನ್ ಎಂಬ ಅಮೇರಿಕನ್ ತಜ್ಞ ಈ ಕುರಿತು ಟಿಪ್ಪಣಿ ಬರೆಯುತ್ತಾನೆ -

'ಕರಿಯ ಹುಡುಗರ ಉತ್ತರವೂ ಬಿಳಿಯ ಹುಡುಗರ ಉತ್ತರದಷ್ಟೇ ಸರಿಯಾದುದು. ಏಕೆಂದರೆ ಸಾಮಾನ್ಯವಾಗಿ ಕರಿಯ ಹುಡುಗರು ವಾಸಿಸುವ ಕೇರಿಗಳಲ್ಲಿ ಅಕ್ಕಪಕ್ಕ ಬೇರೆ ಅಂಗಡಿಗಳಿರುವುದಿಲ್ಲ. ಆದ್ದರಿಂದ ಅವರ ಉತ್ತರ 'ಮನೆಗೆ ಹಿಂತಿರುಗುವುದೇ' ಆಗಿದೆ.

ಸಂಪಾದಕೀಯ

ದೇವಸ್ಥಾನಗಳ ಅಪಹರಣ

ಪುರಾಣ ಪ್ರಸಿದ್ಧ ಕ್ಷೇತ್ರವಾಗಿರುವ ಉತ್ತರಕನ್ನಡ ಜಿಲ್ಲೆಯ ಗೋಕರ್ಣದ ಮಹಾಬಲೇಶ್ವರ ದೇವಸ್ಥಾನ ಹಾಗೂ ಅದಕ್ಕೆ ಹೊಂದಿಕೊಂಡ ಆಸ್ತಿಪಾಸ್ತಿಗಳೆಲ್ಲವನ್ನೂ ಶಿವಮೊಗ್ಗದ ರಾಮಚಂದ್ರಾಪುರ ಮಠಕ್ಕೆ ರಾಜ್ಯ ಸರ್ಕಾರ ನೀಡಿ ಆದೇಶ ಹೊರಡಿಸಿರುವುದರ ವಿರುದ್ಧ ಸ್ಥಳೀಯವಾಗಿ ಪ್ರತಿಭಟನೆಗಳು ವ್ಯಕ್ತವಾಗಿವೆ. ಇದು ಪ್ರತಿಭಟಿಸಬೇಕಾದ ವಿಚಾರವೂ ಹೌದು. ಯಾಕೆಂದರೆ ಈ ದೇವಸ್ಥಾನದ ನಿರ್ವಹಣೆಯನ್ನು ಅಲ್ಲಿಯ ಸ್ಥಳೀಯ ಗ್ರಾಮಸ್ಥರು ದೇವಸ್ಥಾನದ ಟ್ರಸ್ಟಿಗಳು, ಸಮಿತಿಯವರು ನಿರ್ವಹಿಸುತ್ತಿದ್ದವರಿಂದ ಏಕಾಏಕಿ ಕಸಿದುಕೊಂಡದ್ದು ನೀತಿ ಉಲ್ಲಂಘನೆ ಮಾತ್ರವಲ್ಲ ಆರ್‌ಎಸ್‌ಎಸ್‌ನ ಹಿನ್ನೆಲೆಯಿರುವ ಮಠಕ್ಕೆ ಅನುಕೂಲ ಕಲ್ಪಿಸುವ ಕಾನೂನುಬಾಹಿರ ಕ್ರಮವೂ ಆಗಿದೆ. ಬಿಜೆಪಿ ಸರ್ಕಾರವು ದೇವಸ್ಥಾನವನ್ನು ಮಠಕ್ಕೆ ನೀಡಿರುವುದು ಯಾವ ರೀತಿಯ ಧಾರ್ಮಿಕ ಕಾರ್ಯ ಎಂಬುದನ್ನು ಹೇಳಬೇಕಿದೆ. ಇಲ್ಲಿ ವಿವಾದವೊಂದು ಹೈಕೋರ್ಟ್‌ನಲ್ಲಿದ್ದು, ಯಥಾಸ್ಥಿತಿಯನ್ನು ಕಾಪಾಡಿಕೊಂಡು ಬರಬೇಕೆಂದು ನ್ಯಾಯಾಲಯ ನಿರ್ದೇಶನ ನೀಡಿದ್ದರೂ ಅದನ್ನು ಉಲ್ಲಂಘಿಸಿ ತರಾತುರಿಯಲ್ಲಿ ಎಲ್ಲಾ ನಿಯಮ ಗಾಳಿಗೆ ತೂರಿರುವುದು ಸರ್ಕಾರದ ದುರುದ್ದೇಶವನ್ನು ತೋರಿಸುತ್ತದೆ.


ರಾಮಚಂದ್ರಪುರ ಮಠ ಗೋರಕ್ಷಣೆಯ ಹೆಸರಿನಲ್ಲಿ ಆರ್.ಎಸ್.ಎಸ್.ನ ಕುಖ್ಯಾತ ಫ್ಯಾಸಿಸ್ಟ್ ಅಜೆಂಡವನ್ನು ಸಕ್ರಿಯವಾಗಿ ಜಾರಿಗೊಳಿಸುತ್ತಿರುವ ಸಂಸ್ಥೆಯಾಗಿದೆ. ವಿವಿಧ ಸಂಸತಿ, ಆಚಾರ, ಆಹಾರ ಪದ್ಧತಿಗಳಿರುವ ಜನರ ನಡುವೆ ಧಾರ್ಮಿಕ ವಿಭಜನೆ ವಿದ್ವೇಷವನ್ನು ತರಲು ಹೊರಟಿರುವ ಈ ಮಠಕ್ಕೆ ಬಿಜೆಪಿ ಸರ್ಕಾರ ಬಜೆಟ್‌ನಲ್ಲಿ ಹಾಗೂ ಆ ನಂತರವೂ ಪುಷ್ಕಳ ಧನ ಭೋಜನಕ್ಕೆ ವ್ಯವಸ್ಥೆ ಹಾಗೂ ಇತರೆ ಅನುಕೂಲ ಕಲ್ಪಿಸಿರುವುದು ಗೊತ್ತಿರುವ ಸಂಗತಿಯೇ ಆಗಿದೆ. ಈ ಮಠ ಯಡಿಯೂರಪ್ಪನವರ ಆದೇಶವನ್ನು ಹಿಡಿದುಕೊಂಡು 'ಅತಿಕ್ರಮ ಪ್ರವೇಶ' ಮಾಡಿದೆ. ಮಠ ಮಾಡಿದ ಮೊದಲ ಕೆಲಸವೆಂದರೆ ಅಲ್ಲಿನ ಮಠದ ಸ್ವತ್ತು ಹಾಗೂ ಹಣದ ಹುಂಡಿಗಳನ್ನು ಒಡೆದು ವಶಪಡಿಸಿಕೊಂಡಿರುವುದು ಅದರ ವ್ಯಾಪಾರಿ ನಿಜ ಉದ್ದೇಶಗಳನ್ನು ಸಾರುತ್ತಿದೆ. ಎಲ್ಲಾ ಧರ್ಮಿಯರಿಗೂ ಜಾತಿ ಜನಾಂಗಗಳಿಗೂ ಮುಕ್ತ ಅವಕಾಶವಿದ್ದ ದೇವಸ್ಥಾನವನ್ನು ಕೇವಲ ಪುರೋಹಿತಶಾಹಿಗಳ ಕೈಗೊಪ್ಪಿಸಿ ಅವರು ಹೇರುವ ವೈದಿಕ ನಿರ್ಬಂಧಗಳಿಂದ ಅಲ್ಲಿನ ಭಕ್ತರಿಗೆ ಅವಕಾಶ ನಿರಾಕರಿಸುವುದರಲ್ಲಿ ಅನುಮಾನವಿಲ್ಲ. ಇಂತಹ ಪುರೋಹಿತಶಾಹಿಗಳು ರಾಜಪ್ರಭುತ್ವದ ಬಲದೊಂದಿಗೆ ಹಲವಾರು ಶೂದ್ರ, ಬುಡಕಟ್ಟುಗಳು, ಜನಸಾಮಾನ್ಯರ ಆರಾಧನಾ ಸ್ಥಳಗಳನ್ನು ತಮ್ಮ ಕೈವಶ ಮಾಡಿಕೊಂಡದ್ದು ಇತಿಹಾಸದಲ್ಲಿದೆ.

ಪ್ರಮುಖವಾಗಿ ಆರ್.ಎಸ್.ಎಸ್.ನ ಈ ಕಾರ್ಯಾಚರಣೆಯು ಕೇವಲ ಗೋಕರ್ಣಕ್ಕೆ ನಿಲ್ಲದೇ ರಾಜ್ಯದ ಅತ್ಯಂತ ಸುಪ್ರಸಿದ್ಧ ಹಾಗೂ ಒಳ್ಳೇ ಹಣದ ಆದಾಯ ಮತ್ತು ಆಸ್ತಿಪಾಸ್ತಿ, ಭಕ್ತ ಸಮೂಹ ಹೊಂದಿರುವ ದೇವಸ್ಥಾನಗಳನ್ನು ಇಂತಹ ಮಠಾಧೀಶರಿಗೆ ಕೊಡುಗೆಯ್ಯಾಗಿ ನೀಡುವ ವ್ಯವಸ್ಥಿತವಾದ ಬೃಹತ್ ಕಾರ್ಯಾಚರಣೆಗೆ ಜಾಲ ಹೆಣೆದಿದೆ. ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ, ಶಿರಸಿ ಮಾರಿಕಾಂಬ, ಮೈಸೂರಿನ ಚಾಮುಂಡಿ ದೇವಸ್ಥಾನಗಳಂತಹವುಗಳ ಖಾಸಗೀಕರಣಕ್ಕೆ ಮುಜರಾಯಿ ಇಲಾಖೆ ಮೂಲಕ ಇಂತಹ ಯೋಜನೆ ರೂಪಿಸಿದೆ. ಇದಕ್ಕಾಗಿ ಆರ್.ಎಸ್.ಎಸ್.ನ ಸ್ವಯಂಸೇವಕ ರಾಮಾಜೋಯಿಸ್ ನೇತೃತ್ವದ ಸಮಿತಿಯಿಂದ ವರದಿ ಬರೆಸಿಕೊಂಡಿದೆ. ಅದು ಮುಜರಾಯಿ ಇಲಾಖೆಯಡಿ ಇರುವ ಹಿಂದೂ ಧಾರ್ಮಿಕ ದತ್ತಿ ವ್ಯಾಪ್ತಿಯ ದೇವಸ್ಥಾನಗಳನ್ನು ಸ್ವಾಯತ್ತಗೊಳಿಸುವುದು ಎಂಬ ಖಾಸಗೀಕರಣದ ಶಿಫಾರಸು ಮಾಡಿದೆ. ವಂಶ ಪಾರಂಪರ್ಯವಾಗಿ ಪೌರೋಹಿತ್ಯವನ್ನೇ ಪ್ರತಿಪಾದಿಸಿದೆ. ಅಪಾರ ಪ್ರಮಾಣದ ಭಕ್ತರು, ಆಸ್ತಿಗಳನ್ನು ಹೊಂದಿರುವ ಇಂತಹ ದೇವಸ್ಥಾನಗಳನ್ನು ಸಂಘಪರಿವಾರದ ಜಾತಿ ಮಠಗಳಿಗೆ ಕೊಡುವ ಮೂಲಕ ಸಂಘ ಪರಿವಾರದ ಪ್ರಭಾವ ಅದರ ಪಾತ್ರ ಬಲಗೊಳಿಸುವ ಹುನ್ನಾರ ಇದರಲ್ಲಿದೆ. ಸರ್ಕಾರದ ಅಡಿಯಲ್ಲಿದ್ದರೆ ಕನಿಷ್ಠ ತೋರಿಕೆಯ ಜಾತ್ಯಾತೀತತೆಯನ್ನಾದರೂ ಪಾಲಿಸಬೇಕಿತ್ತು. ಆದರೆ ಜಾತಿ ಮಠಗಳು, ವ್ಯಕ್ತಿಗಳ ಕೈಗೆ ಇವನ್ನು ಒಪ್ಪಿಸಿದಲ್ಲಿ ಧರ್ಮಸ್ಥಳ, ಉಡುಪಿ ಮಠಗಳಂತೆ ಅವರದ್ದೇ ಕಾನೂನು ಕಾರುಬಾರು ನಿರ್ಧಾರಗಳೇ ಅಂತಿಮವಾಗಿರುತ್ತವೆ. ಇಂತಹದ್ದೇ ಸಂದರ್ಭ ಬಳಸಿಕೊಂಡು ಮಾಜಿ ರಾಜರಂಥಹ ಪಾಳೆಗಾರಿ ಶಕ್ತಿಗಳು, ಕೆಲವು ಮಠಾಧೀಶರು ತಮಗೆ ಇಂತಹ ದೇವಸ್ಥಾನ ಕೊಡಿ ಎಂದು ಬೇಡಿಕೆ ಮಂಡಿಸುತ್ತಿದ್ದಾರೆ. ಮಠಾದೀಶರನ್ನು ಓಲೈಸಿಕೊಂಡು ಸತತವಾಗಿ ಯತ್ನಿಸುತ್ತಿರುವ ಈ ಸರ್ಕಾರ ಈ ಮೂಲಕ ಜಾತಿಗಳ ಓಲೈಕೆಗೂ ಮುಂದಾಗುತ್ತಿದೆ.

ಆರ್ಥಿಕ ಉದಾರೀಕರಣದ ಉಗ್ರ ಪ್ರತಿಪಾದಕರಾಗಿರುವ ಬಿಜೆಪಿಯು ರಾಜ್ಯದಲ್ಲಿನ ಸಾರ್ವಜನಿಕ ಉಸ್ತುವಾರಿಯ, ದೇವಸ್ಥಾನಗಳನ್ನು ಖಾಸಗೀಕರಿಸುತ್ತಿರುವುದು ಅಪಾಯಕಾರಿಯಾಗಿದೆ. ಇದು ಹಿಂದೂಗಳ ಧಾರ್ಮಿಕ ಹಿತಾಸಕ್ತಿಗಳಿಗೂ ಪರಂಪರೆಗೂ ವಿರುದ್ಧವಾಗಿದೆ ಹಾಗೂ 'ಹಿಂದುತ್ವ'ದ ಶಕ್ತಿಗಳ ಹಿಡಿತಕ್ಕೆ ಅವಕಾಶ ಕಲ್ಪಿಸುತ್ತಿದೆ ಎಂಬುದನ್ನು ಗಮನಿಸಿ, ಪ್ರತಿಭಟಿಸಬೇಕು. ಸರ್ಕಾರದ ಈ ಪ್ರಕ್ರಿಯೆಯು ಮುಜರಾಯಿ ಇಲಾಖೆಯನ್ನೇ ಅಪ್ರಸ್ತುತಗೊಳಿಸುತ್ತದೆ. ಇನ್ನೊಂದೆಡೆಯಲ್ಲಿ ಬಾಬಾಬುಡನ್‌ಗಿರಿಯಂತಹ ಪ್ರಕರಣಗಳಲ್ಲಿ ಮುಜರಾಯಿ ಇಲಾಖೆಯನ್ನೇ ತನ್ನ ವಿಧ್ವಂಸಕ ಉದ್ದೇಶಕ್ಕೆ ಬಳಸುತ್ತಿದೆ. ಸರ್ಕಾರ ಈಗಿನ ತನ್ನ ಅತಿಕ್ರಮಣದ ಪ್ರಯತ್ನಗಳನ್ನು ಕೂಡಲೇ ನಿಲ್ಲಿಸಬೇಕು. ದೇವಸ್ಥಾನಗಳು ಸಾರ್ವಜನಿಕ ಮುತುವರ್ಜಿಗೆ ಸರ್ಕಾರದ ಕಾನೂನು ವ್ಯಾಪ್ತಿಗೆ ಒಳಪಡುವಂತಾಗಬೇಕು. ಅಲ್ಲಿನ ಸ್ವರೂಪವನ್ನು ಕಾಯ್ದುಕೊಳ್ಳುತ್ತಲೇ ಸಾರ್ವಜನಿಕವಾಗಿ ಹೆಚ್ಚು ಹೆಚ್ಚು ತೆರೆದುಕೊಳ್ಳುವಂತಾಗಬೇಕು. ಅಲ್ಲಿ ಅವ್ಯವಹಾರ ನಿರ್ಲಕ್ಷ್ಯತನಗಳಿದ್ದಲ್ಲಿ ಅದನ್ನು ಸರಿಪಡಿಸಲು ಸರ್ಕಾರ ಕ್ರಮವಹಿಸಬೇಕು.


ಬಿಜೆಪಿ ಆಡಳಿತವನ್ನು ಬಳಸಿ ಸಂಘಪರಿವಾರವು ಜಾತಿಗಳ ಓಲೈಕೆಗೂ ಹಾಗೂ ಫ್ಯಾಸಿಸ್ಟ್ ಅಜೆಂಡಾ ಜಾರಿಗೊಳಿಸುವ ಪ್ರಯತ್ನಗಳ ವಿರುದ್ಧ ಜನತೆ ಪ್ರತಿರೋಧಿಸಬೇಕು.

ಅಧಿಕಾರದಲ್ಲುಳಿಯಲು ನಿರ್ಲಜ್ಜತನ



ಎಸ್.ವೈ.ಗುರುಶಾಂತ್

ಅಧಿಕಾರ ಹಿಡಿದುಕೊಂಡಿರುವ ಬಿಜೆಪಿ ನಾಯಕರ ಮನಸ್ಸಿನಲ್ಲಿ ಏನಿದೆ? ರಾಜ್ಯದ - ದೇಶದ ಜನರಿಗೆ ಏನು ಮಾಡಬಯಸುತ್ತಾರೆ? ಬಾಯಲ್ಲೇನೋ ಅಭಿವೃದ್ಧಿಯ ಮಂತ್ರ ಜಪಿಸುತ್ತಿರುವುದು ನಿಂತಿಲ್ಲ. ಆದರೆ ಕೃತಿಯಲ್ಲಿ ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿದೆ. ಜನತೆ ಒಂದೆಡೆ ಬೆಲೆಯೇರಿಕೆ, ಅಗತ್ಯ ವಸ್ತುಗಳ ದುಬಾರಿ-ಅಲಭ್ಯತೆ, ಬರಗಾಲ-ನೆರೆಹಾವಳಿ, ನೀಗದ ಗೊಬ್ಬರ ಬೀಜಗಳ ಸಮಸ್ಯೆ, ಫಸಲಿಗೆ ಸಿಗದ ನ್ಯಾಯ ಬೆಲೆ, ಸಂಕಷ್ಟ ಪರಿಹರಿಸಿ ಎಂದು ಶಾಂತ ರೀತಿಯಲ್ಲಿ ಪ್ರತಿಭಟಿಸಿದರೂ ಪೊಲೀಸರ ಲಾಠಿ ಚಾರ್ಜ್, ಗೋಲಿಬಾರ್, ನಿಲ್ಲದ ಕ್ರಿಮಿನಲ್ ಕೃತ್ಯಗಳು, ಜನರ ದನಿ, ಚಳುವಳಿ ಅದುಮಲು ಪೊಲೀಸ್ ದೌರ್ಜನ್ಯಗಳು, ಭಯೋತ್ಪಾದನೆ ಕರಿನೆರಳು, ಕೋಮು ಸೌಹಾರ್ದತೆಗೆ ಸಂಚಕಾರ ತರುವ ಕೃತ್ಯಗಳು, ಶಿಕ್ಷಣದ ವ್ಯಾಪಾರೀಕರಣ, ಕೋಮುವಾದೀಕರಣದ ಹುನ್ನಾರ, ಕೇಳದ ರೈತ



ಕೂಲಿಕಾರರ ಅಹವಾಲುಗಳು, ಮಾಲೀಕರ ಓಲೈಕೆಗೆ ಕ್ರಮಗಳು ಹೀಗೆ ಪಟ್ಟಿಯು ಬೆಳೆಯುತ್ತಲೇ ಹೋಗುತ್ತದೆ. ಆದರೆ ಇವಾವುಗಳ ಪರಿವೇ ಇಲ್ಲದಂತೆ 'ನೂರುದಿನಗಳ' ಆಡಳಿತದ ಆಚರಣೆಯ ಸಂಭ್ರಮದ ಸಿದ್ಧತೆಗೆ ಯಡಿಯೂರಪ್ಪ ಸಿದ್ಧರಾಗುತ್ತಿದ್ದಾರೆ.

ಕೈ ಬಿಡದ ಹಿಂದುತ್ವ

ಮೊನ್ನೆ ಬೆಂಗಳೂರಿನಲ್ಲಿ 19 ರಂದು ನಡೆದ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಜನರ ಇಂತಹ ಸಂಕಷ್ಟಗಳ ಒಂದು ಎಳೆಯೂ ಅಲ್ಲಿ ಪ್ರಸ್ತಾಪಿತವಾಗಿಲ್ಲ. ಮುಖ್ಯಮಂತ್ರಿ ಈ ಬಗ್ಗೆ ಮಾತನಾಡಲಿಲ್ಲ. ಬಿಜೆಪಿ ಅಧ್ಯಕ್ಷರೂ ಚಕಾರವೆತ್ತಲಿಲ್ಲ. ಅವರೆಲ್ಲರ ಧ್ಯಾನವಿದ್ದದ್ದು, ಮುಂಬರುವ ಲೋಕಸಭಾ ಚುನಾವಣೆಯ ಮೇಲೆಯೇ. ಕನಿಷ್ಟ 25 ಸ್ಥಾನಗಳನ್ನು 'ಹೇಗಾದರೂ' ಗೆಲ್ಲಬೇಕು ಎಂಬುದರ ಮೇಲೆಯೆ. 'ಹೇಗಾದರೂ ಗೆದ್ದು ಅಡ್ವಾನಿಯನ್ನು ಪ್ರಧಾನಿ ಮಾಡಬೇಕು, ಅದಕ್ಕೆ ಕೆಲಸ ಮಾಡಿ' ಎಂದರು ಯಡಿಯೂರಪ್ಪನವರು.

ಇಂತಹ ಮಹಾಗುರಿಸಾಧನೆಗೆ ಹಾದಿ ಹಾಕಿಕೊಟ್ಟವರು ರಾಷ್ಟ್ರೀಯ ಅಧ್ಯಕ್ಷ ರಾಜನಾಥಸಿಂಗ್‌ರವರು 'ಹಿಂದುತ್ವ ಅಜೆಂಡಾವನ್ನು ಕೈಬಿಡುವುದಿಲ್ಲ. ಅದೇ ಆಧಾರದಲ್ಲಿ ಚುನಾವಣೆ ಹೋರಾಟ ನಡೆಯಲಿದೆ ಎಂದು ಹೇಳಿದರು. ಅಣು ಒಪ್ಪಂದ, ಬೆಲೆಯೇರಿಕೆ ಇತ್ಯಾದಿಗಳಿಗಿಂತ ಜನರನ್ನು ವಿಭಜಿಸಿ, ಉದ್ರೇಕಿಸಿ ಮತಪಡೆದು ಅಧಿಕಾರಕ್ಕೆ ತರುವುದು! ಅಂದರೆ ಇನ್ನೂ ಬಿಜೆಪಿ ಬತ್ತಳಿಕೆಯಲ್ಲಿ ಹಿಂದುತ್ವ ಜಾರಿಗೆ ಏನೇನು ಅಸ್ತ್ರಗಳಿವೆಯೋ ಆತಂಕದಿಂದಲೇ ನೋಡಬೇಕು.

ಅಧಿಕಾರದಲ್ಲಿರಲು ಯಡ್ಡಿ ಡೀಲ್

ಮುಖ್ಯಮಂತ್ರಿ ಯಡಿಯೂರಪ್ಪ ಕೊನೆಗೂ ಸತ್ಯವನ್ನು ಹೊರಗೆ ಹಾಕಿದ್ದಾರೆ. ನಮ್ಮ ಸರ್ಕಾರ ಭದ್ರವಾಗಿರಲು 120 ಶಾಸಕರು ಬೇಕು. ಅಲ್ಲಿಯವರೆಗೂ 'ಆಪರೇಷನ್ ಕಮಲ' ನಡೆದು ಬೇರೆ ಪಕ್ಷಗಳ ಶಾಸಕರನ್ನು ಸೆಳೆಯುವುದು ನಡೆಯುತ್ತದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಿರ್ಲಜ್ಜತನದಿಂದ ಒಂದಂಶವನ್ನು ಒಪ್ಪಿಕೊಂಡರು. "ವಿರೋಧ ಪಕ್ಷಗಳ ನಾಯಕರು ಬಾಯಿ ಮುಚ್ಚಿಕೊಂಡಿದ್ದರೆ ನಾವು ಸುಮ್ಮನಿರುತ್ತಿದ್ದೆವು" ಅಂದರೆ ವಿರೋಧಪಕ್ಷಗಳು ಏನೂ ಮಾತನಾಡದೇ, ಮಾಡದೇ ಸುಮ್ಮನಿರಬೇಕು. ಅಧಿಕಾರ ಉಳಿಸಿಕೊಳ್ಳಲು ಪಕ್ಷಗಳನ್ನು ಒಡೆಯುವುದು, ಹಾಗೂ ಆಮಿಷ ಒಡ್ಡಿ ಅಧಿಕಾರ ಆಶೆ ಹಚ್ಚಿ ಅಕ್ರಮವಾಗಿ ಸೆಳೆಯುವುದು ಅವರ ಜನ್ಮಸಿದ್ಧ ಹಕ್ಕು. ಹೀಗೆ ಹೇಳುವ ಮೂಲಕ ಯಡಿಯೂರಪ್ಪನವರು ಹಿಂದೆ ತಾವೇ ಹೇಳುತ್ತಿದ್ದ "ಶಾಸಕರು ಬಿಜೆಪಿ ಮೆಚ್ಚಿ ಬರುತ್ತಿದ್ದಾರೆ. ತತ್ವ ಸಿದ್ಧಾಂತಗಳಿಗೆ ಮನಸೋತಿದ್ದಾರೆ. ಇದರಲ್ಲಿ ತಮ್ಮದೇನೂ ಕೈವಾಡ ಇಲ್ಲ". ಎಂದೆಲ್ಲಾ ಸಾರ್ವಜನಿಕ ಸಮಜಾಯಿಷಿ ಕೊಟ್ಟು ಓಡಾಡುತ್ತಿದ್ದರು. ಅದು ಸುಳ್ಳು ಎಂಬುದು ಈಗ ಅವರೇ ಒಪ್ಪಿಕೊಂಡಿದ್ದಾರೆ. ಇನ್ನು ಹೀಗೆ ವಲಸೆ ಹೋಗುವ ಶಾಸಕರೋ.... ಆರಿಸಿದ ಜನತೆಗೆ

ಪುಟ 4 ಕ್ಕೆ

ಅಧಿಕಾರದಲ್ಲುಳಿಯಲು ನಿರ್ಲಜ್ಜತನ


ಪುಟ 3 ಕ್ಕೆ

ದ್ರೋಹ ಬಗೆದು, ಶಾಸಕರಾಗಿ ಆರಿಸಿ, ಮಾನ್ಯತೆ ತಂದದ್ದನ್ನೇ ಮಾರಾಟಕ್ಕೆ ಇಟ್ಟಿದ್ದಾರೆ. ಇಂತಹ ಪಕ್ಷಾಂತರಗಳ ಹಿಂದೆ ಹಲವಾರು ಡೀಲ್‌ಗಳಿರುವುದು ಗುಟ್ಟೇನಲ್ಲ. ಇಲ್ಲಿ ಹಣ, ಅಧಿಕಾರ ಆಮಿಷಗಳ ವ್ಯವಹಾರಗಳೇ ಇವೆ.

ಈ ವಾರದಲ್ಲೇ ಪುನಃ ಕುಖ್ಯಾತ 'ಆಪರೇಷನ್ ಕಮಲ' ಆರಂಭಗೊಂಡಿದೆ. ಜೆಡಿ(ಎಸ್)ನ ಉಮೇಶ ಕತ್ತಿ ಬಿಜೆಪಿಗೆ ಸೇರ್ಪಡೆಗೊಂಡಿದ್ದಾರೆ. ಇನ್ನು ಕಾಂಗ್ರೆಸ್‌ನ ವಿ.ಸೋಮಣ್ಣ, ಗುರುಪಾದಪ್ಪ ನಾಗಮಾರಪಲ್ಲಿ, ಬಾಬುರಾವ್ ಚಿಂಚನ್ಸೂರ್, ಜೆಡಿ(ಎಸ್)ನ ದಿನಕರಶೆಟ್ಟಿ, ಸುನಿಲ್ ಹೆಗಡೆ ಮುಂತಾದವರ ತಂಡ ಪಯಣ ಬೆಳೆಸುವ ವದಂತಿಗಳಿವೆ. ಈಗಾಗಲೇ ಮಾಜಿ ಸಚಿವ ಚೆನ್ನಿಗಪ್ಪನವರ ಪುತ್ರ ಬಿಜೆಪಿಯೊಂದಿಗೆ ಲೀನವಾಗಿದ್ದು ಚೆನ್ನಿಗಪ್ಪನವರೂ ಅತ್ತ ಗುಳೇ ಹೊರಟಿದ್ದಾರೆ. ಹೀಗಾಗಿ ಅಂತಹವರೊಂದಿಗೆ ನಡೆಯುತ್ತಿರುವ ಡೀಲ್ ಅನುಸರಿಸಿ ಅವರುಗಳನ್ನು ಮಂತ್ರಿಗಳನ್ನಾಗಿಸಬೇಕಾಗುತ್ತದೆ. ಆದರೆ ಈಗಾಗಲೇ ಮಂತ್ರಿಮಂಡಲ ಹೊಟ್ಟೆ ಬಿರಿಯುತ್ತಿದೆ. ಆದ್ದರಿಂದಲೇ ಕೆಲವು ಮಂತ್ರಿಗಳನ್ನು ಖಾಲಿ ಮಾಡಿಸುವ ಆಪರೇಷನ್ ಆರಂಭವಾಗಿದೆ. ಅದರಲ್ಲಿ ರಾಮಚಂದ್ರಗೌಡ, ಕೃಷ್ಣಯ್ಯಶೆಟ್ಟಿ, ಎಸ್.ಕೆ.ಬೆಳ್ಳುಬ್ಬಿ, ನಿರಾಣಿಯವರ ಸಚಿವ ಸ್ಥಾನ ಖಾಲಿ ಮಾಡಿಸಲು ಯತ್ನ ಆರಂಭಗೊಂಡಿವೆ. ಇದು ಬಿಜೆಪಿಯೊಳಗೆ ಭಿನ್ನಮತವನ್ನು ಹೆಚ್ಚಿಸಿದೆ. ಸಚಿವರನ್ನು ಖಾಲಿ ಮಾಡಿಸುವ ಪ್ರಯತ್ನಗಳ ವಿರುದ್ಧ ಬಿಜಾಪುರದಲ್ಲಿ ಬೆಳ್ಳುಬ್ಬಿ ಬೆಂಬಲಿಗರು ಹಿಂಸಾಚಾರಕ್ಕೆ ಇಳಿದಿದ್ದಾರೆ, ಸಾರ್ವಜನಿಕ ಆಸ್ತಿ ನಾಶ ಮಾಡಿದ್ದಾರೆ. ಮಂತ್ರಿಯಾಗಲು ಸಾರ್ವಜನಿಕ ಆಸ್ತಿ ನಾಶ, ದೊಂಬಿ, ಸಚಿವ ಸ್ಥಾನ ಬಿಡಲೂ ದೊಂಬಿ, ನಾಶ... ಇದು ಶಿಸ್ತುಬದ್ಧ ಪಕ್ಷದ, ತ್ಯಾಗ ಬಲಿದಾನಗಳ ನಾಯಕರ ವೈಖರಿ! ನೂರು ದಿನ ಪೂರೈಸುವುದರೊಳಗೆ ಎಷ್ಟೆಲ್ಲಾ ಅವಾಂತರಗಳು, ಅನಾಹುತಗಳು... ನಾಚಿಕೆಗೇಡಿನ ವರ್ತನೆಗಳು.

ಮುಷ್ಕರ- ಹರತಾಳ ವಿಫಲಗೊಳಿಸಲು ಪೊಲೀಸರ ಯತ್ನ : ಆದರೂ ಅಭೂತಪೂರ್ವ ಯಶಸ್ಸು

ಅಂದಿನ ಬೆಳಗು ಶಾಂತವಾಗಿತ್ತು. ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಹಾಗೂ ಕುಡಿಯುವ ನೀರಿನ ದುಬಾರೀಕರಣ-ಖಾಸಗೀಕರಣದ ವಿರುದ್ಧದ


ಮಂಗಳೂರಿನಲ್ಲಿ ಬಿ.ಮಾಧವರ ಬಂಧನ

ಹರತಾಳದ ಕರೆಗೆ ಮಂಗಳೂರು ಜನರು ಸ್ಪಂದಿಸಿದ್ದರು. ಎಂದಿನಂತೆ ಮುಷ್ಕರಕ್ಕೆ ಕರೆ ನೀಡಿದ್ದ ಸಿಐಟಿಯು, ಡಿವೈಎಫ್ಐ ಮುಂತಾದ ಸಂಘಟನೆಗಳ ಕಾರ್ಯಕರ್ತರು ರಸ್ತೆಗಳಲ್ಲಿ ಸಂಚರಿಸಿ ಹರತಾಳ ಯಶಸ್ವಿಗೊಳಿಸಲು ಮನವಿ ಮಾಡುತ್ತಿದ್ದರು. ಕೆಲವು ನಿಮಿಷಗಳ ರಸ್ತೆ ತಡೆಯನ್ನು ನಡೆಸಿದರು. ಆದರೆ ಇದು ಪೊಲೀಸರಿಗೆ ಸರಿಬೀಳಲಿಲ್ಲ. ನೀರಿನ ಹೋರಾಟದಲ್ಲೇ ಬಿಜೆಪಿಯ ಈ ಕಾಲಾಳುಗಳು ಹೇಗೆಲ್ಲಾ ದೌರ್ಜನ್ಯ ನಡೆಸಿದವರಲ್ಲವೇ/ ಅದಾದ ಕೆಲವೇ ದಿನಗಳಲ್ಲಿ ಈ ಹೋರಾಟದಲ್ಲಿ ಸಂಘಟನೆಗಳು ಇಂತಹ ಅಪೂರ್ವ ಜನಸ್ಪಂದನ ಗಳಿಸುವುದೆಂದರೇನು? ಸಹಿಸಲು ಅಸಾಧ್ಯವಾಯ್ತು ಅವರಿಗೆ. ಆದ್ದರಿಂದ ಅಲ್ಲಿ ಕಾರ್ಯಕರ್ತರನ್ನು ಮನಬಂದಂತೆ ಎಳೆದು ವ್ಯಾನ್‌ಗೆ ತುಂಬಿ ಠಾಣೆಗೆ ಕರೆದೊಯ್ದರು. ಸಿಪಿಐ(ಎಂ)ನ ದ.ಕ ಜಿಲ್ಲಾ ಕಾರ್ಯದರ್ಶಿಗಳು, ಸಿಐಟಿಯು ರಾಜ್ಯಾಧ್ಯಕ್ಷರಾದ ಬಿ.ಮಾಧವ, ಡಿವೈಎಫ್ಐ ರಾಜ್ಯ ಅಧ್ಯಕ್ಷ ಸುನಿಲ್‌ಕುಮಾರ್ ಬಜಾಲ್, ಮುನೀರ್ ಕಾಟಿಪಳ್ಳ ಕಾರ್ಮಿಕ ನಾಯಕ ವಸಂತ ಆಚಾರಿ, ಸಂತೋಷ್, ಮಹ್ಮದ್ ಸಾಲಿ ಇತರರ ಮೇಲೆ ದಂಗೆ ಇತ್ಯಾದಿ ಸುಳ್ಳು ಆರೋಪ ಹೊರಿಸಿ ದಿನವಿಡೀ ಠಾಣೆಯಲ್ಲೇ ಕುಳ್ಳಿರಿಸಿ ಸೇಡು ತೀರಿಸಿಕೊಂಡರು. ಆದರೆ ಇಂತಹ ಹತಾಶೆ ಯತ್ನಗಳ ನಡುವೆಯೂ ಸಾರ್ವತ್ರಿಕ ಮುಷ್ಕರವನ್ನು 'ಬಂದ್' ಆಗಿ ಪರಿವರ್ತನೆಗೊಳಿಸಿ ಜನತೆ ಯಶಸ್ವಿಗೊಳಿಸಿದರು. ○

ಅಕ್ರಮ ಗಣಿಗಾರಿಕೆ, ಲೂಟಿ ವಿರುದ್ಧ ಆಂದೋಲನ.

ಅಕ್ರಮ ಗಣಿಗಾರಿಕೆ ಗಣಿ ಲೂಟಿಯ ವಿರುದ್ಧ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ)ದಿಂದ ಇದೇ ಆಗಸ್ಟ್ 10ರಂದು ಹೊಸಪೇಟೆಯಲ್ಲಿ ಕಾರ್ಯಗಾರ ನಡೆಸಲಾಯಿತು.

ಕಾರ್ಯಗಾರವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ವಿಭಾಗದ ಮುಖ್ಯಸ್ಥರಾದ ಡಾ||ಟಿ.ಆರ್.ಚಂದ್ರಶೇಖರ್ ಉದ್ಘಾಟಿಸಿದರು. ಕಾಂ||ಜಿ.ಎನ್. ನಾಗರಾಜ್, ಕಾಂ||ಎಸ್.ಪ್ರಸನ್ನಕುಮಾರ್, ಕಾಂ||ಯು.ಬಸವರಾಜ್‌ರವರು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

ಅಕ್ರಮ ಗಣಿಗಾರಿಕೆ ಹಾಗೂ ಲೂಟಿ ವಿರುದ್ಧ, ರಫ್ತಿಗೆ ನಿರ್ಭಂಧವಿಧಿಸಿ, ಕೈಗಾರಿಕೆ ಸ್ಥಾಪಿಸಿ, ಉದ್ಯೋಗ ಸೃಷ್ಟಿಸಲು, ಹಾಗೂ ಪರಿಸರ ಹಾನಿ ತಡೆಯಲು, ಮುಂತಾದ ಪ್ರಮುಖ ಪ್ರಶ್ನೆಗಳಾಧಾರದಲ್ಲಿ ಪ್ರಬಲ ಆಂದೋಲನ ರೂಪಿಸಲು ಡಿ.ವೈ.ಎಫ್.ಐ ನಿರ್ಧರಿಸಿದೆ. ಅದರಂತೆ ಎಲ್ಲಾ ಜಿಲ್ಲೆಗಳಲ್ಲಿಯೂ ಸಮಾವೇಶಗಳು ಆಗಸ್ಟ್ 21ರಿಂದ ಸೆಪ್ಟಂಬರ್-15ರವರೆಗೆ, ಸೆಪ್ಟಂಬರ್ ಕೊನೆವಾರ ಎಲ್ಲಾ ತಾಲ್ಲೂಕು-ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನಾ ಮೆರವಣಿಗೆ-ಧರಣಿ, ಅಕ್ಟೋಬರ್‌ನಲ್ಲಿ ರಾಜ್ಯ ಮಟ್ಟದ ಜಾಥಾ, ಬಳ್ಳಾರಿಯಲ್ಲಿ ರ್‍ಯಾಲಿ-ಬಹಿರಂಗ ಸಭೆ ನಡೆಸಲು ನಿರ್ಧರಿಸಿದೆ.

ಶಿವನ ಆತ್ಮಲಿಂಗಕ್ಕೆ ಬಹಳ ಸಂತೋಷವಾಗಿರುತ್ತದೆ ಬಿಡಿ

ನನಗೆ ಯಾರು ಮತ ಹಾಕಿದ್ದಾರೋ ಅವರಿಗೆ ಕೆಲಸ ಮಾಡಿಕೊಡುತ್ತೇನೆ. ಮತ ಕೊಡದವರು ಯಾರು ಎಂಬುದು ಈಗಾಗಲೇ ಗೊತ್ತಿದೆ. ಅವರಿಗೆ ತಕ್ಕ ಪಾಠ ಕಲಿಸುತ್ತೇನೆ ಎಂದು ಕಾರ್ಮಿಕ ಸಚಿವ ಬಚ್ಚೇಗೌಡರು ಹೇಳಿದ್ದಾರೆ. ಕೊಟ್ಟಿದ್ದು ಕಡಿಮೆ ಆಯಿತಾ ಅಥವಾ ಬುದ್ಧಿಭ್ರಮಣೆ ಆಯ್ತಾ ಎಂದು ಮತದಾರರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

• ಏ ಶಹಬ್ಬಾಸ್ ಕಣ್ರೀ, ಬಚ್ಚಾ ಅಂದ್ರೆ ನೀವೇ ಕಣ್ರೀ, ಸನ್ಮಾನ್ಯ ಇಂಧನ ಸಚಿವರ ಜತೆ ಸ್ಪರ್ಧೆಗೆ ಇಳಿದ ಹಾಗೆ ನೀವೂ ಸತ್ಯ ಹೇಳ್ತಿದೀರ, ವೆರಿ ಗುಡ್! ಒಂದೊಂದು ಓಟಿಗೂ ಎಷ್ಟು ಬಿಸಾಕಿದೀರ ಅಂತ ಹೇಳಿ ಬಿಡಿ. ಹಾಗೆ ಬಿಸಾಕಿದ ದುಡ್ಡನ್ನು ಎಷ್ಟುದಿನದಲ್ಲಿ ವಾಪಸ್ ತೆಗಿತೀರ ಅಂತನೂ ಹೇಳೀಬಿಡ್ರೀ ಅದ್ರಲ್ಲೇನೀಗ. ಅಲ್ಲರೀ ನಿಮಗೆ ಮತ ಕೊಡದೆ ಇರೋರು ಅಂದ್ರೇನು? ಪ್ರಜಾಪ್ರಭುತ್ವದಲ್ಲಿ ಬೇರೆಯವರಿಗೆ ಓಟ್ ಹಾಕೋದು ಅಂದ್ರೇನು? ವಿರೋಧ ವ್ಯಕ್ತ ಪಡಿಸೋದು ಅಂದ್ರೇನು? ಛೇ! ಕಲುಸ್ರೀ ಕಲುಸ್ರೀ ಸರ್‍ಯಾಗಿ ಪಾಠ ಮತದಾರರಿಗೆ. ನಿಮಗೆ ಕಾರ್ಮಿಕ ರತ್ನ ಏನು ಬೀಜೇಪಿ ಬಂಗಾರ ಅಂತಲೇ ಪ್ರಶಸ್ತಿ ಕೊಡಬಹುದು ಬಿಡ್ರೀ.

• ಗೋಕರ್ಣ ದೇವಸ್ಥಾನ ರಾಮಚಂದ್ರಾಪುರ ಮಠಕ್ಕೆ.

• ಗುರು ಕಾಣಿಕೆ ಅಂದ್ರೆ ಇದಪ್ಪ. ನಿಯತ್ತಿನ ಸರ್ಕಾರ ಅಂದ್ರೆ ಇದು. ಗುರುಗಳ ಋಣ ತೀರಿಸಲು ಇದಕ್ಕಿಂತ ಉತ್ತಮ ದಾರಿಯಿದೆಯೆ ? ಪ್ರತಿ ವರ್ಷ ಬಜೆಟ್ಟಿನಲ್ಲಿ ಅಷ್ಟೋ ಇಷ್ಟೋ ಕೋಟಿ ಹಣವನ್ನು ಮಠಗಳಿಗೆ ಭಿಕ್ಷೆ ಹಾಕುವ ಬದಲು , ಮಠಗಳಿಗೆ ಒಳ್ಳೊಳ್ಳೆ ಆದಾಯದ ದೇವಸ್ಥಾನಗಳನ್ನು ಕಾಣಿಕೆಯಾಗಿ ಕೊಟ್ಟು ಬಿಟ್ಟರೆ ಅವುಗಳಿಗೆ ಶಾಶ್ವತ ಆದಾಯದ ಮೂಲವಾಗುತ್ತದೆ ಬಿಡಿ. ಇನ್ನು ಆ ಮಠದ ಗುರುಗಳ ಆಶೀರ್ವಾದವೂ ಶಾಶ್ವತವಾಗಿರುತ್ತದೆ.

• ಹಾಗೇ ಇನ್ನು ಮುಂದೆ ಕಂಪನಿಗಳ ಅಕ್ವಿಸಿಷನ್ನು, ಮರ್ಜರುಗಳ ಹಾಗೆ ಬೇರೆ ಬೇರೆ ಮಠ ದೇವಸ್ಥಾನಗಳ ಅಕ್ವಿಸಿಷನ್ನು ಮರ್ಜರು ನಡೆಯಬಹುದು. ತಪ್ಪೇನಿಲ್ಲಬಿಡಿ. ಎಲ್ಲಾ ಕಾಲಧರ್ಮ. ಮಠಗಳಿಗೆ ಸ್ಪೆಷಲ್ ಎಕನಾಮಿಕ್ ಜೋನ್‌ಗಳನ್ನು ಮಾಡಿಕೊಟ್ಟರೂ ಆಗಬಹುದು.

• ರಾಮಚಂದ್ರಾಪುರದ ಮಠದ ಶಿಷ್ಯರು ಬಲವಂತವಾಗಿ ಮಠಕ್ಕೆ ನುಗ್ಗಿ ಮೊದಲು ಹುಂಡಿಗೆ ಕೈಯಿಕ್ಕಿದ್ದಾರೆ. ಸರಿಯಾದ ಕ್ರಮನೇ ಬಿಡಿ. ಮಠ ಪಡಕೊಂಡ ಉದ್ದೇ?ಶವಾದರೂ ಏನು? ಶಿವನ ಆತ್ಮಲಿಂಗಕ್ಕೆ ಬಹಳ ಸಂತೋಷವಾಗಿರುತ್ತದೆ ಬಿಡಿ. ಅಂಥ ದುಷ್ಟ ರಾವಣನ ಕೈಯಿಂದ ತಪ್ಪಿಸಿಕೊಂಡು ಇಂಥ ಪುಣ್ಯಾತ್ಮರ ಸನ್ನಿಧಾನ ಸೇರಿದ್ದಕ್ಕೆ.

ಶ್ರೀ

• ಆಪರೇಷನ್ ಕಮಲಕ್ಕೆ ಇನ್ನಷ್ಟು ಶಾಸಕರು ಬಲೆಗೆ.

• ಆಪರೇಷನ್ ಕಮಲ ಸಕ್ಸಸ್ , ಬಟ್ ಬಿಜೆಪಿ ಮಿನಿಷ್ಟರ್ಸ್ ಆ ರ್ ಡೈಯಿಂಗ್! ಶಾಸಕ ಸ್ಥಾನ ತ್ಯಾಗ ಮಾಡಿ ಬಂದ ತ್ಯಾಗ ಮೂರ್ತಿಗಳಿಗೆ ಬಿಜೆಪಿಯ ಮಂತ್ರಿಗಳು ತಮ್ಮ ಸ್ಥಾನ ತ್ಯಾಗ ಮಾಡಬೇಕಾಗ ಬಹುದೆಂಬ ಸೂಚನೆಯನ್ನು ಮುಖ್ಯ ಮಂತ್ರಿಗಳು ನೀಡಿದ್ದಾರಂತೆ. ಇದನ್ನು ತಾಳಲಾರದೆ ಬಿಜೆಪಿ ಮಂತ್ರಿಗಳ ಹೊಟ್ಟೆಯ ಉರಿ ಅವರ ಶಿಷ್ಯರ ಮೂಲಕ ಬಸ್ಸುಗಳನ್ನೇ ಸುಡುತ್ತಿದೆ.!

• ಜೆಡಿ ಎಸ್ ನ ಚೆನ್ನಿಗರಾಯರೂ ಕಮಲದ ಬಲೆಗೆ.

• 'ಚಲುವಾಂತ ಚೆನ್ನಿಗನೆ ನಲಿದಾಡು ಬಾ' ಎಂದು ದೇವೇಗೌಡರ ಮಾನಸಪುತ್ರನನ್ನೇ ಕಮಲದ ಮಡಿಲಿಗೆ ಸೆಳೆದಿದ್ದೀರಲ್ರೀ. ಅಂತೆಯೇ ದೇವೇಗೌಡರ ನಿಜ ಪುತ್ರರನ್ನೂ ಕಮಲಕ್ಕೆ ಸೆಳೆದುಬಿಟ್ಟರೆ ಅಲ್ಲಿಗೆ ಆಪರೇಷನ್ ಕಮಲ ಸಂಪೂರ್ಣವಾಗಬಹುದು. ಆದರೆ ಅವರಿಗೆ ಸೂಕ್ತ ಸ್ಥಾನಮಾನ ಕಲ್ಪಿಸಲು ಸನ್ಮಾನ್ಯ ಮುಖ್ಯಮಂತ್ರಿಯವರೇ ತಾವೇ ತಮ್ಮ ಸ್ಥಾನ ತ್ಯಾಗ ಮಾಡುವ ಪ್ರಸಂಗ ಬಂದರೆ? ಹುಷಾರಾಗಿರಿ, ದೇವೇಗೌಡರು ಧೂಳಿನಿಂದ, ಮಣ್ಣಿನಿಂದ ಎಲ್ಲ ಎದ್ದು ಬಂದಿದ್ದಾರೆ. ಈ ಬಾರಿ ಕಮಲದ ಕೆಸರಿನಿಂದಲೇ ಎದ್ದು ಬರಬಹುದು.

ಬಿಜೆಪಿಯಲ್ಲಿ ಹೀಗೆ ಸ್ಥಾನ, ಮಾನ(?) ಸಿಗುತಿರುವುದನ್ನು ಕಂಡು, ಕಾಂಗ್ರೆಸ್ ನಲ್ಲಿ ಇಷ್ಟು ದಿನವಾದರೂ ಸೂಕ್ತ ಸ್ಥಾನ ಮಾನ ಸಿಗದ ಸಿದ್ದರಾಮಯ್ಯನವರು ಪರದಾಡುತ್ತಿದ್ದಾರೆ. ದೇವೇಗೌಡರು ಕೊಟ್ಟಿರುವ ಸೆಪ್ಟೆಂಬರ್ ಒಂದರ ಗಡುವು ನಿಮಗೇನೂ ಅಪ್ಲೈ ಆಗೋಲ್ಲ ಕಣ್ರೀ, ಟೇಕ್ ಇವರ್ ಓನ್ ಟೈಮ್. •

ಜನಶಕ್ತಿ
ಕನ್ನಡ ವಾರಪತ್ರಿಕೆ


ಇವರಿಗೆ ಪ್ರಜಾಪ್ರಭುತ್ವ ಮೌಲ್ಯಗಳಲ್ಲಿ ಕಿಂಚಿತ್ತಾದರೂ ನಂಬಿಕೆ ಇಲ್ಲ ಎಂಬುದಕ್ಕೆ ಎಲ್ಲಾ ಸಾಕ್ಷಿಗಳೂ ಒಟ್ಟೊಟ್ಟಿಗೆ ಸಿಗತೊಡಗಿವೆ. ಈ ರಾಜ್ಯದಲ್ಲಿ ಏನಾಗುತ್ತಿದೆ?

ಬಿಜೆಪಿಯಿಂದ ಪ್ರಜಾಪ್ರಭುತ್ವಕ್ಕೆ ಕುತ್ತು

ನಿತ್ಯಾನಂದಸ್ವಾಮಿ

ರಾಜ್ಯದಲ್ಲಿ ವಿರೋಧಿ ಪಕ್ಷಗಳ ಶಾಸಕರಿಗೆ ಅಧಿಕಾರ ಮತ್ತು ಹಣದ ಆಮಿಷವೊಡ್ಡಿ, ತಮ್ಮ ಚುನಾಯಿತ ಸ್ಥಾನಗಳಿಗೆ ರಾಜಿನಾಮೆ ಕೊಡಿಸಿ, ಬಿಜೆಪಿಗೆ ಸೇರಿಸಿಕೊಳ್ಳುವ ನಾಚಿಕೆಗೇಡಿನ ಕಾರ್ಯಾಚರಣೆ ಮುಂದುವರೆದಿದೆ. ಜೆಡಿ(ಎಸ್)ನ ಹಿರಿಯ ಮುಖಂಡ ಹಾಗೂ ಹುಕ್ಕೇರಿ ಕ್ಷೇತ್ರದ ಶಾಸಕ ಉಮೇಶ್ ಕತ್ತಿ ಮತ್ತು ಮಾಜಿ ಸಚಿವ ಚೆನ್ನಿಗಪ್ಪನವರ ಪುತ್ರ ಹಾಗೂ ಮಧುಗಿರಿ ಕ್ಷೇತ್ರದ ಶಾಸಕ ಗೌರಿಶಂಕರ ತಮ್ಮ ಶಾಸಕ ಸ್ಥಾನಗಳಿಗೆ ರಾಜಿನಾಮೆ ನೀಡಿ ಬಿಜೆಪಿಗೆ ಸೇರಿದ್ದಾರೆ. 'ವಿಧಾನಸಭೆ ಉಪಚುನಾವಣೆಯ ಬಳಿಕ ಬಿಜೆಪಿ ಶಾಸಕರ ಸಂಖ್ಯೆ 125ಕ್ಕೆ ಏರಬೇಕು. ಅದು ನಮ್ಮ ಗುರಿ' ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಬಹಿರಂಗ ಹೇಳಿಕೆ ನೀಡಿದ್ದಾರೆ. ಪಕ್ಷದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಭಾಗವಹಿಸಿದ್ದ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ರಾಜನಾಥ ಸಿಂಗ್ 'ಆಪರೇಷನ್ ಕಮಲ' ಕಾರ್ಯಾಚರಣೆಯನ್ನು ಮುಕ್ತವಾಗಿ ಸಮರ್ಥಿಸಿದ್ದಾರೆ.

ಈ ಬೆಳವಣಿಗೆಯಿಂದ ಜೆಡಿ(ಎಸ್) ನಿಂದ ನಾಲ್ಕುಮಂದಿ ಶಾಸಕರು ಬಿಜೆಪಿಗೆ ವಲಸೆ ಹೋದಂತಾಗಿದೆ. ಈಗಾಗಲೇ ಅರಭಾವಿ ಕ್ಷೇತ್ರದ ಬಾಲಚಂದ್ರ ಜಾರಕಿಹೊಳಿ, ದೇವದುರ್ಗ ಕ್ಷೇತ್ರದ ಶಿವಪ್ಪ ನಾಯಕ್ ಜೆಡಿ(ಎಸ್) ತೊರೆದು ಬಿಜೆಪಿ ಸೇರಿದ್ದಾರೆ. ಕಾಂಗ್ರೆಸ್‌ನಿಂದ ಕಾರವಾರ ಕ್ಷೇತ್ರದ ಆನಂದ್ ಆಸ್ನೋಟಿಕರ್, ತುರುವೇಕೆರೆ ಕ್ಷೇತ್ರದ ಜಗ್ಗೇಶ್, ದೊಡ್ಡಬಳ್ಳಾಪುರ ಕ್ಷೇತ್ರದ ಜೆ.ನರಸಿಂಹಸ್ವಾಮಿ ಬಿಜೆಪಿ ಪಾಳೆಯ ಸೇರಿದ್ದಾರೆ. ಈಗ ಉಮೇಶ್ ಕತ್ತಿ ಮತ್ತು ಗೌರಿಶಂಕರ್ ಅವರ ರಾಜಿನಾಮೆಯಿಂದ ಒಟ್ಟು 7 ವಿಧಾನಸಭಾ ಕ್ಷೇತ್ರಗಳು ಖಾಲಿಯಾಗಿವೆ. ಈ ಮಧ್ಯ ಜೆಡಿ(ಎಸ್)ನ ಹಳಿಯಾಳ ಕ್ಷೇತ್ರದ ಸುನಿಲ್ ಹೆಗಡೆ ಮತ್ತು ಕುಮಟಾ ಕ್ಷೇತ್ರದ ದಿನಕರ ಶೆಟ್ಟಿ ಜೆಡಿ(ಎಸ್) ತೊರೆದು ಬಿಜೆಪಿ ಸೇರುತ್ತಾರೆ ಎಂಬ ಸುದ್ದಿ ಇದೆ. ಕಾಂಗ್ರಸಿನ ವಿ.ಸೋಮಣ್ಣ, ಬಾಬುರಾವ್ ಚಿಂಚನಸೂರು, ಗುರುಪಾದಪ್ಪ ನಾಗಮಾರಪಲ್ಲಿ ಸಹ ಬಿಜೆಪಿ ಸೇರುತ್ತಾರೆಂದು ಹೇಳಲಾಗುತ್ತಿದೆ.



ಲಿಂಗಾಯತ ಸಮುದಾಯಕ್ಕೆ ಸೇರಿದ ಉಮೇಶ್ ಕತ್ತಿ ಅವರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುವುದು ಬಹುತೇಕ ಖಚಿತವಾಗಿದೆ. ಇದಕ್ಕಾಗಿ ಲಿಂಗಾಯತ ಸಮುದಾಯದ ಗಾಣಿಗ ಉಪಜಾತಿಗೆ ಸೇರಿದ ತೋಟಗಾರಿಕಾ ಸಚಿವ ಎಸ್.ಕೆ.ಬೆಳ್ಳುಬ್ಬಿ ಅವರನ್ನು ಮನವೊಲಿಸಿ ಸಚಿವ ಸಂಪುಟದಿಂದ ಕೈಬಿಡುವ ಸಾಧ್ಯತೆ ಇದೆ ಎನ್ನಲಾಗಿದೆ. ಇದರಿಂದ ಬಿಜೆಪಿಗೆ ಲಿಂಗಾಯತ ಸಮುದಾಯದ ಬೆಂಬಲವನ್ನು ಗಟ್ಟಿಗೊಳಿಸುವ ಪ್ರಯತ್ನ ವ್ಯವಸ್ಥಿತವಾಗಿ ಮುಂದುವರೆಯುತ್ತಿರುವುದು ಸ್ಪಷ್ಟವಾಗುತ್ತದೆ.

ಮುಂಬರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿ ರಾಜ್ಯದಲ್ಲಿ ಜಾತಿ ಆಧಾರಿತ ನೆಲೆಗಳನ್ನು ಗಟ್ಟಿಗೊಳಿಸಲು ವ್ಯವಸ್ಥಿತವಾಗಿ ಕಾರ್ಯಪ್ರವರ್ತವಾಗಿದೆ. ತುಮಕೂರು ಜಿಲ್ಲೆಯಲ್ಲಿ ಲಿಂಗಾಯತ ಸಮುದಾಯದ ನಡುವೆ ಕೋಟೆ ಕಟ್ಟುವ ಹುನ್ನಾರ ಒಂದು ಕಡೆಯಾದರೆ ತನಗೆ ಪ್ರಭಾವ ಇಲ್ಲದ ಒಕ್ಕಲಿಗ ಸಮುದಾಯದ ಪ್ರಮುಖರನ್ನು ಸೆಳೆದು ಒಕ್ಕಲಿಗರ ನಡುವೆಯೂ ನೆಲೆಯನ್ನು ರೂಪಿಸುವ ಪ್ರಯತ್ನವನ್ನೂ ನಡೆಸಲಾಗುತ್ತಿದೆ. ಇತ್ತೀಚಿಗೆ ರೆಡ್ಡಿ ಸಮುದಾಯದ ಶಾಸಕರನ್ನು ಸತ್ಕರಿಸುವ ಕಾರ್ಯಕ್ರಮವೊಂದನ್ನು ರೆಡ್ಡಿ ಜನಸಂಘ ಏರ್ಪಡಿಸಿತ್ತು. ಇದುವರೆಗೆ ರೆಡ್ಡಿ ಸಮುದಾಯ ಕಾಂಗ್ರೆಸನ್ನು ಬೆಂಬಲಿಸುತ್ತಾ ಬಂದಿತ್ತು. ಈಗ ಬಳ್ಳಾರಿಯ ಗಣಿ ಧಣಿಗಳಾದ ರೆಡ್ಡಿ ಸಹೋದರರ ಪ್ರಾಬಲ್ಯದಿಂದಾಗಿ ಬಿಜೆಪಿಗೆ ರೆಡ್ಡಿ ಸಮುದಾಯದ ಬೆಂಬಲ ದೊರಕುವಂತಾದರೆ ಆಶ್ಚರ್ಯವಿಲ್ಲ. ಸಧ್ಯ ರೆಡ್ಡಿ ಸಮುದಾಯದ ಶಾಸಕರು ಹೆಚ್ಚಾಗಿ ಬಿಜೆಪಿಯಲ್ಲೇ ಇದ್ದು ಇತ್ತೀಚಿಗೆ ನಡೆದ ಸತ್ಕಾರ ಸಮಾರಂಭವು ಬಿಜೆಪಿಯ ಕಾರ್ಯಕ್ರಮವಾಗಿಯೇ ನಡೆಯಿತು, ಬಳ್ಳಾರಿಯ ರೆಡ್ಡಿ ಸಹೋದರರೇ ಕಾರ್ಯಕ್ರಮದ ಕೇಂದ್ರ ಬಿಂದು ಆಗಿದ್ದರು. ಇದನ್ನು ಬಳ್ಳಾರಿಯ ಗಣಿ ಧಣಿಗಳು ತಮ್ಮ ಪ್ರಾಬಲ್ಯವನ್ನು ಮೆರೆಸಲು ಬಳಸಿಕೊಂಡದ್ದು ನಿಜವಿದ್ದರೂ ಬಿಜೆಪಿಗೆ ಇನ್ನೊಂದು ಪ್ರಬಲ ಸಮುದಾಯದ ಬೆಂಬಲವನ್ನು ದೊರಕಿಸುವ ಪ್ರಯತ್ನವೂ ಆದಾಗಿತ್ತು. ಹೀಗೆ ಬಿಜೆಪಿ ಜಾತಿ ಆಧಾರದಲ್ಲಿ ಕರಾವಳಿಯ ಮೀನುಗಾರರ ನಡುವೆ, ಹಾಗೂ ದಲಿತರ ನಡುವೆಯೂ ಸಹ ತನಗೆ ನೆಲೆಗಳನ್ನು ಕಟ್ಟುವುದರಲ್ಲಿ ಗಂಭೀರವಾಗಿ ತೊಡಗಿಕೊಂಡಿದೆ. ಈ ಹಿನ್ನೆಲೆಯಲ್ಲಿ ಆಡಳಿತದ 100 ದಿನಗಳ ಆಚರಣೆಯನ್ನು ವಿಜೃಂಭಣೆಯಿಂದ ಆಚರಿಸಲು ಅದು ಸಜ್ಜಾಗುತ್ತಿದೆ.

ಜನತೆಗೆ ದ್ರೋಹ :

ಆದರೆ ರಾಜ್ಯದ ಜನತೆ ಎದುರಿಸುತ್ತಿರುವ ಸಮಸ್ಯೆಗಳಿಗೆ ಸ್ಪಂಧಿಸುವ ವಿಷಯದಲ್ಲಿ ಯಡಿಯೂರಪ್ಪ ಸರ್ಕಾರ ವಿಫಲವಾಗಿದೆ. ಅತಿವೃಷ್ಠಿ ಹಾಗೂ ಪ್ರವಾಹದಿಂದಾಗಿ ರಾಜ್ಯದ ಹಲವೆಡೆ ಜನಜೀವನ ಅಸ್ತವ್ಯಸ್ಥಗೊಂಡಿದೆ. ಇಪ್ಪತ್ತಕ್ಕೂ ಹೆಚ್ಚು ಸಾವುಗಳು ಸಂಭವಿಸಿವೆ. ನೂರಾರು ಜಾನುವಾರುಗಳು ಸತ್ತಿವೆ. ಸುಮಾರು 3000 ಮನೆಗಳು ಹಾನಿಗೊಳಗಾಗಿವೆ. 9 ಜಿಲ್ಲೆಗಳ ಸುಮಾರು 200 ಗ್ರಾಮಗಳು ಪ್ರವಾಹ ಪೀಡಿತವಾಗಿವೆ ಎಂದು ಸರ್ಕಾರವೇ ಒಪ್ಪಿಕೊಂಡಿದೆ. ಸರ್ಕಾರ ವೈಮಾನಿಕ ಸಮೀಕ್ಷೆ, ಪರಿಹಾರ ಕ್ರಮಗಳ ಘೋಷಣೆ ಮಾಡಿದೆಯೇ ಹೊರತು ಸಂತ್ರಸ್ತರಿಗೆ ಇದುವರೆಗೂ ಪರಿಹಾರ ತಲುಪಿಸಲಾಗಿಲ್ಲ. ಕಳೆದ ಬಾರಿಯೂ ಹೀಗೆ ಆಗಿತ್ತು. ಪ್ರವಾಹ ಪೀಡಿತ ಗ್ರಾಮಗಳಿಗೆ ಶಾಶ್ವತ ಪರಿಹಾರ ಒದಗಿಸುವ ಕೆಲಸ ಆಗಿರಲೇ ಇಲ್ಲ. ಬೆಂಗಳೂರು ಅಂತಹ ನಗರಗಳಲ್ಲಿ ಒಳಚರಂಡಿಗಳ ಅವ್ಯವಸ್ಥೆಯಿಂದಾಗಿ ಮಳೆ ನೀರು ಮನೆಗಳಿಗೆ ನುಗ್ಗುವುದು ಸಾಮಾನ್ಯವಾಗಿದ್ದು ಶಾಶ್ವತ ಪರಿಹಾರ ಕ್ರಮಗಳ ಕೊರತೆಯಿಂದಾಗಿ ಪ್ರತಿಸಲ ಜನ ಅಸಹಾಯಕತೆಯನ್ನು ಎದುರಿಸುವಂತಾಗುತ್ತಿದೆ.

ಅತಿವೃಷ್ಠಿಯ ಜೊತೆಯಲ್ಲೇ ರಾಜ್ಯದ ಸುಮಾರು 85 ತಾಲ್ಲೂಕಗಳಲ್ಲಿ ಮಳೆಯಾಗದೆ ಬರ ಪರಿಸ್ಥಿತಿ ಉಂಟಾಗಿದೆ. ಕುಡಿಯುವ ನೀರಿನ ಕೊರತೆ ಉಂಟಾಗಿದೆ. ಸರ್ಕಾರ ಈ ತಾಲ್ಲೂಕುಗಳನ್ನು ಬರ ಪೀಡಿತ ಎಂದು ಘೋಷಿಸಿ ಪರಿಹಾರಕ್ಕಾಗಿ ಕೇಂದ್ರಕ್ಕೆ ಮನವಿ ಸಲ್ಲಿಸುವುದರೊಂದಿಗೆ ತನ್ನ ಕರ್ತವ್ಯ ಮುಗಿಯಿತು ಎಂದು ಕೊಂಡಿದೆ.

ಎಲ್ಲಾ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಸುವ ತನ್ನ ಚುನಾವಣಾ ಪ್ರಣಾಳಿಕೆಯ ಭರವಸೆಯಿಂದ ಈಗ ಬಿಜೆಪಿ ಸರ್ಕಾರ ಹಿಂದೆ ಸರಿದಿದೆ. 10 ಹೆಚ್.ಪಿ.ಪಂಪ್‌ಸೆಟ್‌ಗಳಿಗೆ ಮಾತ್ರ ಉಚಿತ ವಿದ್ಯುತ್ ಪೂರೈಸಲಾಗುವುದು ಎಂದು ಪ್ರಕಟಿಸುವುದರೊಂದಿಗೆ, ಹಿಂದಿನ ಬಾಕಿಗಳನ್ನು ಕಂತುಗಳಲ್ಲಿ ಸಂದಾಯಮಾಡ ಬೇಕು ಮತ್ತು ಕಡ್ಡಾಯವಾಗಿ ಮೀಟರ್ ಅಳವಡಿಸಿ ಕೊಳ್ಳಬೇಕೆಂಬ ಷರತ್ತುಗಳನ್ನು ವಿಧಿಸಲಾಗಿದೆ. ಸರ್ಕಾರದ ಈ ವಚನಭ್ರಷ್ಟತೆಯ ವಿರುದ್ಧ ರೈತರು ಸ್ವಯಂ ನಿರ್ಧಾರದ ಹೋರಾಟಗಳಿಗೆ ಇಳಿಯುತ್ತಿದ್ದಾರೆ.

ರಸಗೊಬ್ಬರಗಳಿಗಾಗಿ ರೈತರ ಪರದಾಟ ಮುಂದುವರೆದಿದೆ. ತುಮಕೂರು, ಹಾಸನ, ಕೋಲಾರ ಮೊದಲಾದ ಜಿಲ್ಲೆಯಲ್ಲಿ ರೈತರು ಬೀದಿಗಿಳಿದು ಪ್ರತಿಭಟಿಸಿದ್ದಾರೆ. ಪೋಲಿಸ್ ದೌರ್ಜನ್ಯದ ಮೂಲಕ ರೈತರ ಚಳುವಳಿಯನ್ನು ಹತ್ತಿಕ್ಕುವ ಪ್ರಯತ್ನ ಮುಂದುವರೆದಿದೆ

ರಾಜ್ಯದ ಕಬ್ಬುಬೆಳೆಗಾರರಿಗೆ 160 ರೂ. ದರದಲ್ಲಿ ಸಹಾಯ ಧನ ಬಾಕಿಯನ್ನು ಸಂದಾಯ ಮಾಡಿಸಲು ಸರ್ಕಾರ ವಿಫಲವಾಗಿದೆ. ರಾಜ್ಯಾದ್ಯಂತ ಬೆಂಬಲ ಬೆಲೆ ಘೋಷಿಸುವುದಕ್ಕೂ ಸರ್ಕಾರ ಮುಂದಾಗುತ್ತಿಲ್ಲ. ಇದರ ಜೊತೆಯಲ್ಲಿ ಹಾಸನ ಜಿಲ್ಲೆಯಲ್ಲಿ ಸಾವಿರಾರು ಎಕರೆ ಭೂಮಿಯಲ್ಲಿ ಬೆಳೆದಿದ್ದು ಆಲೂಗಡ್ಡೆ ಬೆಳೆಯು 'ರೋಗಕ್ಕೆ ಬಲಿಯಾಗಿ ರೈತರು ತೀವ್ರ ಹಾನಿ ಅನುಭವಿಸಿದ್ದಾರೆ. ಬಿಜೆಪಿ ಸರ್ಕಾರ ರೈತರ ನೆರವಿಗೆ ಧಾವಿಸುವ ಬದಲು ಬೆಳೆಹಾನಿ ವಿಷಯದಲ್ಲಿ ರಾಜಕೀಯ ಮಾಡುತ್ತಿದೆ. ಹಾಗೆಯೇ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಕಾಡಾನೆಗಳ ದಾಳಿಯಿಂದ ಗಿರಿಜನರ ಬೆಳೆ ಅಪಾರ ಪ್ರಮಾಣದಲ್ಲಿ ನಾಶವಾಗಿದ್ದು ಸರ್ಕಾರದಿಂದ ಯಾವುದೇ ರಕ್ಷಣೆ ದೊರೆಯದೆ ಕಂಗಾಲಾಗಿದ್ದಾರೆ.

ರಾಜ್ಯದಲ್ಲಿ ಜಾರಿಯಲ್ಲಿರುವ ಲೋಡ್ ಶೆಡ್ಡಿಂಗ್ ಅನ್ನು ವಾಪಸ್ ಪಡೆಯಲಾಗುವುದು ಎಂದು ವಿದ್ಯುತ್ ಖಾತೆಯ ಮಂತ್ರಿ ಹೇಳಿಕೆ ನೀಡುತ್ತಾ ಇದ್ದಾರೆ. ಆದರೆ ಅನಿಯಮಿತ ಲೋಡ್ ಶೆಡ್ಡಿಂಗ್ ಮಾತ್ರ ಮುಂದುವರೆದಿದೆ. ಐಟಿ ಕಂಪನಿಗಳಿಗೆ, ಹೈಟೆನ್ಶನ್ ವಿದ್ಯುತ್ ಬಳಕೆದಾರರಿಗೆ ಲೋಡ್ ಶೆಡ್ಡಿಂಗ್ ಮಾಡದೆ ರೈತರಿಗೆ, ಜನಸಾಮಾನ್ಯರಿಗೆ ಲೋಡಶೆಡ್ಡಿಂಗ್ ಮಾಡುತ್ತಿರುವ ಈ ಸರ್ಕಾರ ಯಾರ ಪರವಾಗಿದೆ ಎಂಬುದು ಬಯಲಾಗುತ್ತಿದೆ.

ಗಣಿಧಣಿಗಳ ಲೂಟಿ:

ರಾಜ್ಯದ ಬಿಜೆಪಿ ಸರ್ಕಾರ ಗಣಿಧಣಿಗಳ ಹಾಗೂ ಭೂಮಾಫಿಯಾಗಳ ಕಪಿಮುಷ್ಠಿಯಲ್ಲಿ ಸಿಕ್ಕಿಹಾಕಿಕೊಂಡಿರುವುದು ರಾಜ್ಯದ ಜನತೆಗೆ ಅರ್ಥವಾಗಲಾರಂಭಿಸಿದೆ. ಅಕ್ರಮ ಗಣಿಗಾರಿಕೆ ವಿರುದ್ಧ ಜನ ಸ್ವಯಂ ನಿರ್ಧಾರದ ಹೋರಾಟಗಳಿಗೆ ಇಳಿಯುತ್ತಿದ್ದಾರೆ. ಸರ್ಕಾರ ಈ ಹೋರಾಟಗಳನ್ನು ಪೋಲಿಸರ ನೆರವಿನಿಂದ ದಮನ ಮಾಡಲು ಯತ್ನಿಸುತ್ತಿದೆ. ಸಾಹಿತಿ ಬರಹಗಾರರ ಒಂದು ತಂಡ ಗಣಿಗಾರಿಕೆಯ ಸ್ಥಳಗಳಿಗೆ ಭೇಟಿಕೊಟ್ಟು ಗಣಿಗಾರಿಕೆಯಿಂದ ರಾಜ್ಯಕ್ಕೆ ಆಗುತ್ತಿರುವ ಹಾನಿ ಹಾಗೂ ಅನಾಹುತಗಳ ಬಗ್ಗೆ ಜನಜಾಗೃತಿಯನ್ನುಂಟು ಮಾಡಲು ಮಾಡಿದ ಪ್ರಯತ್ನ ಗಮನಾರ್ಹವಾಗಿದೆ.

ಈ ನಡುವೆ ರಾಜ್ಯ ಹೈಕೋರ್ಟ್ ಆದೇಶವೊಂದನ್ನು ಹೊರಡಿಸಿ ಅರಣ್ಯ ಪ್ರದೇಶಗಳಲ್ಲಿ ಗಣಿಗಾರಕೆಯನ್ನು ನಿಷೇಧಿಸಿತು. ರಾಜ್ಯದ ವಿವಿಧೆಡೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಗಣಿಗಾರಿಕೆ ನಡೆಸಲು ಅನುಮತಿ ನೀಡಿ ಸರ್ಕಾರ 2003 ರಲ್ಲಿ ಹೊರಡಿಸಿದ್ದ ಅಧಿಸೂಚನೆಯನ್ನು ಹೈಕೋರ್ಟ್ ರದ್ದು ಮಾಡಿತು, ಗಣಿ ಮಾಫಿಯಾದ ಹಿಡಿತದಲ್ಲಿರುವ ಬಿಜೆಪಿ ಸರ್ಕಾರ ಹೈಕೋರ್ಟ್ ಆದೇಶವನ್ನು ಸಹ ಗಣಿಧಣಿಗಳ ಪರವಾಗಿಯೇ ಬಳಕೆ ಮಾಡಲು ಮುಂದಾಯಿತು, ನಿಯಮಗಳನ್ನು ಉಲ್ಲಂಘಿಸಿ ಅಕ್ರಮ ಗಣಿಗಾರಿಕೆ ಮಾಡುತ್ತಿರುವ, ಪರವಾನಿಗೆ ನೀಡಿದ ಸ್ಥಳಕ್ಕಿಂತಲೂ ಹೆಚ್ಚಿನ ಸ್ಥಳದಲ್ಲಿ ಗಣಿಗಾರಿಕೆ ನಡೆಸುತ್ತಿರುವ ದೊಡ್ಡ ದೊಡ್ಡ ಗಣಿ ಮಾಲಿಕ ವಿರುದ್ಧಕ್ರಮ ಕೈಗೊಳ್ಳುವ ಬದಲು ಕೃಷಿಗೆ ಯೋಗ್ಯವಲ್ಲದ ತಮ್ಮ ಪಟ್ಟಾ ಭೂಮಿಯನ್ನು ಅಗೆದು ಅದಿರು ಹೊರತೆಗೆಯುತ್ತಿದ್ದ ರೈತರ ಮೇಲೆ ದಾಳಿ ಮಾಡಲಾಯಿತು, ಬಳ್ಳಾರಿ ಜಿಲ್ಲಾಡಳಿತ ದಿಢೀರ್ ಕಾರ್ಯಾಚರಣೆ ನಡೆಸಿ 50 ಕೋಟಿ ರೂ.ಗಳಿಗೂ ಅಧಿಕ ಮೌಲ್ಯದ ರೈತರ ಹೊಲಗಳಲ್ಲಿ

ಪುಟ 15ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ

ಆಗಸ್ಟ್ 31, 2008


ಜಾತಿಬೇಧವಿಲ್ಲದೇ ಯಾರ್‍ಯಾದರೂ ಹೋಗಿ ಇಲ್ಲಿನ ಶಿವಲಿಂಗವನ್ನು ಮುಟ್ಟಬಹುದು, ಗರ್ಭಗುಡಿ ಪ್ರವೇಶಿಸಬಹುದು ಎಂಬುದು ಗೋಕರ್ಣ ದೇವಸ್ಥಾನದಲ್ಲಿನ ಒಂದು ಸಕಾರಾತ್ಮಕ ಅಂಶ. ಈ ದೇವಾಲಯ ಈಗ ಗೋ ರಕ್ಷಣೆ ಹೆಸರಿನಲ್ಲಿ ಆರೆಸ್ಸೆಸ್ ಅಜೆಂಡಾ ಜಾರಿಗೆ ಶ್ರಮಿಸುತ್ತಿರುವ ರಾಮಚಂದ್ರಪುರದ ಮಠದ ತೆಕ್ಕೆಗೆ ಸೇರಿರುವುದರಿಂದ ಈ ಅವಕಾಶ ಮುಂದೆ ಉಳಿಯಬಹುದೇ ಎಂಬ ಪ್ರಶ್ನೆ ಎದ್ದಿದೆ. ದೇವಾಲಯದ ವ್ಯಾಪಾರೀಕರಣವಲ್ಲದೆ ಇದೂ ಒಂದು ಆತಂಕದ ಅಂಶವಾಗಿದೆ.

'ಗೋ' ಕರ್ಣ 'ಗೋ' ಸ್ವಾಮಿಯ ಹುಂಡಿಗೆ

ದೇವರು, ದೇವಸ್ಥಾನಗಳನ್ನೇ ಮಾರ ಹೊರಟ ರಾಮಭಕ್ತರು

ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ ದೇವಸ್ಥಾನ ಮತ್ತೊಮ್ಮೆ ಸುದ್ದಿಯಲ್ಲಿದೆ. 'ದಕ್ಷಿಣ ಕಾಶಿ' ಎಂದು ಹೊಗಳಲ್ಪಡುವ ಈ ಪ್ರದೇಶದಲ್ಲಿ ಶಿವನ ಆತ್ಮಲಿಂಗ ಎನ್ನಲಾಗುವ ಲಿಂಗವಿರುವ ದೇವಸ್ಥಾನವಿದೆ. ಪುರಾಣದ ಕತೆಯ ಪ್ರಕಾರ ಶಿವನಿಂದ ಪಡೆದ ಆತ್ಮಲಿಂಗವನ್ನು ರಾವಣ ಈ ಪ್ರದೇಶದಲ್ಲಿ ನೆಲದ ಮೇಲಿಟ್ಟದ್ದರಿಂದ ಇದು ಭೂ ಕೈಲಾಸವಾಯಿತು ಎಂದು ನಂಬಲಾಗಿದೆ.

ಬಹುತೇಕವಾಗಿ ಸತ್ತವರ 'ಅಸ್ತಿ' ಬಿಡಲು ಹಾಗೆಯೇ ಸತ್ತವರಿಗಾಗಿ 'ಪಿಂಡ' ಬಿಡಲು ದೇಶದ ಹಲವು ಕಡೆಯಿಂದ ಗೋಕರ್ಣಕ್ಕೆ ಬರುತ್ತಾರೆ. ಈ ಕಾರಣದಿಂದ ಗೋಕರ್ಣ ಪ್ರಸಿದ್ಧವಾಗಿದೆ; ಇನ್ನೂ ಒಂದು ಕಾರಣದಿಂದ ಗೋಕರ್ಣ ಜಾಗತಿಕ ಪ್ರಸಿದ್ಧಿ ಪಡೆದಿದೆ. ದೇವಸ್ಥಾನದ ಹತ್ತಿರವೇ ಇರುವ ಓಂ ಬೀಚ್ ಮತ್ತು ಕುಡ್ಲೆ ಬೀಚ್ ಸುಂದರವೂ ಅಪಾಯ ರಹಿತವೂ ಆಗಿದೆ. ಸಮುದ್ರ ತೀರ ಇದು. ಇದು ವಿದೇಶಿಯರಿಗೆ ಅತಿ ಪ್ರಮುಖವಾದುದು. ಅವರೇ ಹೆಚ್ಚು ಅಡ್ಡಾಡುವುದರಿಂದ ಹದಿಹರೆಯದ ಹೃದಯಗಳೂ ಆಕಡೆ ಓಡಾಡುತ್ತಿರುತ್ತವೆ.



ಗೋಕರ್ಣ ದೇವಸ್ಥಾನ

ಈ ಹಿಂದೆ ಕೂಡ ಗೋಕರ್ಣ ತರಾತುರಿಯಿಂದ ಪ್ರಸಿದ್ಧವಾಗಿತ್ತು. ಕಳೆದ 3 ವರ್ಷಗಳ ಹಿಂದೆ ಆಡಳಿತ ಟ್ರಸ್ಟಿ ಆಗಿದ್ದ ವಿ. ಡಿ. ದೀಕ್ಷಿತ್ ನಿಧನ ಹೊಂದಿದ ನಂತರ ಆತನ ಮಗ ಬಾಲಚಂದ್ರ ದೀಕ್ಷಿತ್ ದೇಗುಲದ ಆಡಳಿತವನ್ನ ತಮಗೆ ವಹಿಸಿಕೊಡುವಂತೆ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸುತ್ತಿರುವ ಹೈಕೋರ್ಟ್ 12-12-2006 ರಂದು ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶ ನೀಡಿತ್ತು. ಕುಮಟಾ ಎ.ಸಿ.ಯವರನ್ನು ಆಡಳಿತಾಧಿಕಾರಿಯಾಗಿ ನೇಮಿಸಿತ್ತು. ಆದರೆ ಇನ್ನೂ ವಿಚಾರಣೆ ನಡೆಯುತ್ತಿರುವಂತೆ ಎಲ್ಲಾ ನಿಯಮವನ್ನು ಗಾಳಿಗೆ ತೂರಿ ಮುಖ್ಯ ಮಂತ್ರಿಗಳು ಗೋಕರ್ಣವನ್ನು ಪರಬಾರೆ ಮಾಡಿದ್ದಾರೆ. ಕೋರ್ಟ್ ಆದೇಶವನ್ನು ಉಲ್ಲಂಘಿಸಿದ್ದಷ್ಟೇ ಅಲ್ಲ ಹಸ್ತಾಂತರ ಪ್ರಕ್ರಿಯೆಯಲ್ಲಿಯೂ ಎಲ್ಲಾ ನಿಯಮ ಉಲ್ಲಂಘಿಸಲಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತ ಪಡಿಸಿದ್ದಾರೆ. ಶಿವಮೊಗ್ಗ, ಉ. ಕ. ಜಿಲ್ಲೆಯಲ್ಲಿ ಎಣ್ಣೆ, ದೀಪ ಕಾಣದ ನೂರಾರು ದೇವಾಲಯ ಇದೆ. ಇದೆಲ್ಲ ಬಿಟ್ಟು ಕೋಟ್ಯಾಂತರ ರೂಪಾಯಿ ಆದಾಯವಿರುವ ಮಹಾಬಲೇಶ್ವರ ದೇವಾಲಯ ವಶಪಡಿಸಿಕೊಂಡ ರಾಮಚಂದ್ರಾಪುರ ಮಠದ ಸ್ವಾಮಿಗಳ ಆಧ್ಯಾತ್ಮದ ಒಳಗುಟ್ಟೇನು?

ಕೊಟ್ಟವ ಕೋಡಂಗಿ......

ನಮ್ಮಲ್ಲಿ ಒಂದು ಮಾತಿದೆ. 'ಕೊಟ್ಟವ ಕೋಡಂಗಿ ಇಸಕೊಂಡವ ಈರಭದ್ರ' ಎಂದು. ಅದೇ ಕತೆಯಾಯಿತು ಇದು. ಈ ಹಿಂದೆ ಬಜೆಟ್‌ನಲ್ಲಿ ಹಣ ಮತ್ತು ಭೂಮಿಯನ್ನು ಮಠಗಳಿಗೆ ಕೊಡಲಾಗಿತ್ತು.

ಹಾಗಾಗಿ ಹಲವು ಎಲ್ಲಾ ಮಠಗಳು ಈ ಬಾರಿ ಬಿಜೆಪಿಯ ಚುನಾವಣಾ ಕಛೇರಿಯಂತೆ ಕೆಲಸ ಮಾಡಿದ್ದವು. ಈ ಋಣ ತೀರಿಸಲು ಮುಖ್ಯ ಮಂತ್ರಿಗಳು ಆಯ್ಕೆಮಾಡಿಕೊಂಡಿದ್ದು ಕೋಟ್ಯಾಂತರ ರೂಪಾಯಿ ವ್ಯವಹಾರ ನಡೆಯುವ ದೇವಸ್ಥಾನಗಳನ್ನೇ ತನ್ನದೆ ವೈಯುಕ್ತಿಕ ಆಸ್ತಿಯನ್ನು ಕ್ರಯ ಚೀಟಿ ಬರೆದು ಒಪ್ಪಿಸಿದಂತೆ ಸ್ವತಃ ಮುಖ್ಯಮಂತ್ರಿಗಳೇ ಸಹಿ ಮಾಡಿದ ಆದೇಶ ಸಾವಿರಾರು ವರ್ಷಗಳ ಇತಿಹಾಸ ಇರುವ ಸಾರ್ವಜನಿಕ ಆಸ್ತಿಯನ್ನು ಮಠಗಳ ವಯಕ್ತಿಕ ಸುಪರ್ದಿಗೆ ವಹಿಸುವ ಅಪ್ರಜಾಸತ್ತಾತ್ಮಕವಾದ ತೀರ್ಮಾನ ತೆಗೆದುಕೊಂಡರು. ಯಾವುದೇ ದೇವಾಲಯವನ್ನು ಹಸ್ತಾಂತರಿಸುವಾಗ ಸಾರ್ವಜನಿಕರ ಸಭೆ ನಡೆಸಿ, ದೇಗುಲದ ಉಪಾದಿವಂತದ, ಸ್ಥಳೀಯ ಜನ ಪತ್ರಿನಿಧಿಗಳ (ಪಂಚಾಯತ್) ಟ್ರಸ್ಟಿಗಳ ಅಭಿಪ್ರಾಯ ಪಡೆಯಬೇಕಾದುದು ನಿಯಮ ಮತ್ತು ಕರ್ತವ್ಯ. ಆದರೆ ಗುಪ್ತವಾಗಿ ನಡೆದ ವ್ಯವಹಾರ ಇದು. ಈ ಎಲ್ಲಾ ಜನರನ್ನು ಕತ್ತಲಲ್ಲಿ ಇಟ್ಟು. ಶಿವನೇ ತನ್ನ ಆತ್ಮಲಿಂಗವನ್ನು ಭಕ್ತನಿಗೆ ಕೊಟ್ಟಿರುವಾಗ, ಅಧಿಕಾರಕ್ಕೆ ಬರಲು ಸಹಾಯ ನೀಡಿದ ಗುರುವಿಗೆ ಆತ್ಮಲಿಂಗದ ದೇವಸ್ಥಾನ ಕೊಡುವುದು ಯಾವ ಲೆಕ್ಕ ಎಂದುಕೊಂಡಿರಬೇಕು ಮುಖ್ಯಮಂತ್ರಿಗಳು !. ಹಾಲು ತೆಗೆದುಕೊಳ್ಳಲು ಹಣ ಕೊಡುವುದಕ್ಕಿಂತ ಹತ್ತಾರು ಸೇರು ಹಾಲು ಕೊಡುವ ಯಾರದೋ ಕೊಟ್ಟಿಗೆಯ ಎಮ್ಮೆಯನ್ನೇ ಕೊಟ್ಟಂತೆ. ಕೇಂದ್ರದಲ್ಲಿ ಅಧಿಕಾರಕ್ಕೆ ಬರುವಾಗ ರಾಮನನ್ನು ಮಾರಾಟ ಮಾಡಿದರು. ಅಧಿಕಾರ ಬಂದಾಗ ಸಾರ್ವಜನಿಕ ಕಂಪನಿ, ಆಸ್ತಿ ಮಾರಾಟ ಮಾಡಿದರು. ಈಗ ಇಲ್ಲಿ ದೇವಸ್ಥಾನಗಳನ್ನೇ ಮಾರಾಟ ಮಾಡಲು ತೊಡಗಿದ್ದಾರೆ. ಇದೇನು ಆಪರೇಷನ್ ದೇವಸ್ಥಾನವೇ?!

ಹುಂಡಿಯ ಮೇಲೆ ಮಠದ ಕಣ್ಣು

ಸದ್ಯ ಗೋಕರ್ಣದಲ್ಲಿ ಗೋಕರ್ಣೇಶ್ವರ ನಿಗೆ ಪೊಲೀಸರ ಸರ್ಪಗಾವಲು. (ದೇವರಿಗೆ ಇಂತಹ ಸ್ಥಿತಿ ಬರಬಾರದಾಗಿತ್ತು. ಎನ್ನುತ್ತಾರೆ ಹಲವರು) 13-8-2008ಕ್ಕೆ ಸರ್ಕಾರದ ಆದೇಶ ಹೊರಟಿದೆ. ಮಠದ ಶಿಷ್ಯವೃಂದ 14 ಕ್ಕೆ ಗೋಕರ್ಣದಲ್ಲಿ ಹಾಜರ್. ಬಂದು ಅವರು ಮೊದಲು ಮಾಡಿದ್ದು ಮಠದ ಬೋರ್ಡ್ ತೂಗು ಹಾಕಿದ್ದು ಮತ್ತು 3 ವರ್ಷಗಳಿಂದ ಒಡೆಯದಿದ್ದ (ಕೋರ್ಟ್ ಆದೇಶದಿಂದ) ಎಲ್ಲಾ ಹುಂಡಿಗಳನ್ನು ಒಡೆದು ಸುಮಾರು 33 ಲಕ್ಷ ರೂಪಾಯಿಗಳು ಮತ್ತು ಅಪಾರ ಪ್ರಮಾಣದ ಚಿನ್ನವನ್ನೇ ರಾಮಚಂದ್ರಾಪುರ ಮಠದ ಹುಂಡಿಗೆ ಒಯ್ದು ಹಾಕಿದ್ದು. (ಇದು ಘಜನೀ ಮಹಮದ್‌ನ ದಂಡಯಾತ್ರೆ ಅಲ್ಲ. ರಾಮಚಂದ್ರಾಪುರ ಮಠದ ದಂಡಯಾತ್ರೆ ...!) ಜಿಲ್ಲೆಯ ಜನರಿಗೆ ಆಶ್ಚರ್ಯವಾದದ್ದು ಇದೆ. ಗೋಕರ್ಣಕ್ಕೆ ಬಂದು ಇತರ ಅಭಿವೃದ್ಧಿ ಕಾರ್ಯ, ಪೂಜೆ ಪುನಸ್ಕಾರಗಳ ವ್ಯವಸ್ಥೆಯ ಕುರಿತು ಅಗತ್ಯಕ್ರಮ, ಭಟ್ಟರಿಂದ ನಡೆದ ಶೋಷಣೆ, ಜನರ ನಂಬಿಕೆಯನ್ನೇ ಬಂಡವಳವನ್ನಾಗಿಸಿಕೊಂಡು ಹಣ ದೋಚುವ ಕ್ರಿಯೆ... ಇತ್ಯಾದಿಗಳ ಬಗ್ಗೆ ಯೋಚಿಸದೇ ನೇರ ಹುಂಡಿಗೆ ಹಾಕಿದ್ದು ಮತ್ತು ಹುಂಡಿ ಒಡೆದು ಹಣಲೆಕ್ಕ ಹಾಕಲು ರಾಮಚಂದ್ರಾಪುರ ಮಠದ ಶಿಷ್ಯರೇ ಒಳಸೇರಿಕೊಂಡಿದ್ದು ಕೂಡ ಮಠದ ಕುರಿತು ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ.



ರಾಘವೇಂದ್ರ ಭಾರತಿ ಸ್ವಾಮೀಜಿ

ಅಶಕ್ತ ಸರ್ಕಾರದ ಮನೆ ಮುರುಕು ನೀತಿ

ಅವ್ಯವಹಾರದಲ್ಲಿ ಮುಳುಗಿದ್ದ ಒಂದು ದೇವಸ್ಥಾನದ ಆಡಳಿತವನ್ನು ಸುಧಾರಣೆ ತರಲು ಅಶಕ್ತವಾದ ಸರ್ಕಾರ ಇಡೀ ರಾಜ್ಯವನ್ನೇ ಹೇಗೆ ಆಳೀತು? ಈ ಹಿಂದೆ ಸರ್ಕಾರಗಳು ಸಾರ್ವಜನಿಕ ಕಂಪನಿಯನ್ನು ಮಾರಾಟ ಮಾಡುತ್ತಿದ್ದವು. ಜನ ಅವನ್ನು ವಿರೋಧ ಮಾಡಿದರು. ಈಗ ಬಂದವರು ಸರ್ಕಾರಿ ಭೂಮಿಯನ್ನು ಮಾರಲು ತೊಡಗಿದ್ದಾರೆ; ಹಾಗೆಯೇ ದೇವಸ್ಥಾನವನ್ನು ತಮಗೆ ಬೇಕಾದವರಿಗೆ ದಾನ ಮಾಡಲು ತೊಡಗಿದ್ದಾರೆ. ಮನೆಯ ಯಜಮಾನ ಮನೆಯ ಸಂಪತ್ತನ್ನು ಬೆಳೆಸ ಬೇಕೆ ಹೊರತಾಗಿ ಮನೆ ಮುರಿದು ಮಾರುವುದಲ್ಲ. ಈ ಮನೆ ಮುರುಕು ತನಕ್ಕೆ ಇನ್ನೆಷ್ಟು ದೇವಾಲಯಗಳು ಬಲಿ ಆಗಬೇಕೆನೋ?!

ಹಲವು ಮಠಾಧೀಶರೂ ಇದಕ್ಕೆ ವಿರೋಧ ಮಾಡಿದ್ದಾರೆ. ಅವರನ್ನು ಸುಮ್ಮನಾಗಿಸಲು ಇಡಗುಂಜಿ ಮಹಾ ಗಣಪತಿ, ಶಿರಸಿ ಮಾರಿಕಾಂಬೆ, ಉಳವಿ ಚೆನ್ನಮಲ್ಲಿಕಾರ್ಜುನ, ಕೊಲ್ಲೂರು ಮೂಕಾಂಬಿಕೆ, ಮೈಸೂರು ಚಾಮುಂಡಿ... ಇನ್ಯಾವಾಗ ಬಲಿ ಆಗಬೇಕೆನೋ?

ಅಪ್ಪಟ ಸುಳ್ಳು

ಗೋಕರ್ಣ ಯಾವತ್ತೋ ರಾಮ ಚಂದ್ರಪುರ ಮಠದ ಆಡಳಿತಕ್ಕೆ ಸೇರಿತ್ತು ಎಂಬ ಅಪ್ಪಟ ಸುಳ್ಳು ಹೇಳಲಾಗುತ್ತಿದೆ. ಗೋಕರ್ಣ ರಾಮಾಯಣ ಕಾಲದ್ದು ಎಂದಾದರೆ, ರಾಮಚಂದ್ರಾಪುರ ಅದಕ್ಕಿಂತ ಮೊದಲಿತ್ತೆ?

ಗೋಕರ್ಣಕ್ಕೆ ಬರುವವರೆಲ್ಲ ರಾಮಚಂದ್ರಪುರ ಮಠದ ಶಿಷ್ಯರೇ? ಭಕ್ತರೇ? ಈ ಮಠ ಎಲ್ಲಿದೆಯೆಂದು ಗೊತ್ತಿಲ್ಲದ ಸಾವಿರಾರು ಜನ ಇಲ್ಲಿಗೆ ಬರುತ್ತಿರುತ್ತಾರೆ. ಹೀಗೆ ಸಾರ್ವಜನಿಕ ನಂಬಿಕೆ, ಹಣದಿಂದ ಬೆಳೆದ ಒಂದು ಕ್ಷೇತ್ರ ಯಾವುದೋ ಒಂದು ಮಠಕ್ಕೆ ಕೊಡುವುದು ಸರಿಯಾದ ಕ್ರಮವಲ್ಲ. ಹಾಗೆಯೇ ತನ್ನ ಮಠದ ಸುಪರ್ದಿಗೆ ಸೇರಿದ್ದೆ ಎನ್ನುವುದು ಜನಕ್ಕೆ ತಪ್ಪು ದಾರಿಗೆಳೆಯುವ ಹೇಳಿಕೆ. ಈ ಕಡೆ ಇದನ್ನು ವಿರೋಧಿಸುವ ಶೃಂಗೇರಿ ಮಠದವರು ಕೂಡ ಗೋಕರ್ಣವನ್ನು ಶಂಕರಾಚಾರ್ಯರು ಸ್ಥಾಪಿಸಿದ್ದು ಎಂದು ವಾದ ಪ್ರಾರಂಭಿಸಿದ್ದಾರೆ.

ಪ್ರತಿಭಟನೆಯ ದಾರಿಯಲ್ಲಿ

ರಾಜ್ಯದಲ್ಲಿ ನಡೆಯುವ ಹಲವು ಅವ್ಯವಹಾರಗಳು ಕಂಡೂ ಕಾಣದಂತಿರುವ ಸರ್ಕಾರ ಗೋಕರ್ಣದ ಮೇಲೆ ಕಣ್ಣು ಹಾಕಿದಕ್ಕೆ ಸ್ಥಳೀಯವಾಗಿ ವಿರೋಧ ವ್ಯಕ್ತವಾಗುತ್ತಿದೆ. ಪುರೋಹಿತನು (ಈವರೆಗೆ ಜನರ ಜೀವ ಹಿಂಡುತ್ತಿದ್ದವರು. ದೇವರ ಹೆಸರಿನಲ್ಲಿ ಶಾಸ್ತ್ರದ ಹೆಸರಿನಲ್ಲಿ ಕಿಸೆ ಬೆಳೆಸುತ್ತಿದ್ದವರು), ಟ್ರಸ್ಟಿಗಳು (ಅವರಿಗೆ ದೇವರ ಮೇಲೆ ಭಕ್ತಿ ಇದೆಯೇ ಇಲ್ಲವೋ ತಿಳಿದಿಲ್ಲ. ಆದರೆ ಬಂದ ಭಕ್ತರಿಗೆ ಒಂದಿಷ್ಟು ಪ್ರಮಾಣಿಕ ವ್ಯವಸ್ಥೆ ಮಾಡಲಾಗದವರು) ಪ್ರತಿಭಟನೆ ಮೊರೆ ಹೋಗಿದ್ದಾರೆ. ಹಾಗೆಯೇ ಕೆಲವು ಮಠಾಧಿಪತಿಗಳು ಹಿಂಬಾಗಿಲಿನಿಂದ ಬೆಂಬಲ ಕೊಟ್ಟರೆ ಕೆಲವರು ಬಹಿರಂಗವಾಗಿ ವಿರೋಧ ವ್ಯಕ್ತ ಪಡಿಸುತ್ತಿದ್ದಾರೆ.

ಅಂತೂ 'ರಾವಣ-ಗಣಪತಿಗಳಿಂದ ಹಿಂದೆ ಖ್ಯಾತಿಗೆ ಬಂದ' ಗೋಕರ್ಣ ಈಗ ಯಡಿಯೂರಪ್ಪ - ರಾಘವೇಶ್ವರ ಸ್ವಾಮಿ ಜೋಡಿಯಿಂದಾಗಿ ಮತ್ತೆ ಖ್ಯಾತಿಗೆ ಬರುತ್ತಿದೆ.

ಕೊಡುವವರು ತೆಗೆದುಕೊಳ್ಳುವರ ಬಗ್ಗೆ ಯೋಚಿಸಿದಾಗ ಕುವೆಂಪು ಅವರ ಕವಿತೆ ನೆನಪಿಗೆ ಬರುತ್ತದೆ. 'ನೃಪ ಎಂಬ ಹೆಸರೊಡನೆ ಮುಡಿಯೊಂದನಾಂತೊಡನೆ ಕಳ್ಳರೊಡೆಯನು ಕೃಪೆಯ ಮೂರ್ತಿಯೇನು'.?

● ನಿಸರ್ಗ

ನಿಲ್ಲದ ಬೆಲೆಯೇರಿಕೆಯ ಧಾಳಿ

ಹಣದುಬ್ಬರ ಈಗ ಶೇ. 12.63

ಹಣದುಬ್ಬರದ ದರ 12.63 ಶೇಕಡಕ್ಕೇರಿದೆ. ಕಳೆದ ವಾರವೇ ಇದು 12.44ಶೇ, ತಲುಪಿ ಕಳೆದ 13 ವರ್ಷಗಳಲ್ಲೇ ಅತೀ ಹೆಚ್ಚು ಎಂಬ ದಾಖಲೆ ನಿರ್ಮಿಸಿತ್ತು. ಮುಖ್ಯವಾಗಿ ಹಣ್ಣು-ತರಕಾರಿಗಳು, ಹಾಲು, ಬೇಳೆ ಕಾಳುಗಳು ಮತ್ತು ಕೆಲವು ತಯಾರಿಸಿದ ಸರಕುಗಳ ಬೇಲೆಯೇರಿಕೆಗಳಿಂದ ಈ ಹಣದುಬ್ಬರ ಏರಿಕೆ ಸಂಭವಿಸಿದೆ ಎಂದು ಹೇಳಲಾಗಿದೆ.

ಈ ಹಣದುಬ್ಬರ ದರಗಳನ್ನು ಸಗಟು ಬೆಲೆ ಸೂಚ್ಯಂಕದ ಆಧಾರದಲ್ಲಿ ಲೆಕ್ಕಹಾಕಲಾಗುತ್ತದೆ, ಕಳೆದ ವರ್ಷದ ಇದೇ ವಾರಕ್ಕೆ ಹೋಲಿಸಿದರೆ, ಸಗಟು ಬೆಲೆ ಸೂಚ್ಯಂಕದಲ್ಲಿ ಎಷ್ಟು ಹೆಚ್ಚಳವಾಗಿದೆ ಎಂಬುದನ್ನು ಇದು ಸೂಚಿಸುತ್ತದೆ. ಆದ್ದರಿಂದ ಇದು ಕೂಡ ಜೀವನಾವಶ್ಯಕ ಸಾಮಗ್ರಿಗಳ ಬೆಲೆಯೇರಿಕೆಗಳಿಂದ ಬಳಕೆದಾರರ ಮೇಲೆ ದಿನದಿನವೂ ಹೆಚ್ಚುತ್ತಿರುವ ಹೊರೆಗಳ ನಿಜವಾದ ಚಿತ್ರವನ್ನು ಕೊಡುವುದಿಲ್ಲ. ವಾಸ್ತವವಾಗಿ 2004 ಕ್ಕೆ ಹೋಲಿಸಿದರೆ ಅಕ್ಕಿ ಮತ್ತು ಬೇಳೆಕಾಳುಗಳ ಬೆಲೆಗಳು 50 ಶೆಕಡಾದಷ್ಟು ಏರಿವೆ, ಗೋಧಿಯ ಬೆಲೆ 63 ಶೇ. ದಷ್ಟು ಏರಿದೆ. ಈ ವರ್ಷ ಗೋಧಿ ಸಂಗ್ರಹ ಹೆಚ್ಚಿದ್ದರೂ ಬೆಲೆಯೇರಿಕೆಯನ್ನು ಅದೇನೂ ತಡೆದಿಲ್ಲ. ಅಡುಗೆ ಎಣ್ಣೆ ಬೆಲೆಯೂ 40 ಶೇ.ದಷ್ಟು ಏರಿದೆ. ಬೆಲೆಯೇರಿಕೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿದ್ದರೂ ಯುಪಿಎ ಸರಕಾರ ಜನಗಳಿಗೆ ಯಾವುದೇ ಪರಿಹಾರ ಒದಗಿಸುವಲ್ಲಿ ವಿಫಲವಾಗಿದೆ.

ಗಾಯಕ್ಕೆ ಉಪ್ಪು


ಜನಗಳಿಗೆ ವಿಪರೀತ ಬೆಲೆಯೇರಿಕೆಯಿಂದ ಪರಿಹಾರ ಒದಗಿಸುವ ಬಗ್ಗೆ ಯೋಚಿಸುವ ಬದಲು, ಕಳೆದ ವಾರವಷ್ಟೇ, ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಪ್ರಧಾನಮಂತ್ರಿಗಳು ಗಾಯಕ್ಕೆ ಉಪ್ಪು ಸವರಿದರು. ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ಆಹಾರ ಬೆಲೆಗಳು ಮತ್ತು ತೈಲಬೆಲೆಗಳು ಏರಿದ್ದರಿಂದ ಈ ಬೆಲೆಯೇರಿಕೆಗಳಾಗಿವೆ, ಆದರೂ ಯುಪಿಎ ಸರಕಾರ ಭಾರತದಲ್ಲಿ ಹಣದುಬ್ಬರ ಬೇರೆ ದೇಶಗಳಷ್ಟು ಇರದಂತೆ ಕ್ರಮವಹಿಸಿಧೆ ಎಂದು ತಮ್ಮ ಬೆನ್ನು ತಾನೇ ತಟ್ಟಿಕೊಂಡರು.

ಇದು ವಿಪರೀತ ಬೆಲೆಯೇರಿಕೆಯಿಂದ ತತ್ತರಿಸುತ್ತಿರುವ ಜನಗಳಿಗೆ ಯಾವುದೇ ಸಮಾಧಾನ ಕೊಡುವುದಿಲ್ಲ , ಮಾತ್ರವಲ್ಲ, ಅವರ ಈ ಹೇಳಿಕೆ ನಿಜವೂ ಅಲ್ಲ. ನಿಜ, ಅಂತರ್‍ರಾಷ್ಟ್ರೀಯವಾಗಿ ಆಹಾರ ಬೆಲೆಗಳು ಮತ್ತು ತೈಲಬೆಲೆಗಳ ಏರಿಕೆಯ ಪ್ರಭಾವವಿದೆ. ಎರಡಂಕಿ ಹಣದುಬ್ಬರ ಭಾರತವಲ್ಲದೆ, ರಶ್ಯಾ, ತುರ್ಕಿ, ಇಂಡೋನೇಷ್ಯಾ, ಪಾಕಿಸ್ತಾನ, ವೆನೆಜುವೆಲಾ, ಈಜಿಪ್ಟ್ ಮತ್ತು ಸೌದಿ ಅರೇಬಿಯಾದಲ್ಲೂ ಇದೆ. ಇವನ್ನು ಬಿಟ್ಟು ಬೇರೆಲ್ಲಾ ದೇಶಗಳಲ್ಲಿ ಹಣದುಬ್ಬರ ಎರಡಂಕಿ ತಲುಪಿಲ್ಲ. ಮುಂದುವರೆದ ಅರ್ಥಿಕಗಳು, ಮಾತ್ರವಲ್ಲ, ವಿಶ್ವಾದ ಚೀನ, ಮಲೇಷ್ಯಾ, ದಕ್ಷಿಣ ಕೊರಿಯ ಮತ್ತು ಥೈಲೆಂಡ್, ಲ್ಯಾಟಿನ್ ಅಮೆರಿಕಾದ ದೇಶಗಳಾದ ಬ್ರೆಜಿಲ್, ಅರ್ಜೆಂಟಿನ, ಚಿಲಿ ಮತ್ತು ಮೆಕ್ಸಿಕೊ ಹಾಗೂ ಪೂರ್ವ ಯುರೋಪಿನ ದೇಶಗಳಾದ ಚೆಕ್ ಗಣತಂತ್ರ, ಪೋಲಂಡ್ ಮತ್ತು ಹಂಗರಿಗಳಲ್ಲಿ ಹಣದುಬ್ಬರ ಭಾರತದಷ್ಟಿಲ್ಲ. ಭಾರತ ಸರಕಾರ ಹಣದುಬ್ಬರವನ್ನು ತಡೆಯುವಲ್ಲಿ ಬೇರೆ ದೇಶಗಳಿಗಿಂತ ಬಹಳ ಹಿಂದೆ ಬಿದ್ದಿರುವುದಂತೂ ವಾಸ್ತವ.

ಏಕೆ ಈ ವಿಫಲತೆ?

ಯುಪಿಎ ಸರಕಾರ ಬೆಲೆಯೇರಿಕೆ ತಡೆಯುವಲ್ಲಿ ಏಕೆ ವಿಫಲವಾಗಿದೆ ಎಂಬುದನ್ನು ನಾವು ಹಿಂದಿನ ಸಂಚಿಕೆಗಳಲ್ಲಿ ನೋಡಿದ್ದೇವೆ. ಸರಕಾರ ಹಣದುಬ್ಬರ ತಡೆಯಲು ವಹಿಸಿದ ಕ್ರಮವೆಂದರೆ ರಿಸರ್ವ್ ಬ್ಯಾಂಕ್ ಮೂಲಕ ಬಡ್ಡಿದರಗಳನ್ನು ಏರಿಸಿದ್ದು. ಆರ್ಥಿಕದಲ್ಲಿ ಹಣದ ಚಲಾವಣೆಯನ್ನು ನಿಧಾನಗೊಳಿಸಿದರೆ, ಬಳಕೆಯನ್ನು ಕಡಿಮೆ ಮಾಡಿಸಿದರೆ ಒಟ್ಟು ಬೇಡಿಕೆ ಕಡಿಮೆಯಾಗಬಹುದು ಎಂಬ ನಿರೀಕ್ಷೆಯಿಂದ. ಆದರೆ ಇದು ಈಗಿನ ಹಣದುಬ್ಬರದ ಬಗ್ಗೆ ತಪ್ಪು ತಿಳುವಳಿಕೆಯನ್ನು ತೋರಿಸುತ್ತದೆ ಎಂಬ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ಟೀಕೆ ನಿಜವಾಗುತ್ತಿದೆ. ಈಗ ತೀವ್ರ ಬೆಲೆಯೇರಿಕೆ ಆಗುತ್ತಿರುವುದು ಜೀವನಾವಶ್ಯಕ ವಸ್ತುಗಳಲ್ಲಿ. ಆದ್ದರಿಂದ ಅವುಗಳ ಬೆಲೆಯೇರಿದೆ ಎಂದ ಮಾತ್ರಕ್ಕೆ ಅವುಗಳ ಬಳಕೆ ಕಡಿಮೆ ಮಾಡುವುದು ಸಾಧ್ಯವಿಲ್ಲ. ಜನ ಅಷ್ಟೊಂದು ಆವಶ್ಯಕವಲ್ಲದ ವಸ್ತುಗಳ ಮೇಲಿನ ಖರ್ಚನ್ನು ಕಡಿಮೆ ಮಾಡಿ ಸರಿದೂಗಿಸಲು ಪ್ರಯತ್ನಿಸಬಹುದಷ್ಟೇ.

ಇಂತಹ ಸಂದರ್ಭದಲ್ಲಿ ಬಡ್ಡಿದರಗಳನ್ನು ಏರಿಸುವುದರಿಂದ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ. ಅದು ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನಂತೂ ಇಳಿಸುವುದಿಲ್ಲ. ಇನ್ನೊಂದೆಡೆ, ರೈತರಿಗೆ, ಸಣ್ಣ ಮತ್ತು



ಬೆಲೆ ಏರಿಕೆ ಇತ್ಯಾದಿಗಳ ವಿರುದ್ಧ ಆಗಸ್ಟ್ 20 ರಂದು ವಿರಾಜಪೇಟೆಯಲ್ಲಿ ಪ್ರತಿಭಟನೆ

ಮಧ್ಯಮ ಉದ್ದಿಮೆಗಳಿಗೆ ಹಾಗೂ ಮನೆ ಇತ್ಯಾದಿಗಳಿಗೆ ಸಾಲ ಮಾಡುವ ಮಧ್ಯಮ ವರ್ಗದವರ ಸಂಕಟಗಳನ್ನು ಹೆಚ್ಚಿಸುತ್ತದೆ.

ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆಯನ್ನು ಪರಿಣಾಮಕಾರಿಯಾಗಿ ತಡೆಯಲು ಇರುವ ಎಕೈಕ ದಾರಿಯೆಂದರೆ ಬೆಲೆಗಳ ಮೇಲೆ ಹತೋಟಿ ತರಲು

ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ಆಹಾರ ಬೆಲೆಗಳು ಮತ್ತು ತೈಲಬೆಲೆಗಳು ಏರಿದ್ದರಿಂದ ಬೆಲೆಯೇರಿಕೆಯಾಗುತ್ತಿದೆ, ಆದರೂ ಯುಪಿಎ ಸರಕಾರ ಭಾರತದಲ್ಲಿ ಹಣದುಬ್ಬರ ಬೇರೆ ದೇಶಗಳಷ್ಟು ಇರದಂತೆ ಕ್ರಮವಹಿಸಿದೆ ಎಂದು ಪ್ರಧಾನಮಂತ್ರಿಗಳು ಕೆಂಪುಕೋಟೆಯಿಂದ ಸಾರಿದರು. ಇದು ಎಷ್ಟು ನಿಜ? ಈ ಜಾಗತಿಕ ಬೆಲೆಯೇರಿಕೆಗಾದರೂ ಕಾರಣವೇನು? ಅದಕ್ಕೆ ನೇರವಾಗಿ ಸಾಮ್ರಾಜ್ಯಶಾಹಿ ದೇಶಗಳು ಡಬ್ಳ್ಯು ಟಿ ಒ ಮತ್ತು ಇತರ ಅಂತರ್‍ರಾಷ್ಟ್ರೀಯ ಸಂಸ್ಥೆಗಳ ಮೂಲಕ ಮುಂದೊತ್ತಿರುವ ನೀತಿಗಳೇ ಕಾರಣವಲ್ಲವೇ?. ಆದರೆ ಮನಮೋಹನಸಿಂಗ್ ಸರಕಾರ ಈ ನೀತಿಗಳಿಂದ ದೇಶದ ಜನಗಳಿಗೆ ರಕ್ಷಣೆ ಒದಗಿಸುವ ಬದಲು, ಅವೇ ನೀತಿಗಳನ್ನು ಮುಂದೊತ್ತುವ ತರಾತುರಿಯನ್ನಷ್ಟೇ ತೋರುತ್ತಿದ್ದರೆ ಬೆಲೆಗಳು ಹೀಗೆಯೇ ಏರುತ್ತಲೇ ಇರುತ್ತವೆ.

ಸರಕಾರ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶಿಸುವುದು. ಆದರೆ ಪ್ರಧಾನ ಮಂತ್ರಿಗಳಾಗಲೀ, ಅವರ ಸರಕಾರದ ಇತರ ಆರ್ಥಿಕ ನಿರ್ವಹಣಾಗಾರರಾಗಲೀ(ಚಿದಂಬರಂ ಮತ್ತು ಮೊಂಟೆಕ್ ಸಿಂಗ್ ಅಹ್ಲುವಾಲಿಯ) ಇದಕ್ಕ ವಿರುದ್ಧವಾಗಿದ್ದಾರೆ. ಏಕೆಂದರೆ ಇದು ಅವರ ನವ-ಉದಾರವಾದಿ ನಂಬಿಕೆಗಳಿಗೆ ವಿರುದ್ಧವಾದ ಸಂಗತಿ. ಮಾರುಕಟ್ಟೆ-ಆಧಾರಿತ ಹಣಕಾಸು ಮಧ್ಯಪ್ರವೇಶಗಳಷ್ಟೇ ಸಾಕು ಎಂದು ಅವರ ನಂಬಿಕೆ. ಆದರೆ ಅದರಿಂದ ಏನೂ ಪರಿಣಾಮವಾಗಿಲ್ಲ, ಆಗುವುದೂ ಇಲ್ಲ.

ಜಾಗತಿಕ ಬೆಲೆಯೇರಿಕೆಯಾದರೂ ಏಕೆ?

ನಿಜ, ಪ್ರಧಾನಿಗಳು ಹೇಳುವಂತೆ ಜಾಗತಿಕ ಬೆಲೆಯೇರಿಕೆ ನಮ್ಮ ದೇಶದೊಳಗಿನ ಬೆಲೆಯೇರಿಕೆಯ ಮೇಲೆ ಪರಿಣಾಮ ಬೀರಿದೆ. ಆದರೆ ಈ ಜಾಗತಿಕ ಬೆಲೆಯೇರಿಕೆಗೆ ಕಾರಣವೇನು? ಅದಕ್ಕೆ ನೇರವಾಗಿ ಸಾಮ್ರಾಜ್ಯಶಾಹಿ ದೇಶಗಳು ಡಬ್ಳ್ಯು ಟಿ ಒ ಮತ್ತು ಇತರ ಅಂತರ್‍ರಾಷ್ಟ್ರೀಯ ಸಂಸ್ಥೆಗಳ ಮೂಲಕ ಮುಂದೊತ್ತಿರುವ ನೀತಿಗಳೇ ಕಾರಣ. ಇವು ರಾಷ್ಟ್ರೀಯ ನಿಯಂತ್ರಣ ವ್ಯವಸ್ಥೆಗಳನ್ನು ಕಳಚಿ ಹಾಕಿ ಮಾರುಕಟ್ಟೆಗಳನ್ನು ಆಸೆಬುರುಕ ಬಹುರಾಷ್ಟ್ರೀಯ ಕಂಪನಿಗಳಿಗೆ ತೆರೆದು ಕೊಟ್ಟಿರುವ ನೀತಿಗಳು.

ಅಂತರ್‍ರಾಷ್ಟ್ರೀಯ ತೈಲಬೆಲೆಗಳ ಏರಿಕೆಯಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಯ ಪಾತ್ರ ಎಲ್ಲರ ಕಣ್ಣ ಮುಂದಿದೆ. ಅವರ ದಾಳಿಯಿಂದ ವಿನಾಶಗೊಂಡ ಇರಾಕಿನಲ್ಲಿ ಈಗ ತೈಲ ಉತ್ಪಾದನೆ ಮೂರನೇ ಒಂದು ಭಾಗ ಮಾತ್ರ. ಇರಾಕ್ ಯುದ್ಧದ ಮೊದಲು ಕಚ್ಚಾತೈಲದ ಬೆಲೆ ಬ್ಯಾರಲ್ಲಿಗೆ 25 ಡಾಲರ್ ಇದ್ದದ್ದು ಇತ್ತೀಚೆಗೆ 140 ಡಾಲರು ದಾಟಿತು. ಅಮೆರಿಕನ್ ಶೇರು ಮಾರುಕಟ್ಟೆಯಲ್ಲಿ ಅಪಾರ ನಷ್ಟ ಮಾಡಿಕೊಂಡ ಅಲ್ಲಿನ ಹಣಕಾಸು ಕಂಪನಿಗಳು, ಸಿಟಿಗ್ರೂಪ್, ಜೆಪಿ ಮಾರ್ಗನ್ ಚೇಸ್, ಮಾರ್ಗನ್ ಸ್ಟಾನ್ಲಿ ಮತ್ತು ಗೋಲ್ಡ್‌ಮನ್ ಸಾಕ್ಸ್, ತಮ್ಮ ನಷ್ಟಗಳನ್ನು ಜೂಜಿನ ಲಾಭಗಳ ಮೂಲಕ ಭರ್ತಿ ಮಾಡಿಕೊಳ್ಳಲು ತೈಲ ವಾಯಿದಾ ಮಾರುಕಟ್ಟೆಯಲ್ಲಿ ಅಗಾಧ ಹಣ ತೊಡಗಿಸಿದವು. ಇನ್ನೊಂದೆಡೆ, ಇದೇ ಹಣಕಾಸು ಜೂಜುಕೋರರು ಮತ್ತು ಕಾರ್ಗಿಲ್, ಮೊನ್ಸಾಂಟೊ, ಸಿಂಜೆನ್ಟಾದಂತಹ ಬಹುರಾಷ್ಟ್ರೀಯ ಧಾನ್ಯ ವ್ಯಾಪಾರ ಕಂಪನಿಗಳು ಮತ್ತು ರಸಗೊಬ್ಬರ ಕಂಪನಿಗಳು ಜಾಗತಿಕ ಆಹಾರಬೆಲೆಗಳ ಏರಿಕೆಗೂ, ಆಹಾರ ಬಿಕ್ಕಟ್ಟಿಗೂ, ಇದರಿಂದಾಗಿ ಹಲವು ದೇಶಗಳಲ್ಲಿ ಆಹಾರ ದಂಗೆಗಳಿಗೂ ಕಾರಣವಾಗಿವೆ.

ಏಕೈಕ ದಾರಿ

ಆದ್ದರಿಂದ ಜಾಗತಿಕ ಬೆಲೆಯೇರಿಕೆ ಸಾಮ್ರಾಜ್ಯಶಾಹಿ ಜಾಗತೀಕರಣದ ನೇರ ಫಲ. ಇದರಿಂದ ಭಾರತದ ಜನಗಳನ್ನು ಉಳಿಸಬೇಕಾದರೆ ಈ ಜಾಗತೀಕರಣದ ನೀತಿಗಳನ್ನು ಕೈಬಿಡಬೇಕು. ಯುಪಿಎ ಸರಕಾರ ತನ್ನ ರಾಷ್ಟ್ರೀಯ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಈ ಬಗ್ಗೆ ಭರವಸೆಗಳನ್ನು ಕೊಟ್ಟಿತ್ತು. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವುದಾಗಿ ಹೇಳಿತ್ತು. ಅದರ ಬದಲು ಅದನ್ನು 'ಗುರಿಗೊಳಿಸುವ' ಹೆಸರಿನಲ್ಲಿ ಅದನ್ನು ಸೀಮಿತಗೊಳಿಸುವ ಪ್ರಯತ್ನವನ್ನೆ ಮುಂದುವರೆಸುತ್ತಿದೆ. ರಾಜ್ಯಗಳಿಗೆ ಕೇಂದ್ರದಿಂದ ಒದಗಿಸುವ ಆಹಾರಧಾನ್ಯಗಳ ಪ್ರಮಾನವನ್ನು ಕಡಿತ ಮಾಡುತ್ತಿದೆ. ಈ ಮೂಲಕ ವಿಪರೀತ ಬೆಲೆಯೇರಿಕೆಯಿಂದ ಬಡಜನರಿಗೆ ಸ್ವಲ್ಪವಾದರೂ ಪರಿಹಾರ ಒದಗಿಸಬಹುದಾಗಿದ್ದ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಕಳಚಿ ಹಾಕಲಾಗುತ್ತಿದೆ. ಅಲ್ಲದೆ ಈ ಸರಕಾರ ಏಳು ಬಾರಿ ಪೆಟ್ರೋಲ್-ಡೀಸೆಲ್ ಬೆಲೆಗಳನ್ನು ಏರಿಸಿದೆ. ಪೆಟ್ರೋ ಉತ್ಪನ್ನಗಳ ಮೇಲೆ ಅಬಕಾರಿ ಸುಂಕಗಳನ್ನು ಇಳಿಸಬೇಕೆಂಬ ಸಿಪಿಐ(ಎಂ) ಮತ್ತು ಮತ್ತು ಇತರ ಎಡಪಕ್ಷಗಳ ಸಲಹೆಯನ್ನು ಉಪೇಕ್ಷಿಸಿದೆ. ಪರಿಣಾಮವಾಗಿ ಹಣದುಬ್ಬರದ ದರ 13 ಶೇಕಡಾದತ್ತ ಭರದಿಂದ ಸಾಗಿದೆ.

ಈ ಸರಕಾರಕ್ಕೆ ಬೆಲೆಯೇರಿಕೆಗಳಿಂದ ಜನಗಳಿಗೆ ನಿಜವಾಗಿಯೂ ಪರಿಹಾರ ಒದಗಿಸಬೇಕೆಂಬ ಕಾಳಜಿಯಿದ್ದರೆ ಅದು ಸಾರ್ವಜನಿಕ ವಿತರಣ ವ್ಯವಸ್ಥೆಯನ್ನು ಸಾರ್ವತ್ರಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಲು ಆಹಾರ ಸಬ್ಸಿಡಿಗಳನ್ನು ಹೆಚ್ಚಿಸಬೇಕು, ಸಕ್ಕರೆಯೂ ಸೇರಿದಂತೆ ಆಹಾರ ಸಾಮಗ್ರಿಗಳಲ್ಲಿ ವಾಯಿದಾ ವ್ಯಾಪಾರವನ್ನು ನಿಷೇಧಿಸಬೇಕು ಹಾಗೂ ತೈಲಬೆಲೆಗಳನ್ನು ಇಳಿಸಲು ಸುಂಕಗಳನ್ನು ಕಡಿತಗೊಳಿಸಬೇಕು. ಆದರೆ ಮನಮೋಹನಸಿಂಗ್ ಸರಕಾರ ಜನಗಳಿಗೆ ಪರಿಹಾರ ನೀಡಬಹುದಾದ ಇಂತಹ ಕ್ರಮಗಳನ್ನು ಕೈಗೊಳ್ಳುವ ಬದಲು ಈ ಬೆಲೆಯೇರಿಕೆಗಳಿಗೆ ದೇಶದಲ್ಲೂ, ಜಾಗತಿಕವಾಗಿಯೂ ಕಾರಣವಾಗಿರುವ ಅವೇ ನವ-ಉದಾರವಾದಿ ನೀತಿಗಳನ್ನು ಮುಂದೊತ್ತುವ ತರಾತುರಿಯನ್ನಷ್ಟೇ ತೋರುತ್ತಿದೆ.

ಜನಶಕ್ತಿ ಕನ್ನಡ ವಾರಪತ್ರಿಕೆ

ಆಗಸ್ಟ್ 31, 2008

ದೇಶವ್ಯಾಪಿ ಮುಷ್ಕರ ಆಳುವ ಜನರಿಗೆ ಎಚ್ಚರಿಕೆ

2008 ರ ಆಗಸ್ಟ್ 20 ಭಾರತದ ಕಾರ್ಮಿಕ ವರ್ಗದ ಇತಿಹಾಸದಲ್ಲೇ ಒಂದು ಮೈಲುಗಲ್ಲನ್ನು ಸೃಷ್ಟಿಸಿದೆ. ಬೆಲೆ ಏರಿಕೆಗೆ ಕಡಿವಾಣ ಹಾಕಲು ಕೇಂದ್ರ - ರಾಜ್ಯ ಸರ್ಕಾರಗಳು ವಿಫಲವಾಗಿರುವುದನ್ನು, ರೈತರ ಆತ್ಮಹತ್ಯೆ ತಡೆಯದಿರುವುದನ್ನು, ಅಸಂಘಟಿತ ಕಾರ್ಮಿಕರಿಗೆ ಸುರಕ್ಷಾ ಮಸೂದೆ ಜಾರಿ ಮಾಡದಿರುವುದನ್ನು, ನಿರಂತರವಾಗಿ ಕಾರ್ಮಿಕ ಕಾನೂನುಗಳು ಉಲ್ಲಂಘನೆಯಾಗುತ್ತಿರುವುದನ್ನು ವಿರೋಧಿಸಿ ಸುಮಾರು 8 ಕೋಟಿ ಶ್ರಮಿಕರು ಆಗಸ್ಟ್ 20 ರಂದು ಪ್ರತಿಭಟನೆಗಿಳಿದು ಆಳುವ ಸರ್ಕಾರಗಳ ಜನವಿರೋಧಿ ನೀತಿಗಳಿಗೆ ಪ್ರತಿರೋಧ ವ್ಯಕ್ತಪಡಿಸಿದ್ದಾರೆ.

ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳ ಜಾರಿಗೆ ಮುಂದಾಗಿ ಸಾರ್ವಜನಿಕ ವಲಯಗಳಾದ ಬ್ಯಾಂಕಿಂಗ್, ವಿಮಾ, ರಕ್ಷಣಾ, ರೈಲ್ವೆ, ದೂರಸಂಪರ್ಕ, ಅಂಚೆ ಹಾಗೂ ವಿಮಾನಯಾನದಂತಹ ಸೂಕ್ಷ್ಮ ವಲಯಗಳನ್ನು ಖಾಸಗೀಕರಿಸಲು ಕೇಂದ್ರದ ಮನಮೋಹನ್ ಸಿಂಗ್ ಸರ್ಕಾರ ನಡೆಸುತ್ತಿರುವ ದೇಶ ವಿರೋಧಿ ನೀತಿಗಳ ವಿರುದ್ಧ ಆ ವಿಭಾಗದ ನೌಕರರು ಅಧಿಕಾರಿಗಳು ಈ ಭಾರೀ ವಿರೋಧವನ್ನು ವ್ಯಕ್ತಪಡಿಸಿದರು. ಇದಲ್ಲದೆ ಕಲ್ಲಿದ್ದಲು, ಇಂಧನ ಕ್ಷೇತ್ರದ ಕಾರ್ಮಿಕರು, ಪ್ರಾಥಮಿಕ ಶಾಲಾ ಶಿಕ್ಷಕರು, ಕಾಲೇಜು ಅಧ್ಯಾಪಕರು ರಸ್ತೆ ಸಾರಿಗೆ ಸಂಸ್ಥೆಗಳ ನೌಕರರು ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರು ಈ ಬಾರಿಯ ಮುಷ್ಕರದಲ್ಲಿ ಸಕ್ರಿಯವಾಗಿ ದೇಶಾದ್ಯಂತ ಪಾಲ್ಗೊಂಡು ಉದಾರೀಕರಣ ನೀತಿಗಳ ಭಾಗವಾಗಿ ಜಾರಿಯಾಗುತ್ತಿರುವ ಆಡಳಿತಾತ್ಮಕ ಸುಧಾರಣೆಗಳ ವಿರುದ್ಧ ಧ್ವನಿ ಎತ್ತಿದ್ದಾರೆ.

ಆಗಸ್ಟ್ 20 ರ ಸಾರ್ವತ್ರಿಕ ಮುಷ್ಕರದಲ್ಲಿ ನೇರವಾಗಿ ಸುಮಾರು 800 ಲಕ್ಷ ಜನರು ಪಾಲ್ಗೊಂಡು ಹೋರಾಟದ ಮಹತ್ವವನ್ನು ಹೆಚ್ಚಿಸಿದ್ದಾರೆ. ಅಲ್ಲದೆ ಇನ್ನೂ ಹತ್ತಾರು ಲಕ್ಷ ಜನರು ಈ ಚಳುವಳಿಯನ್ನು ಅಪ್ರತ್ಯಕ್ಷವಾಗಿ ಬೆಂಬಲಿಸಿದ್ದಾರೆ.

ವಿಶೇಷವಾಗಿ ದೇಶದ ಕಾರ್ಮಿಕ ಚಳುವಳಿಗಳು ಬಲಿಷ್ಠವಾಗಿರುವ ಪ.ಬಂಗಾಳ, ಕೇರಳ ಮತ್ತು ತ್ರಿಪುರಾಗಳಲ್ಲಿ ಆಗಸ್ಟ್ 20 ರ ಮುಷ್ಕರ ಬಂದ್ ಆಗಿ ಮಾರ್ಪಟ್ಟಿತ್ತು. ಆ ರಾಜ್ಯಗಳಲ್ಲಿ ಎಲ್ಲಾ ವ್ಯಾಪಾರ ವಹಿವಾಟುಗಳು, ಕೈಗಾರಿಕೆಗಳು, ಸರ್ಕಾರಿ ಕಛೇರಿಗಳು, ಶಾಲಾ-ಕಾಲೇಜುಗಳು, ರಸ್ತೆ ಸಾರಿಗೆ ವ್ಯವಸ್ಥೆ ಸಂಪೂರ್ಣ ಸ್ತಬ್ಧಗೊಂಡಿತ್ತು.

ಇದಲ್ಲದೆ ಅಸ್ಸಾಂ, ಮಣಿಪುರ, ಒರಿಸ್ಸಾ, ಹರಿಯಾಣ, ಬಿಹಾರ, ಜಾರ್ಖಂಡ್‌ಗಳಲ್ಲಿ ಸಾರ್ವತ್ರಿಕ ಮುಷ್ಕರಕ್ಕೆ ಭಾರಿ ಸ್ಪಂದನೆ ದೊರೆತಿದೆ. ಇದಲ್ಲದೆ ಛತ್ತೀಸ್‌ಗಡ, ಕರ್ನಾಟಕ, ರಾಜಸ್ಥಾನ, ಪಂಜಾಬ್‌ಗಳಲ್ಲೂ ವಿವಿಧ ಜಿಲ್ಲಾ-ತಾಲ್ಲೂಕು ಕೇಂದ್ರಗಳಲ್ಲಿ ಹರತಾಳ ಯಶಸ್ವಿಯಾಗಿದೆ. ಮಣಿಪುರದಲ್ಲಿ ಪ್ರತ್ಯೇಕತಾವಾದಿಗಳು ಹರಿಯಬಿಟ್ಟಿರುವ ಹಿಂಸಾಚಾರದ ನಡುವೆಯೂ ಮುಷ್ಕರ ಸಾಕಷ್ಟು ಯಶಸ್ವಿಯಾಗಿದೆ.

ದೇಶಾದ್ಯಂತ ನಡೆದ ಆಗಸ್ಟ್ 20 ಮುಷ್ಕರಕ್ಕೆ ವಿವಿಧ ರಾಜ್ಯಗಳಲ್ಲಿ ಭಾರಿ ಸ್ಪಂದನೆ ದೊರೆತಿದೆ ಅದರ ಸಂಕ್ಷೇಪ್ತ ವಿವರ ಇಲ್ಲಿದೆ.

ಆಂಧ್ರಪ್ರದೇಶ: ರಾಜ್ಯದಲ್ಲಿ ಮುಷ್ಕರ ಬಹುತೇಕ ಯಶಸ್ವಿಯಾಗಿತ್ತು. ಹೈದ್ರಾಬಾದ್ ಕೈಗಾರಿಕಾ ಪ್ರದೇಶದಲ್ಲಿ 70 ರಷ್ಟು ಮುಷ್ಕರ ಯಶಸ್ವಿಯಾಗಿದೆ. ಕೇಂದ್ರ -ರಾಜ್ಯ ಸರ್ಕಾರಿ ನೌಕರರ ಕಛೇರಿಗಳು ಸಂಪೂರ್ಣ ಸ್ಥಗಿತಗೊಂಡಿದ್ದವು. ರಾಜ್ಯಾದ್ಯಂತ ಅಸಂಘಟಿತ ಕಾರ್ಮಿಕರು ರೈಲು ತಡೆ-ರಸ್ತೆ ತಡೆ ಕಾರ್ಯಕ್ರಮ ಪಾಲ್ಗೊಂಡಿದ್ದರು.



ಅಸ್ಸಾಂ: ಅಸ್ಸಾಂನ ರಾಜಧಾನಿ ಮುಷ್ಕರದಿಂದಾಗಿ ಸಂಪೂರ್ಣ ಸ್ಥಗಿತಗೊಂಡಿತ್ತು. ಸರ್ಕಾರಿ ಸಾರಿಗೆ, ಖಾಸಗಿ ಸಾರಿಗೆ, ಆಟೋರಿಕ್ಷಾಗಳು ರಸ್ತೆಗಿಳಿಯಲಿಲ್ಲ. ರೈಲು ಮತ್ತು ಬಸ್ ನಿಲ್ದಾಣಗಳಲ್ಲಿ ಕಾರ್ಮಿಕರು ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು. ಬ್ಯಾಂಕ್, ವಿಮಾ, ದೂರಸಂಪರ್ಕ, ಅಂಚೆ, ರಕ್ಷಣೆ, ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರು ಮುಷ್ಕರದಲ್ಲಿ ಭಾಗವಹಿಸಿದ್ದರು. ಅಲ್ಲದೆ ರಾಜ್ಯದ ಪೆಟ್ರೋಲಿಯಂ ಕ್ಷೇತ್ರದಲ್ಲಿ ಮುಷ್ಕರ ಯಶಸ್ವಿಯಾಗಿದೆ.

ಬಿಹಾರ: ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಮುಷ್ಕರದಿಂದಾಗಿ 'ಬಂದ್' ನ ವಾತಾವರಣ ನಿರ್ಮಾಣವಾಗಿತ್ತು. ನಲಂದ, ಪುರ್ನಿಯಾ, ಕಾಟಿಯಾರ್, ಬೇಗುಸರೈ, ಬಾಗಲ್ಪುರ್, ಜನಬಾದ್‌ಗಳಲ್ಲಿ ಬಂದ್ ನಡೆದಿದೆ. ಹಣಕಾಸು ವಲಯದ ನೌಕರರು ಭಾರೀ ಸಂಖ್ಯೆಯಲ್ಲಿ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಇಂಧನ ಕ್ಷೇತ್ರದಲ್ಲಿ ಯಶಸ್ವಿ ಮುಷ್ಕರ ಆಗಿದೆ. ಪಾಟ್ನಾದಲ್ಲಿ ಶೇ.80 ರಷ್ಟು ಆಟೋರಿಕ್ಷಾಗಳು ಬೀದಿಗಿಳಿಯಲಿಲ್ಲ. ಅಂಗನವಾಡಿ, ಬೀಡಿ, ಸೇರಿದಂತೆ ವಿವಿಧ ಕ್ಷೇತ್ರಗಳ ಕಾರ್ಮಿಕರು ರಾಜ್ಯದ ವಿವಿಧೆಡೆ ರಸ್ತೆ ತಡೆ-ರೈಲುತಡೆ ನಡೆಸಿದ್ದಾರೆ. ಉತ್ತರ ಬಿಹಾರದಲ್ಲಿ ಮುಷ್ಕರದಿಂದಾಗಿ ರೈಲು ಸಂಚಾರ ಅಸ್ತವ್ಯಸ್ಥ ಗೊಂಡಿತ್ತು. ರಾಜ್ಯದಲ್ಲಿ ಹಲವಾರು ಜಿಲ್ಲೆಗಳಲ್ಲಿ ರೈತರು ರಸ್ತೆ ತಡೆ ಚಳುವಳಿ ನಡೆಸಿದ್ದಾರೆ.

ಪುಟ 11 ಕ್ಕೆ

ಆಗಸ್ಟ್ 20 ಈ ಮಹಾಮುಷ್ಕರ ಯಶಸ್ವಿಯ ಪ್ರಮುಖ ಅಂಶಗಳು

1. ಮುಷ್ಕರದಲ್ಲಿ ದೇಶದ ಒಟ್ಟಾರೆ ಹಣಕಾಸು ವಲಯಗಳಾದ ಬ್ಯಾಂಕ್, ವಿಮಾ ವಲಯಗಳಲ್ಲಿ ಮುಷ್ಕರ ಸಂಪೂರ್ಣ ಯಶಸ್ವಿಯಾಯಿತು. ಆ ವಿಭಾಗದ ಸುಮಾರು 20 ಲಕ್ಷ ನೌಕರರು ಈ ಹೋರಾಟದಲ್ಲಿ ಪಾಲ್ಗೊಂಡಿದ್ದರು.
2. ಸುಮಾರು 10 ದಶಲಕ್ಷ ರಾಜ್ಯ ಸರ್ಕಾರಿ ನೌಕರರು, ಶಿಕ್ಷಕರು, ಸಾರ್ವಜನಿಕ ಉದ್ದಿಮೆಗಳ ನೌಕರರು, ಈ ಮುಷ್ಕರದ ಭಾಗವಾಗಿ ಪ್ರತಿಭಟನೆ ನಡೆಸಿದರು.
3. ಕೇಂದ್ರ ಸರ್ಕಾರಿ ನೌಕರರ ಸುಮಾರು 2 ದಶಲಕ್ಷ ನೌಕರರು ಅಂದರೆ ಸುಮಾರು 80 ರಷ್ಟು ನೌಕರರು ಈ ಮುಷ್ಕರದಲ್ಲಿ ಭಾಗವಹಿಸಿದ್ದರು.
4. ಪೆಟ್ರೋಲಿಯಂ ಕ್ಷೇತ್ರದಲ್ಲಿ ಮುಷ್ಕರಕ್ಕೆ ಭಾರೀ ಸ್ಪಂದನೆ ದೊರೆತಿದೆ. ಪೂರ್ವ, ಉತ್ತರ, ಮತ್ತು ದಕ್ಷಿಣ ಭಾಗದಲ್ಲಿ ಈ ವಿಭಾಗದಲ್ಲಿ ಕಾರ್ಮಿಕರು ನೌಕರರು, ಮುಷ್ಕರದಲ್ಲಿ ಭಾಗವಹಿಸಿದ್ದರು. ದೇಶಾದ್ಯಂತ ರಸ್ತೆ ತಡೆ, ರೈಲು ತಡೆ ಚಳುವಳಿಯಲ್ಲಿ ಪಾಲ್ಗೊಂಡಿದ್ದಾರೆ.
5. ಉಕ್ಕಿನ ಕ್ಷೇತ್ರದಲ್ಲಿ ಮುಷ್ಕರ ಯಶಸ್ವಿಯಾಗಿದೆ. ದುರ್ಗಾಪುರದಲ್ಲಿ ಬಂದ್ ಸಂಪೂರ್ಣ ಯಶಸ್ವಿಯಾಗಿದೆ. ಇತರೆ ಉಕ್ಕಿನ ಕೈಗಾರಿಕಾ ಕ್ಷೇತ್ರಗಳಲ್ಲಿ ಮುಷ್ಕರ ಭಾಗಶಃ ಯಶಸ್ವಿಯಾಗಿದೆ.
6. ದೂರಸಂಪರ್ಕ ಕ್ಷೇತ್ರದಲ್ಲಿ ವಿಶೇಷವಾಗಿ ಬಿಎಸ್‌ಎನ್‌ಎಲ್- ಎಂಟಿಎನ್‌ಎಲ್‌ಗಳ ಸುಮಾರು ಶೇ.70 ರಷ್ಟು ಮುಷ್ಕರ ಯಶಸ್ವಿಯಾಗಿದೆ. ಲಕ್ಷಾಂತರ ನೌಕರರು ಗುತ್ತಿಗೆ ಕಾರ್ಮಿಕರು ಈ ಚಳುವಳಿಯಲ್ಲಿ ಪಾಲ್ಗೊಂಡಿದ್ದಾರೆ.
7. ಕಲ್ಲಿದ್ದಲು ಮತ್ತು ಗಣಿ ಕ್ಷೇತ್ರಗಳ ಸುಮಾರು ಆರು ಲಕ್ಷ ಕಲ್ಲಿದ್ದಲು ಕಾರ್ಮಿಕರು ಈ ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಕಲ್ಲಿದ್ದಲು ಗಣಿಗಳಲ್ಲದೆ ಜಾರ್ಖಂಡ್, ಒರಿಸ್ಸಾ, ಛತ್ತೀಸ್‌ಗಡ, ಮದ್ಯಪ್ರದೇಶಗಳಲ್ಲಿ ಗಣಿ ಆಧಾರಿತ ಚಟುವಟಿಕೆಗಳು ಬಹುತೇಕ ಸ್ತಬ್ಧಗೊಂಡಿದ್ದವು.
8. ಬೆಂಗಳೂರು, ಹೈದ್ರಾಬಾದ್ ಮತ್ತು ವಿಶಾಖಪಟ್ಟಣಗಳಲ್ಲಿ ಸಾರ್ವಜನಿಕ ಕ್ಷೇತ್ರಗಳ ಸಾವಿರಾರು ನೌಕರರು ಮತ್ತು ಅವುಗಳ ಗುತ್ತಿಗೆ ಕಾರ್ಮಿಕರು ಈ ಹೋರಾಟದಲ್ಲಿ ಭಾಗವಹಿಸಿದ್ದಾರೆ.
9. ಪ್ಲಾಂಟೇಷನ್ ಕ್ಷೇತ್ರದಲ್ಲಿ ಆಗಸ್ಟ್ 20 ರ ಮುಷ್ಕರಕ್ಕೆ ಒಳ್ಳೆಯ ಸ್ಪಂದನೆ ದೊರೆತಿದೆ.
10. ಅಸಂಘಟಿತ ಕ್ಷೇತ್ರದ ಕಾರ್ಮಿಕರಾದ ಇಟ್ಟಿಗೆ, ಹೆಂಚು, ಕಾರ್ಮಿಕರು, ಹಮಾಲಿ ಕಾರ್ಮಿಕರು, ಬೀಡಿ ಕಾರ್ಮಿಕರು, ಬಜಾರ್ ಕಾರ್ಮಿಕರು, ಭಾರಿ ಸಂಖ್ಯೆಯಲ್ಲಿ ದೇಶಾದ್ಯಂತ ರಸ್ತೆ ತಡೆ, ರೈಲು ತಡೆ ಚಳುವಳಿಯಲ್ಲಿ ಪಾಲ್ಗೊಂಡಿದ್ದಾರೆ.
11. ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ (ಸಂಘಟಿತ -ಅಸಂಘಟಿತ) ಕೆಲಸ ಮಾಡುತ್ತಿರುವ ಸಾವಿರಾರು ಕಾರ್ಮಿಕರು ಮತ್ತು ಹೈಡಲ್ ಪ್ರಾಜೆಕ್ಟ್‌ಗಳಲ್ಲಿ ಕೆಲಸ ಮಾಡುತ್ತಿರುವ ಹಿಮಾಚಲ ಪ್ರದೇಶ, ಉತ್ತರಾಂಚಲ, ಮತ್ತು ಜಮ್ಮುವಿನ ಕಾರ್ಮಿಕರು ಈ ಮುಷ್ಕರದಲ್ಲಿ ಸಂಪೂರ್ಣವಾಗಿ ಭಾಗವಹಿಸಿದ್ದರು.
12. ಸುಮಾರು 8 ಲಕ್ಷ ಅಂಗನವಾಡಿ ನೌಕರರು ಈ ಮುಷ್ಕರದಲ್ಲಿ ಭಾಗವಹಿಸಿದ್ದರು.
13. ದೇಶಾದ್ಯಂತ ಲಕ್ಷಾಂತರ ಮೀನುಗಾರರು ಮತ್ತು ಮೀನುಗಾರಿಕಾ ಚಟುವಟಿಕೆಗಳಲ್ಲಿ ನಿರತರಾಗಿರುವ ಕಾರ್ಮಿಕರು ಈ ಮುಷ್ಕರದಲ್ಲಿ ಭಾಗವಹಿಸಿದ್ದರು.
14. ಸರ್ಕಾರಿ ಮತ್ತು ಖಾಸಗೀ ಕ್ಷೇತ್ರಗಳ ಸಾರಿಗೆ ನೌಕರರು ಈ ಹೋರಾಟದಲ್ಲಿ ಅಧಿಕ ಪ್ರಮಾಣದಲ್ಲಿ ಪಾಲ್ಗೊಂಡಿದ್ದಾರೆ.

ಅಲ್ಲದೆ ವಿದ್ಯುತ್ ವಲಯದ ನೌಕರರು ಹಲವಾರು ರಾಜ್ಯಗಳಲ್ಲಿ ಆಗಸ್ಟ್ 20 ರಂದು ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಿದ್ದಾರೆ.

ರಾಜ್ಯಾದ್ಯಂತ ಮುಷ್ಕರಕ್ಕೆ ವ್ಯಾಪಕ ಬೆಂಬಲ

ಆಗಸ್ಟ್ 20 ರ ಅಖಿಲ ಭಾರತ ಮುಷ್ಕರಕ್ಕೆ ರಾಜ್ಯದಲ್ಲಿ ನಿರೀಕ್ಷೆಗೂ ಮೀರಿದ ಬೆಂಬಲ ದೊರೆತಿದೆ. ಕನಿಷ್ಟ 9 ಜಿಲ್ಲಾ ಕೇಂದ್ರಗಳಲ್ಲಿ ಹಾಗೂ 50 ಕ್ಕೂ ಹೆಚ್ಚು ತಾಲ್ಲೂಕು ಕೇಂದ್ರ ಮತ್ತು ಇತರೆ ಪಟ್ಟಣಗಳಲ್ಲಿ ಮುಷ್ಕರವು ಬಂದ್ ಆಗಿ ಪರಿವರ್ತಿತವಾಗಿದೆ. ಇದು ಜನರ ಅತೃಪ್ತಿಯಲ್ಲಿ ಸೂಚಿಸುತ್ತದೆ. ಅನೇಕ ಕಡೆ ಭಾಗಶ: ಬಂದ್ ಆಗಿದೆ.



ಬಂದ್ ಮತ್ತು ಮುಷ್ಕರದ ವ್ಯತ್ಯಾಸ ತಿಳಿಯದ ಅಥವಾ ತಿಳಿದೂ ಜನರನ್ನು ದಾರಿ ತಪ್ಪಿಸಬಯಸುವ ಮಾಧ್ಯಮ ಮಿತ್ರರು ಮಾತ್ರ 'ಬಂದ್ ನೀರಸ' "ಮಿಶ್ರ ಪ್ರತಿಕ್ರಿಯೆ" ಎಂದು ತಲೆಬರಹ ನೀಡಿದರು.

ಜಿಲ್ಲಾ ಕೇಂದ್ರಗಳಾದ ಕೋಲಾರ, ಮಂಗಳೂರು, ತುಮಕೂರು, ದಾವಣಗೆರೆ ಬಳ್ಳಾರಿ, ರಾಯಚೂರು, ಕೊಪ್ಪಳ, ವಿಜಾಪುರ, ಬೆಳಗಾಂ ನಗರಗಳಲ್ಲಿ ಬಂದ್ ಸಂಪೂರ್ಣ ಯಶಸ್ವಿಯಾಗಿದ್ದು ಚಿತ್ರದುರ್ಗ, ಹಾಸನ, ಮೈಸೂರು, ಕಾರವಾರ ಮೊದಲಾದೆಡೆ ಭಾಗಶ: ಯಶಸ್ವಿಯಾಗಿದೆ.

ಇದಲ್ಲದೆ ದ.ಕ ಜಿಲ್ಲೆಯ ಮೂಡಬಿದ್ರೆ, ಉಳ್ಳಾಲ, ಉಡುಪಿ ಜಿಲ್ಲೆಯ ಕುಂದಾಪುರ, ಬೈಂದೂರು, ಉ.ಕ. ಜಿಲ್ಲೆಯ ದಾಂಡೇಲಿ, ಅಂಕೋಲಾ, ಹೊನ್ನಾವರ, ರಾಯಚೂರು ಜಿಲ್ಲೆಯ ಸಿಂಧನೂರು, ದೇವದುರ್ಗ, ಮಂಡ್ಯ ಜಿಲ್ಲೆಯ ಮಳವಳ್ಳಿ ಮೈಸೂರು ಜಿಲ್ಲೆಯ ನಂಜನಗೂಡು, ಹುಣಸೂರು ಹೆಚ್.ಡಿ.ಕೋಟೆ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ, ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಹೊಸಪೇಟೆ, ಸಿರುಗುಪ್ಪ, ಹಗರಿಬೊಮ್ಮನಹಳ್ಳಿ, ಬೆಂಗಳೂರು ಜಿಲ್ಲೆಯ ಆನೇಕಲ್, ಹೊಸಕೋಟೆ, ನೆಲಮಂಗಲ ತಾಲ್ಲೂಕು ಕೇಂದ್ರಗಳಲ್ಲದೆ, ಕೈಗಾರಿಕಾ ಪ್ರದೇಶಗಳಾದ ಜಿಗಣಿ, ಬೊಮ್ಮಸಂದ್ರ, ಅತ್ತಿಬೆಲೆ, ಸರ್ಜಾಪುರ, ಕೆ.ಆರ್.ಪುರ, ವರ್ತೂರು ಪೀಣ್ಯ ಪ್ರದೇಶಗಳು ಬಂದ್‌ನಿಂದಾಗಿ ಬಿಕೋ ಎನ್ನುತ್ತಿದ್ದವು. ದೊಡ್ಡಬಳ್ಳಾಪುರದಲ್ಲಿ ಭಾಗಶಃ ಬಂದ್ ಆಗಿದೆ.

ಅಖಿಲ ಭಾರತ ಮುಷ್ಕರದ ಕರೆಯ ಭಾಗವಾಗಿ ರಾಜ್ಯಾದ್ಯಂತ ವಾಣಿಜ್ಯ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕುಗಳು ಕಾರ್ಯ ನಿರ್ವಹಿಸಿಲ್ಲ. ಬ್ಯಾಂಕಿನ ಕೆಲವೊಂದು ಅಧಿಕಾರಿಗಳ ಸಂಘಟನೆಯು ಮುಷ್ಕರದಲ್ಲಿ ಭಾಗವಹಿಸಿರುವುದರಿಂದ ಹಲವು ಶಾಖೆಗಳ ಬಾಗಿಲೇ ತೆರೆಯಲಿಲ್ಲ. ವಿಮಾ ಕ್ಷೇತ್ರದಲ್ಲಿ, ಬಿಎಸ್‌ಎನ್‌ಎಲ್, ಸಾರ್ವಜನಿಕ ಉದ್ದಿಮೆಗಳಲ್ಲಿ ಮುಷ್ಕರ ಅತ್ಯಂತ ಯಶಸ್ವಿಯಾಗಿತ್ತು. ಅಂಗನವಾಡಿ ಕಾರ್ಯಕರ್ತೆಯರು, ಅಕ್ಷರ ದಾಸೋಹ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿ ಇತರೆ ಕಾರ್ಮಿಕರು, ನೌಕರರೊಂದಿಗೆ ಪ್ರತಿಭಟನೆಯಲ್ಲಿ ಕೈ ಜೋಡಿಸಿದರು.

ಗ್ರಾಮ ಪಂಚಾಯುತಿ ನೌಕರರು ಸುಮಾರು 22 ಜಿಲ್ಲೆಗಳ 134 ತಾಲ್ಲೂಕುಗಳಲ್ಲಿ ಆಗಸ್ಟ್ 18 ಮತ್ತು 19 ರಂದು ತಮ್ಮ ಬೇಡಿಕೆಗಳಿಗಾಗಿ ಧರಣಿ ನಡೆಸಿದ್ದು ಮಾತ್ರವಲ್ಲದೆ 20 ರಂದು ಅಖಿಲ ಭಾರತ ಮುಷ್ಕರದಲ್ಲೂ ಭಾಗವಹಿಸಿದರು.

ಕಾರ್ಮಿಕರು ಮತ್ತು ನೌಕರರು ಮುಷ್ಕರ ನಡೆಸಿ ಮನೆಯಲ್ಲಿ ಕೂರಲಿಲ್ಲ. ಮೆರವಣಿಗೆಗಳನ್ನು ನಡೆಸಿ ಘೋಷಣೆಗಳನ್ನು ಕೂಗುತ್ತಾ ತಮ್ಮ ಬೇಡಿಕೆಗಳನ್ನು ವಿವಿಧ ಜನ ವಿಭಾಗಕ್ಕೆ ಮುಟ್ಟಿಸಿದರು. ಎಲ್ಲಾ ಜಿಲ್ಲಾಕೇಂದ್ರ, ತಾಲ್ಲೂಕು ಹಾಗೂ ಇತರ ಪಟ್ಟಣಗಳಲ್ಲಿ ಜಂಟಿ ಪ್ರತಿಭಟನೆಗಳು ನಡೆದವು. ಸಣ್ಣ ತಾಲ್ಲೂಕು ಕೇಂದ್ರಗಳಲ್ಲೂ 500 ರಷ್ಟು ಜನ ಸೇರುತ್ತಿದ್ದರು. ತುಮಕೂರಿನಲ್ಲಿ 4000 ಜನ ಕಾರ್ಮಿಕರು, ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು ಎಂದು ವರದಿಯಾಗಿದೆ. ಬೆಳಗಾವಿ ಜಿಲ್ಲೆಯ ರಾಮದುರ್ಗದಲ್ಲಿ 1200 ಮಂದಿ ಕಾರ್ಮಿಕರು ಮತ್ತು ರೈತರು 5 ಗಂಟೆಗಳ ಕಾಲ ರಸ್ತೆ ತಡೆ ನಡೆಸಿದರು.

ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಕಾರ್ಯದರ್ಶಿಗಳಾದ ಎಸ್.ವರಲಕ್ಷ್ಮಿ, ಪ್ರಸನ್ನಕುಮಾರ್, ಎಐಟಿಯುಸಿನ ಎಂ.ಸಿ.ನರಸಿಂಹನ್, ಅನಂತ ಸುಬ್ಬರಾವ್, ಟಿಯುಸಿಸಿಯ ಜಿ.ಆರ್.ಶಿವಶಂಕರ್, ಎಐಬಿಇಎನ್ ವಸಂತ ರೈ, ವಿಮಾನೌಕರ ಸಂಘದ ಮುಖಂಡರಾದ ಗೋಪಾಲ್, ರಾಜ್ಯ ಸರಕಾರಿ ನೌಕರರ ಒಕ್ಕೂಟದ ಅಧ್ಯಕ್ಷ ಯು.ಡಿ. ನರಸಿಂಹಯ್ಯ, ಕೇಂದ್ರ ಸರಕಾರಿ ನೌಕರರ ಮುಖಂಡರಾದ ಪ್ರಸಾದ್ ಮೊದಲಾದವರು ಭಾಗವಹಿಸಿದ್ದರು.



ಬೆಂಗಳೂರಿನ ರ್‍ಯಾಲಿಯಲ್ಲಿ ಕಾಂ. ವಿ.ಜೆ.ಕೆ., ಅನಂತಸುಬ್ಬರಾವ್, ಶಿವಶಂಕರ್

ವಿದ್ಯಾರ್ಥಿ ಮುಷ್ಕರ ಅತ್ಯಂತ ಯಶಸ್ವಿ

ಖಾಸಗಿ ಮತ್ತು ವಿದೇಶಿ ವಿಶ್ವವಿದ್ಯಾಲಯಗಳ ಸ್ಥಾಪನೆಗಳನ್ನು ವಿರೋಧಿಸಿ, ಡೊನೇಷನ್ ಹಾವಳಿ ವಿರುದ್ಧ, ಶಿಕ್ಷಕರ ನೇಮಕಾತಿಗಾಗಿ, ಉತ್ತಮ ಹಾಸ್ಟೆಲ್ ವ್ಯವಸ್ಥೆ ಇನ್ನಿತರ ಬೇಡಿಕೆಗಳಿಗೆ ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಆಗಸ್ಟ್ 20 ರಂದು ರಾಜ್ಯಾದ್ಯಂತ ಶಾಲಾ-ಕಾಲೇಜು ಬಂದ್‌ಗೆ ಕರೆ ನೀಡಿದ್ದು 20 ಜಿಲ್ಲೆಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಮುಷ್ಕರ ನಡೆಸಿದರು. ಹಲವು ಕೇಂದ್ರಗಳಲ್ಲಿ ಮುಷ್ಕರ ನಿರತ ಕಾರ್ಮಿಕರೊಂದಿಗೆ ಸೇರಿ ಜಂಟಿ ಪ್ರತಿಭಟನೆ ನಡೆಸಿದರು.

ರೈತರು ಮತ್ತು ಕೃಷಿ ಕೂಲಿಕಾರರ ರಾಜ್ಯದ ವಿವಿಧೆಡೆಗಳಲ್ಲಿ ರಸ್ತೆ ತಡೆ ನಡೆಸಿ ಮುಷ್ಕರಕ್ಕೆ ಬೆಂಬಲ ಸೂಚಿಸಿದರು.

ಬಿಜೆಪಿ ಸರ್ಕಾರದ ಪೊಲೀಸರ ದೌರ್ಜನ್ಯ :

ಬಿಜೆಪಿ ಅಧಿಕಾರಕ್ಕೆ ಬಂದು ಇನ್ನೂ 100 ದಿನ ಕಳೆಯಲಿಲ್ಲ. ಆಗಲೇ ಪೊಲೀಸ್ ದೌರ್ಜನ್ಯ ತೀವ್ರಗೊಂಡಿದೆ. ಹಾವೇರಿಯಲ್ಲಿ ರಸಗೊಬ್ಬರ ಕೇಳಿದ ಇಬ್ಬರು ರೈತರನ್ನು ಬಲಿ ತೆಗೆದುಕೊಂಡ ಬಿಜೆಪಿ ಸರಕಾರ ಮಂಗಳೂರಿನಲ್ಲಿ ಕುಡಿಯುವ ನೀರಿಗಾಗಿ ಧರಣಿ ನಡೆಸಿದವರ ಮೇಲೆ ದೌರ್ಜನ್ಯವೆಸಗಿತು.

ಸಾರ್ವತ್ರಿಕ ಮುಷ್ಕರದ ದಿನದಂದು ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ಸಿಐಟಿಯು ಹಾಗೂ ಹೆಚ್.ಎಂಎಸ್ ಕಾರ್ಯಕರ್ತರನ್ನು ಬಂಧಿಸಿದರೆ, ಕೋಲಾರದಲ್ಲಿ ಮೆರವಣಿಗೆ ನಡೆಸುತ್ತಿದ್ದವರನ್ನು ಬಂಧಿಸಿದ್ದು ಮಾತ್ರವಲ್ಲದೆ ಎಸ್‌ಎಫ್‌ಐನ ಜಿಲ್ಲಾ ಅಧ್ಯಕ್ಷರಾದ ಅಮರೇಶ್ ಅವರನ್ನು ಹಿಗ್ಗಾಮುಗ್ಗಾ ಥಳಿಸಲಾಯಿತು. ಕಳ್ಳರಿಗೂ ಕೋಳ ತೊಡಿಸಿದ ಪೊಲೀಸರು ವಿದ್ಯಾರ್ಥಿ ಮುಖಂಡನ ಕೈಗೆ ಬೇಡಿ ತೊಡಿಸಿದರು. ಇದು ಯಡಿಯೂರಪ್ಪನವರ 'ಉತ್ತರಕುಮಾರನ ಪೌರುಷ'ದಲ್ಲಿ ಪೊಲೀಸರ ದರ್ಬಾರು.

ರೈತ ನಾಯಕನೆಂದು ಬಿಂಬಿಸಿ ಕೊಳ್ಳುವ ಯಡಿಯೂರಪ್ಪನವರು ಅಧಿಕಾರದ ಗುಂಗಿನಲ್ಲಿ ಪೊಲೀಸ್ ದೌರ್ಜನ್ಯದಿಂದ ಪ್ರಜಾಸತ್ತಾತ್ಮಕ ಹೋರಾಟಗಳನ್ನು ದಮನಿಸಲು ಸಾಧ್ಯವಿಲ್ಲ ಎಂಬುದನ್ನು ಮರೆತಿದ್ದಾರೆ.

ಪುಟ 10ಕ್ಕೆ

ಕೋಲಾರ : ಎಸ್‌ಎಫ್‌ಐ ಮುಖಂಡ ಅಂಬರೀಷ್‌ಗೆ ಬೇಡಿ; ಮಹಿಳೆಯರಿಗೆ ಲಾಠಿ ರುಚಿ


ಬೆಲೆ ಏರಿಕೆಯನ್ನು ತಡೆಯಬೇಕು, ಹಣದುಬ್ಬರ ನಿಯಂತ್ರಣ ಸೇರಿದಂತೆ ದಿನನಿತ್ಯ ಸಾಮಾನ್ಯ ಜನತೆ ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಬೇಕೆಂದು ಆಗ್ರಹಿಸಿ ಎಡಪಕ್ಷಗಳು, ಮತ್ತಿತರ ಕಾರ್ಮಿಕ ಸಂಘಟನೆಗಳು ಆಗಸ್ಟ್ 20 ರಂದು ಅಖಿಲ ಭಾರತ ಮುಷ್ಕರಕ್ಕೆ ಕರೆ ನೀಡಿದ್ದ ದಿನ ಶತಾಯ ಗತಾಯ ಮುಷ್ಕರ ವಿಫಲಗೊಳಿಸಲು ಮುಂದಾದ ಪೊಲೀಸರು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಪ್ರತಿಭಟನೆ ನಡೆಸುತ್ತಿದ್ದ ಎಸ್.ಎಫ್.ಐ. ಜಿಲ್ಲಾಧ್ಯಕ್ಷ ವಿ.ಅಂಬರೀಷ್‌ನನ್ನು ಬಂಧಿಸಿ ಅಮಾನುಷವಾಗಿ ಥಳಿಸಿದರು. ಅಷ್ಟೇ ಅಲ್ಲದೆ ಅವರ ಬಟ್ಟೆ ಬಿಚ್ಚಿ ಕಾನೂನಿಗೆ ವಿರುದ್ಧವಾಗಿ ಬೇಡಿ ಹಾಕಿದ್ದರು. ಮಹಿಳಾ ಪ್ರತಿಭಟನಾಕಾರರು ಎಂಬುದನ್ನೂ ಪರಿಗಣಿಸದ ಜಿಲ್ಲಾ ಹೆಚ್ಚುವರಿ ಎಸ್.ಪಿ. ಯಲ್ಲಪ್ಪ ಮತ್ತು ಅವರ ಸಿಬ್ಬಂದಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ದೈಹಿಕವಾಗಿ ಹಲ್ಲೆ ನಡೆಸಿದ್ದಾರೆ. ಇದರೊಂದಿಗೆ ಮಾನವೀಯ ಹಕ್ಕುಗಳನ್ನು ಉಲ್ಲಂಘಿಸಿರುವುದಲ್ಲದೆ, ಪ್ರಜಾಪ್ರಭುತ್ವ ವಿರೋಧಿ ಕೃತ್ಯ ಎಸಗಿದ್ದಾರೆ.


ಬೆಳಗ್ಗೆ ಕಾರ್ಯಕರ್ತರು ಮತ್ತು ಮುಖಂಡರು ಪ್ರತಿಭಟನೆ ಮತ್ತು ಮುಷ್ಕರದಲ್ಲಿ ಪಾಲ್ಗೊಳ್ಳಲು ಆರಂಭಿಸುತ್ತಿದ್ದಂತೆ ಪೂರ್ವಭಾವಿ ಯಾಗಿಯೇ ಸಂಚು ರೂಪಿಸಿದ್ದ ಪೊಲೀಸರು ಮುಖಂಡರನ್ನು ಬಂಧಿಸಲು ಮುಂದಾದರು. ಮಹಿಳಾ ಪೊಲೀಸರನ್ನು ನಿಯೋಜಿಸದೆ ಮುಷ್ಕರದಲ್ಲಿ ತೊಡಗಿದ್ದ ಮಹಿಳೆಯರನ್ನು ಪುರುಷ ಪೊಲೀಸರೇ ಬಂಧಿಸಿ ಅವರ ಮೇಲೆ ಹಲ್ಲೆ ಮಾಡುವುದರೊಂದಿಗೆ, ಅವ್ಯಾಚ್ಯ ಶಬ್ದಗಳಿಂದ ಮನಸೋ ಇಚ್ಛೆ ನಿಂದಿಸಿದ್ದಾರೆ.



ಹಲವಾರು ಮಂದಿ ಮುಷ್ಕರದಲ್ಲಿ ಪಾಲ್ಗೊಂಡಿದ್ದರೂ ಅವರಾರನ್ನೂ ಬಂಧಿಸದ ಪೊಲೀಸರು ಅಂಬರೀಷ್ ವಿರುದ್ಧ ಅಮಾನುಷವಾಗಿ ನಡೆದು ಕೊಂಡಿದ್ದಾರೆ.

ಪುಟ 11 ಕ್ಕೆ





ಬಿಡುಗಡೆಯ ಬಯಕೆ

ಗೋಡೆಯ ಮೇಲೆ ನೇತು ಹಾಕಿದ ಭಗತ್‌ಸಿಂಗ್, ಬೋಸ್, ಆಜಾದ್‌ರ ಫೋಟೋಗಳೂ ನೆನೆಯುತ್ತಿದ್ದವು. ಹಾರಾಡುವ ಬಾವುಟದ ಕೆಳಗೆ ಕೇವಲ ಗಾಂಧೀಜಿಯವರ ಭಾವಚಿತ್ರ ಮಾತ್ರ ಇದ್ದದ್ದು ನೆನಪಾಗಿ ಏನೆಲ್ಲಾ ಕಾಡುವಿಕೆಗಳು ಹಸಿವನ್ನು ಮರೆಸಿದವು. ನಾನು ಮತ್ತು ಅಕ್ಕ ಕಬ್ಬಿಣದ ಬೀದಿಯ ಮೇಲೆ ಹೆಜ್ಜೆ ಹಾಕುತ ಸುಮ್ಮನೆ ಕೇಳಿಕೊಳ್ಳುತ್ತಿದ್ದೆವು.

ರೆಟಕಿಯಾಚೆಗೆ ಕಣ್ಣು ಹಾಯಿಸಿದೆ. ತ್ರಿವರ್ಣದ ಬಾವುಟ ಫಡ ಫಡ ಹಾರಾಡುತ್ತಿತ್ತು. ಬ್ರಿಟಿಷ್ ಸಾಮ್ರಾಜ್ಯ ಶಾಹಿಗಳನ್ನು ಹೊರದಬ್ಬಿದ ಖುಷಿಗಳು ಬಾವುಟದಂಚಿಗೆ ಬೀಗುತ ತೂರಾಡುತ್ತಿದ್ದವು. ನಾನು ನನ್ನ ಬಾಲ್ಯಕೆ ಜಾರಿದೆ. 15 ಆಗಸ್ಟ್ ಎಂದರೆ ಹೊಸ ಬಟ್ಟೆ, ಊಟದ ಪರಿವೆಯೂ ಇಲ್ಲದೆ ಶಾಲೆಗೆ ಧಾವಿಸುವುದು. ರಂಗೋಲಿಯಲ್ಲರಳಿದ ಪುಟ್ಟ ಭಾರತ. ಧ್ವಜಾರೋಹಣದ ನಂತರ ಪ್ರಭಾತಫೇರಿ.... ಭಾರತ ಮಾತಾಕೀ ಜೈ.... ಮತ್ತೇನೇನೋ... ಮೆರವಣಿಗೆ ಸಂಜೆಯ ಇಳಿಹೊತ್ತಿನವರೆಗೂ ಹಾಡು, ನಾಟಕ ಇತ್ಯಾದಿ, ಗಂಟಲಾರಿ ಬರುವ ನೀರಡಿಕೆ ತಡೆಯದೇ ಗೆಳತಿಯ ಮನೆಗೆ ಹೋದರೆ ನಾಮಧಾರಿ ಜೋಶಿಯವರ ತಾಯಿ 'ಯಾರ ಹುಡುಗಿ ನೀನು? ನಾ ಮಡಿಲಿದ್ದೀನಿ. ಹೆಂಗ ನೀರು ಕೊಡಲಿ?' ಎಂದು ಕಚ್ಚೆ ಸರಿ ಮಾಡಿಕೊಳ್ಳುತ ಒಳ ಜಾರಿದಾಗ ಕಣ್ಣಂಚಿನಲ್ಲಿ ತೀವ್ರ ಅಪಮಾನದ ಹನಿಯೆಂದು ಬಿಕ್ಕುತ್ತಿತ್ತು. ಹೈರಾಣಾಗಿ ಹೆಜ್ಜೆಯ ಮೇಲೆ ಹೆಜ್ಜೆಯಿಡುವ ಮನೆಗೆ ಪಯಣ. ಅಲ್ಲಿಯವರೆಗೆ ದಟ್ಟೈಸಿದ ಮೋಡಗಳ ಕಟ್ಟೆ ಒಡೆದು ಧೋಗರೆವ ಮಳೆಗೆ ಮನೆಯಲ್ಲ ನೀರೋ ನೀರು. ಬ್ರಿಟಿಷರಿಂದ ಬಿಡುಗಡೆ ಸ್ವಾತಂತ್ರ್ಯ ಚಳುವಳಿ, ಭಾಷಣ, ಘೋಷಣೆ ಹೀಗೆ ಯಾವುವು ಅವ್ವನನ್ನು ಆವರಿಸಿರಲಿಲ್ಲ.. ಅವಳು ಒಳ ನುಗ್ಗಿದ ಮಳೆಯ ನೀರು ಹೊರ ಚೆಲ್ಲುವ ಕಾಯಕದಲ್ಲಿ ತಲ್ಲೀನಳಾಗಿದ್ದಳು.

ಗಾಂಧೀಜಿ ಭಾವಚಿತ್ರ ಮಾತ್ರ

ಗೋಡೆಯ ಮೇಲೆ ನೇತು ಹಾಕಿದ ಭಗತ್‌ಸಿಂಗ್, ಬೋಸ್, ಆಜಾದ್‌ರ ಫೋಟೋಗಳೂ ನೆನೆಯುತ್ತಿದ್ದವು. ಹಾರಾಡುವ ಬಾವುಟದ ಕೆಳಗೆ ಕೇವಲ ಗಾಂಧೀಜಿಯವರ ಭಾವಚಿತ್ರ ಮಾತ್ರ ಇದ್ದದ್ದು ನೆನಪಾಗಿ ಏನೆಲ್ಲಾ ಕಾಡುವಿಕೆಗಳು ಹಸಿವನ್ನು ಮರೆಸಿದವು. ನಾನು ಮತ್ತು ಅಕ್ಕ ಕಬ್ಬಿಣದ ಬೀದಿಯ ಮೇಲೆ ಹೆಜ್ಜೆ ಹಾಕುತ ಸುಮ್ಮನೆ ಕೇಳಿಕೊಳ್ಳುತ್ತಿದ್ದೆವು. "ನಿಂಗ್ಯಾರು ಇಷ್ಟ? ಭಗತ್‌ಸಿಂಗ್ ಅಥವಾ ಬಾಪುಜಿ ಅಥವಾ ನೆಹರು?" ಅಪ್ಪ ಅಂಗಡಿಯಲ್ಲಿ ತಮ್ಮ ಕಾಮ್ರೇಡ್‌ಗಳ ಕೂಟದೊಂದಿಗೆ ಹರಟುವುದು ನನ್ನ ನೆನಪ ಭಿತ್ತಿಗೆ ಲಗ್ಗೆ ಇಡುತ್ತಿತ್ತು. ಇನ್‌ಕ್ವಿಲಾಬ್ ಜಿಂದಾಬಾದ್‌ನ ಭಗತ್‌ಸಿಂಗ್ ಯಾಕೆ ಮತ್ತೆ ಮತ್ತೆ ಕಾಡುತ್ತಿದ್ದ? ಬಸವಣ್ಣ ಕಾಡಿದಂತೆ, ತುಂಬು ನುಸುಕಿನ ಜಾವದಲ್ಲಿ ಕರಿಕಂಬಳಿ ಹೊದ್ದು ಏಕತಾರಿ ಟೀಂವ್ ಗುಟ್ಟಿಸುತ, ಅಂತರಂಗವನ್ನೇ ಅಲ್ಲಾಡಿಸುತ ತತ್ವಪದಗಳನು ಹಾಡುತ ಬ್ರಹ್ಮಚಾರಿ ಬಂಡಯ್ಯ ಮುತ್ತ್ಯಾನಂತೆ.... ಯಾಕೆ ಅವ್ವನಂತೆ....

ಒಂದು ಮಣ್ಣಿನ ಮೋಟು ಗೋಡೆಯ ಅಡಿಗೆ ಮನೆ, ಕಬ್ಬಿಣ ಪತ್ರಾ ಹೊದಿಸಿಕೊಂಡ ಯಾವಾಗಾದರೂ ಬಿದ್ದೇ ಬಿಡುವ ಸಣ್ಣ ಖೋಲಿ ಮತ್ತು ಭಲೇ ದೊಡ್ಡದೇ ಅನ್ನುವಂಥ ಮಣ್ಣಿನಂಗಳ, ಈ ಮನೆಯ ಸಾಕ್ಷಾತ್ ನಟ್ಟನಡುವಲ್ಲಿ, ವಾರಕ್ಕೊಮ್ಮೆ ಅವತರಿಸುವ 'ಸೋವಿಯತ್ ನಾರಿ', 'ಮಾಸ್ಕೋ ನ್ಯೂಜ್' ಮ್ಯಾಗ್‌ಜಿನ್‌ಗಳು ಹಿಂದಿ ಭಾಷೆ, ಅಪ್ಪನಿಗೆ ಪ್ರಿಯ, ನಾನೂ ಹಿಂದಿ ಕಲಿವ ಹಠಕ್ಕೆ ಬಿದ್ದೆ. ಯಾವ ಬಿಡುಗಡೆ ಬಯಸಿ...?

ಬಿಡುಗಡೆಯ ಬಯಕೆ

ಹೌದು ಬಿಡುಗಡೆಯ ಬಯಕೆಯೊಂದು ಎದೆಯೊಳಕ್ಕೆ ಕಣ್ಬುಟ್ಟು ಬಹಳೇ ದಿನಗಳಾಗಿದ್ದವು. ದಿನವೆಲ್ಲ ದುಡಿದು ಹೈರಾಣಾಗುವ ಅವ್ವನ ಬಿಡುಗಡೆಯ ಜರೂರಿ ಅವಳಿಗಿಂತಲೂ ನನಗೆ ತೀವ್ರವಾಗಿತ್ತು. ಅದಕ್ಕೆ ಅವ್ವ ಸಾಧಿಸಿದ್ದೂ ಸುಳ್ಳಲ್ಲ. ಕ್ರಮೇಣ ಚಂದ್ರ ಪೂಜೆ ಮಾಡುವುದನ್ನು ಬಿಟ್ಟಿದ್ದು ಅವಳಿಚ್ಛೆಯಿಂದಲೇ, ಹೊಸಿಲಾಚೆಗೆ ಹೆಜ್ಜೆಯಿಡದ ಅವ್ವ ಅದೊಮ್ಮೆ ಬಸವಣ್ಣನ 20 ವಚನಗಳನ್ನು ಕಂಠಪಾಠ ಮಾಡಿ ಅನುಭವ ಮಂಟಪಕ್ಕೆ ನನ್ನೊಂದಿಗೆ ಬಂದು ಸಮವಯಸ್ಕರ ಸ್ಪರ್ಧೆಯಲ್ಲಿ ಭಾಗವಹಿಸಿದಾಗ ಥೇಟ್ ವಿದ್ಯಾರ್ಥಿಯಂತೆ. ಆ ಹುಮ್ಮಸ್ಸು, ಸಂಭ್ರಮ ಮರೆಯಲಾಗುವುದೇ ಇಲ್ಲ. ಅಪ್ಪನ ಬಯ್ಗುಳಿಂದ ಅವ್ವನಿಗೆ ಬಿಡುಗಡೆಯಾಗಲಿ ಎಂದು ತಹ ತಹಿಸಿದ್ದೇ. ಒಂದು ಗಂಡು ಮಗ, ವಂಶಕ್ಕೆ ದೀಪ ಬೇಕೀ ಬೇಕೆಂಬ ಅಪ್ಪನ ಉತ್ಕಟ ಬಯಕೆಯೂ ಅವ್ವನಿಗೊಂದು ಬೇಡಿಯೇ ಆಗಿತ್ತು. ಉರಿವ ನಿಗಿ ನಿಗಿ ಒಲೆಯ ಮುಂದೆ ಅವ್ವ ಹನಿಸುವ ಕಣ್ಣೀರು ಚಂದುಗಳ ಲೆಕ್ಕವಿಟ್ಟಿದ್ದೇನೆ. ಮನೆಯ ಬಡತನ ನೀಗಲು ಅಕ್ಕಂದಿರರು ತೇಪೆ ಹಚ್ಚುವ ಶ್ರಮಕ್ಕೆ ತಲ್ಲಣಗೊಂಡಿದ್ದೇ. ತಾವೇ ತಂದ ಸೀರೆಯದು. ಅಪ್ಪ ಉಡಿಸಿದ್ದೆಂದು ಸಾರಿದರು. ನನಗೆ ಈ ಎಲ್ಲದರ ಬಿಡುಗಡೆ ಬೇಕಿತ್ತು. ಪರದೆ ಹಿಂದಿನ ಸಂಕಟಗಳಿಂದ, ಅಪಮಾನಗಳಿಂದ ಬಿಡುಗಡೆ ಬೇಕಿತ್ತು.

ಅವ್ವ ಹೌದಲ್ಲ ಅಂದಳು

ಅದೊಂದು ದಿನ ದಿನ ಅವ್ವ ಹಳೆಯ ಬಟ್ಟೆಗಳನ್ನೆಲ್ಲ ಕೌದಿಯ ಒಡಲಿಗೆ ತಳ್ಳಿ ಹೊಸ ಬಟ್ಟೆ ತುಂಡುಗಳನ್ನು ಜೋಡಿಸಿ ಕೌದಿ ಹೊಲಿಯುತ್ತಿದ್ದಳು. ಹೊರಗೆ ರಸ್ತೆಯ ಮೇಲೆ ಸಂಘ ಪರಿವಾರಿಗಳು ಲಾಠಿ ತಿರುವುತ ಹೊರಟ್ಟಿದ್ದರು. ಮಸೀದಿಯದು ಮೂಲತಃ ದೇವಿ ಮಂದಿರ ಎಂಬ ವಾದ ಅವರದು ಅವ್ವ, 'ಹೌದಲ್ಲ... ಅಂದಳು' ಮಂದಿರದ ದೇವಿ ಆದ್ರೇನು, ಮಸೀದಿಯ ಮುಲ್ಲಾ ಆದ್ರೇನು... ಕಂಡ ದೇವ್ರಿಗೆ ಕೈ ಮುಗಿಯಾದು ತಪ್ಪು ಅಂತ ಅಂತ ಬಸವಣ್ಣ, ಹೇಳಿಲ್ಲೇನು? ಕೆಲಸಾನೇ ದೇವ್ರು ಮತ್ತ ಪೂಜೆ ಎಲ್ಲ...? ನನ್ನ ವಾದಕ್ಕೆ ಅವ್ವ 'ಹುಂ ಅದು ಖರೆ'... ಅಂದು ಕೌದಿಯ ಮೂಲೆಗೆ ಹಾರುವ ಹಕ್ಕಿಯ ರೆಕ್ಕೆ ಬಿಡಿಸತೊಡಗಿದಳು. ನನಗೀಗಲೂ ಅನಿಸುತ್ತದೆ, ಆ ಚಿತ್ತಾರದ ಹಕ್ಕಿ ಮುಗಿಲಗಲಕ್ಕೆ ರೆಕ್ಕೆ ಬಿಚ್ಚಿ ಹಾರಾಡಲಿ ಎಂದು..

ಸ್ವಾತಂತ್ರ್ಯ... ಖರೀದಿ

.....15 ಆಗಸ್ಟ್ ಬ್ರಿಟಿಷರು ನಿರ್ಗಮಿಸಿದ ದಿನವಾಗಿಯೇ ಉಳಿಯಿತಲ್ಲ. ಹೌದು... ಇದಕ್ಕೂ ಸ್ವಾತಂತ್ರ್ಯವೆನ್ನೋಣ. ಆದರೆ ಇದೆಂಥ ಸ್ವಾತಂತ್ರ್ಯ? ಅಣು ಒಪ್ಪಂದಕ್ಕೆ ಮುಂದಾದ ಈ ಸರ್ಕಾರ ಭಾರತದ ಸಾರ್ವಭೌಮತೆಗೆ ಅಪಾಯದ ಗಂಟೆ ಬಾರಿಸಿದೆ. ಅಸಂಖ್ಯಾತ ಸಾಮಾನ್ಯ ಜನತೆಯ ತ್ಯಾಗ ಬಲಿದಾನದಲ್ಲರಳಿದ ಈ ಬಾವುಟದ ಕೆಳಗೆ ಎಲ್ಲ ನಮೂನೆಯ ಅನಾಚಾರಗಳೂ ನಡೆದಿವೆ. ಕರ್ನಾಟಕದ ಬಿಜೆಪಿ ಸರ್ಕಾರವಂತೂ ಜನತೆಗೆ ಕವಡೆ ಕಾಸಿನ ಕಿಮ್ಮತ್ತು ಕೊಡದೆ, ಕೋಟಿಗಳಿಗೆ ಶಾಸಕರುಗಳನ್ನು ಖರೀದಿಸುತ್ತಿದೆ. ಕೋಮುವಾದಿಗಳ ರಾಕ್ಷಸ ತಾಂಡವಕ್ಕೆ ಕಾಂಗ್ರೆ-ಜೆಡಿ(ಎಸ್)ಗಳು ತಲ್ಲಣಿಸುತ್ತಿವೆ. ಸ್ವಯಂಕೃತ ಅಪರಾಧದ ಕುಂಡದಲ್ಲಿ ಬೇಯುತ್ತಲೇ ಗಣಿ ಧಣಿಗಳು ಹಣದ ಥೈಲಿ ಹಿಡಿದು ಬೇಟೆಗಾಗಿ ಠಳಾಯಿಸುತ ಪ್ರಜಾಪ್ರಭುತ್ವದ ಕೊಳ್ಳೆ ಹೊಡೆವ ದಂಧೆಗಿಳಿದಿದ್ದಾರೆ. ನರಳುತ್ತಿವೆ ಪ್ರಜಾಸತ್ತಾತ್ಮಕ ಮೌಲ್ಯಗಳು ಆ ಈ ದುಶ್ಯಟ ಕಪಿಮುಷ್ಠಿಯಲ್ಲಿ ಬಿಡುಗಡೆ ಬೇಕಿದೆ ಮೌಲ್ಯಗಳಿಗೆ.. ಯಾಕ ಕಿರಿಕಿರಿ?

......ಆಗಸ್ಟ್ 15 ಮಗಳು ದೇಶಭಕ್ತಿ ಹಾಡು ಗುನುಗುತ್ತಿದ್ದಳು. ಗೆಳತಿ ತನ್ನ ಮನೆಗೆ ಫೋನಾಯಿಸಿ ಹೇಳುತ್ತಿದ್ದಳು.'ಸಣ್ಣ ಹುಡುಗರಿಗೆ ಸ್ಕೂಲಿಗೆ ಧ್ವಜಾರೋಹಣದ ಕಾರ್ಯಕ್ರಮಕ್ಕೆ ಕಳಸಬ್ಯಾಡ್ರಿ, ಬಾಂಬಿನ ಗಾಳಿ ಸುದ್ದಿನೂ ಓಡಾಟ, ಗಲಾಟೆ ಉಂಟು ಮಾಡ್ತದ. ಸಣ್ಣ ಮಕ್ಕಳು, ಕಾಲಡಿ ಸಿಕ್ಕು ನರಳಬೇಕಾಗ್ತದ, ಯಾಕ, ಕಿರಿ ಕಿರಿ?....ಮನ್ಯಾಗ ಇರ್ಲಿ' ಅಂತ.

ಹೌದಲ್ಲ. ಇದೆಂಥ ಸ್ವಾತಂತ್ರ್ಯ? ಈ ಹೊತ್ತಿಗಾಗಲೇ ಮಕ್ಕಳು ಸ್ವಾತಂತ್ರ್ಯ ಚಳುವಳಿಯ ವೀರಗಾಥೆಗಳಿಂದ ಅಪರಿಚರಾಗಿಯೇ ಉಳಿದಿದ್ದಾರೆ. ಇನ್ನು ಕಡೆ ಪಕ್ಷ ಬಾವುಟ ಹಾರಿಸುವ ಸಂಭ್ರಮಕ್ಕೂ ತೆರೆ ಬಿದ್ದಂತೆ! ಇಂಚುಗಳ ಲೆಕ್ಕದ ಟೀವಿ, ಫೀಟುಗಳ ಲೆಕ್ಕದ ಕೋಣೆಯಲ್ಲಿ ಭವಿಷ್ಯದ ಕನಸುಗಳು ಬಂಧಿ, ಇದೆಂಥ ಜಾಗತೀಕರಣ? ಹೌದು, ಇದೇ ಜಾಗರೀಕರಣ, ಉಳ್ಳವರ ಕೈಗೆ ಜಗತ್ತು ಕಬ್ಜಾ ಮಾಡುವ ಹುನ್ನಾರ, ಅಂದು ಬ್ರಿಟಿಷರು, ಇಂದು ಸಾಮ್ರಾಜ್ಯಶಾಹಿ, ನಮ್ಮ ಮಕ್ಕಳ ಮೆದುಳನ್ನೇ ಕದಿಯುವ ಷಡ್ಯಂತ್ರ.

ಹೊರಗೆ ಲಂಬಾಣಿ ಹೆಂಗಸು ಹಣ್ಣು ಮಾರಲು ಬಂದಿದ್ದಳು. 'ಯಾಕವ್ವ ನೀ ಝಂಡಾ ಹಾರಸಲಾಕ ನಿಮ್ಮೂರಾಗ ಉಳಿದಿಲ್ಲ....?' ಕೇಳಿದೆ 'ಹುಂ, ನಂಗನೂ ಮನಸದಾ, ಆದ್ರ ಹೊಟ್ಟೆ ಕೇಳ್ತದೇನ್ರೀ...? ದುಡದಿಲ್ಲಂದ್ರ ಒಲಿಹೊತ್ತಲ್ಲ.....' ಅಂದು, 'ಬಾಯಿ, ನಮ್ದು ಹಳ್ಳ್ಯಾಗ ಬಡುರಿಗ್ಯಾರಿಗ್ನೂ ರೇಷನ್ ಕಾರ್ಡ್ ಸಿಕ್ಕಿಲ್ರೀ.... ಹ್ಯಾಂಗ, ಮಾಡಾದು?' ಕೇಳಿದಳು, 'ಎಲ್ರೂ ಒಂದಾಗಿ ಕೇಳ ಬೇಕಾಗ್ತದ, ಬರ್ತಿರೇನು? ಒಲಿ ಹೊತ್ತಲ್ಲ, ಹೊಟ್ಟೆ ತುಂಬಲ್ಲ ಅಂದ್ರ ನಡ್ಯಾಲ್ಲ' ಅಂದೆ, 'ಕಾರ್ಡಗಂದ್ರ ಬರ್ತೇವ್ರೀ....' ಇಷ್ಟಗಲ ಖುಷಿಯಿಂದ ಹೇಳಿದಳು. ಅವಳಿಗೆ ಹಸಿವಿನಿಂದ ಬಿಡುಗಡೆ ಬೇಕಿತ್ತು.

ಬಿಡುಗಡೆಯ ಪಟ್ಟಿಯಲ್ಲಿ ಒಂದೊಂದೇ ಸೇರುವಾಗ ಸಮುದಾಯ ಸಂಗಾತಿಗಳ ಹಾಡೊಂದು ಪಟ್ಟಿಯ ಮೂಲೆಯಲ್ಲಿ ಪವಡಿಸಿತು. ಯಾರಿಗೆ ಬಂತು, ಎಲ್ಲಿಗೆ ಬಂತು, 47ರ ಸ್ವಾತಂತ್ರ್ಯ....? ಗಣಿ ಧಣಿಗಳ ಪುಂಡಾಟಕೆ ಬಂತು. ○

ರಾಜ್ಯಾದ್ಯಂತ ಮುಷ್ಕರಕ್ಕೆ ವ್ಯಾಪಕ ಬೆಂಬಲ

ಪುಟ 9ರಿಂದ

ಜನರ ಅತೃಪ್ತಿಗೆ ಪ್ರಜಾಸತ್ತಾತ್ಮಕ ರೂಪ

ಜನರ ಸಮಸ್ಯೆಗಳನ್ನು ಕೈಗೆತ್ತಿಕೊಂಡರೆ ಜನರು ಸ್ಪಂದಿಸಿಯೇ ತೀರುತ್ತಾರೆ ಎಂಬುದಕ್ಕೆ ಆಗಸ್ಟ್ 20ರ ಮುಷ್ಕರ ಬಂದ್, ರಸ್ತೆತಡೆ, ಪ್ರತಿಭಟನೆಗಳು ಸಾಕ್ಷಿಯಾಗಿವೆ. ಆದ್ದರಿಂದ ಮುಂಬರುವ ದಿನಗಳಲ್ಲಿ ಬೆಲೆಯೇರಿಕೆ, ಕನಿಷ್ಟ ವೇತನ, ಉದ್ಯೋಗ ಇಲ್ಲವೇ ನಿರುದ್ಯೋಗ ಭತ್ಯೆ ಮತ್ತು ಸ್ಥಳೀಯ ಸಮಸ್ಯೆಗಳ ಆಧಾರದಲ್ಲಿ ಹೋರಾಟಗಳನ್ನು ರೂಪಿಸಬೇಕಾಗಿದೆ. ಹಾಗೆ ಮಾಡುವುದರ ಮೂಲಕ ಜನರಲ್ಲಿ ತೀವ್ರವಾಗಿ ಬೆಳೆಯುತ್ತಿರುವ ಅತೃಪ್ತಿಗೆ ಪ್ರಜಾಸತ್ತಾತ್ಮಕ ರೂಪ ಕೊಡಲು ಸಾಧ್ಯವಾಗಬೇಕು. ಇಲ್ಲವಾದಲ್ಲಿ ಜನರಲ್ಲಿರುವ ಅತೃಪ್ತಿಯನ್ನು ಪಟ್ಟಭದ್ರ ಹಿತಾಸಕ್ತಿಗಳಿಂದ ಪ್ರೇರಿತರಾದ ಕೋಮುವಾದಿಗಳು ಪ್ರತ್ಯೇಕವಾದಿಗಳು ಬಳಸಿಕೊಳ್ಳುತ್ತವೆ ಹಾಗೂ ಶೋಷಕ ವ್ಯವಸ್ಥೆಯನ್ನು ಖಾಯಂಗೊಳಿಸಲು ಪ್ರಯತ್ನಿಸುತ್ತವೆ.

ಕಾರ್ಮಿಕ ವರ್ಗವು ಇಡೀ ಜನಸಮುದಾಯದ ಬೇಡಿಕೆಯನ್ನು ಮುಂದಿಟ್ಟು ಮುಷ್ಕರ ನಡೆಸಿ ಅದರಲ್ಲಿ ಅಭೂತಪೂರ್ವ ಯಶಸ್ಸನ್ನು ದಾಖಲಿಸಿದ್ದು ಈ ಬಾರಿಯ ವೈಶಿಷ್ಟ್ಯ. ಕಾರ್ಮಿಕವರ್ಗದ ನೇತೃತ್ವದಲ್ಲಿ ಜನತೆಯ ಐಕ್ಯ ಹೋರಾಟಗಳು ಬೆಳೆದುಬಂದಲ್ಲಿ ಕೋಮುವಾದಿಗಳ ಅಟ್ಟಹಾಸವಾಗಲೀ, ಪ್ರತ್ಯೇಕತಾ ವಾದಿಗಳಾಗಲಿ ಬೆಳೆಯಲು ಸಾಧ್ಯ ವಾಗುವುದಿಲ್ಲ. ಆಗ ಭೂ ಮಾಫಿಯಾ ಮತ್ತು ಗಣಿದಣಿಗಳ ಹಣಕ್ಕೆ ಕಿಮ್ಮತ್ತಿನ ಬೆಲೆ ಇರುವುದಿಲ್ಲ.

ಈ ನಿಟ್ಟಿನಲ್ಲಿ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಐಕ್ಯ ಹೋರಾಟಕ್ಕೆ ಆಗಸ್ಟ್ 20 ರ ಮುಷ್ಕರ ನಾಂದಿಯಾಗಲಿ.

■ ಬಾಲಕೃಷ್ಣಶೆಟ್ಟಿ

ದೇಶವ್ಯಾಪಿ ಮುಷ್ಕರ....

ಪುಟ 7 ರಿಂದ

ದೆಹಲಿ : ದೆಹಲಿಯ ಕೈಗಾರಿಕಾ ಪ್ರದೇಶದಲ್ಲಿ ಮುಷ್ಕರ ಬಾರೀ ಮಹತ್ವ ಕಂಡಿತು. ಕೆಲಸವನ್ನು ಬಹಿಷ್ಕರಿಸಿದ ಕಾರ್ಮಿಕರು ಹಲವೆಡೆ ರಸ್ತೆ ತಡೆ ನಡೆಸಿದರು. ದೆಹಲಿಯಲ್ಲಿ ಕಾರ್ಮಿಕ ಸಚಿವಾಲಯದ ಎದುರು ಭಾರಿ ಮತ ಪ್ರದರ್ಶನ ನಡೆಸಲಾಯಿತು. ಅಲ್ಲದೇ ಹಳೇ ದೆಹಲಿ ರೈಲ್ವೆ ನಿಲ್ದಾಣದ ವ್ಯಾಪಾರಸ್ಥರು ನಿಲ್ದಾಣದ ಎದುರು ಪ್ರತಿಭಟನೆ ನಡೆಸಿದರು.

ಹರಿಯಾಣ: ರಾಜ್ಯದ ರಸ್ತೆ ಸಾರಿಗೆ ಸಂಸ್ಥೆ ಹಾಗೂ ವಿದ್ಯುತ್ ಕ್ಷೇತ್ರದ ಕಾರ್ಮಿಕರು ಈ ಹೋರಾಟದಲ್ಲಿ ಸಂಪೂರ್ಣ ಪಾಲ್ಗೊಂಡಿದ್ದರು. ಅಲ್ಲದೆ ಬೋಧಕೇತರ ಸಿಬ್ಬಂದಿ ಕಾಲೇಜು ಶಿಕ್ಷಕರು, ರೂಪಕ್-ಕುರುಕ್ಷೇತ್ರ, ಮತ್ತುಹಿಸ್ಸರ್ ಕೃಷಿ ವಿ.ವಿ.ಸಿಬ್ಬಂದಿಗಳು, ಅಧ್ಯಾಪಕರು ಹೋರಾಟದಲ್ಲಿ ಭಾಗವಹಿಸಿದ್ದರು. ಇದಲ್ಲದೆ, ಕೈಮಗ್ಗ ನೌಕರರು, ಸ್ಪಿನಿಂಗ್ ಮಿಲ್ ಕಾರ್ಮಿಕರು, ಮುನ್ಸಿಪಲ್ ಕಾರ್ಮಿಕರ ಮುಷ್ಕರ ಭಾಗವಾಗಿ ಪಾಲ್ಗೊಂಡಿದ್ದರು. ಇದಲ್ಲದೆ, ರಸಗೊಬ್ಬರ ಕಾರ್ಖಾನೆ ಕಾರ್ಮಿಕರು, ಐಟಿಸಿ ಕಾರ್ಮಿಕರು, ಅರಣ್ಯ ದಿನಗೂಲಿ ನೌಕರರು, ಹೆಂಚು ಕಾರ್ಮಿಕರು, ಕಟ್ಟಡ, ಇತರೆ ಹಾಗೂ ಸುಮಾರು 8000 ಸಾವಿರ ಅಂಗನವಾಡಿ ನೌಕರರು ಮುಷ್ಕರದಲ್ಲಿ ಭಾಗವಹಿಸಿದ್ದರು.

ಹಿಮಾಚಲ ಪ್ರದೇಶ: ರಾಜ್ಯದ ಎಲ್ಲಾ ಹೈಡಲ್ ಪ್ರಾಜೆಕ್ಟ್‌ನ ಎಲ್ಲಾ ಕಾರ್ಮಿಕರು ಹೋರಾಟದಲ್ಲಿ ಪಾಲ್ಗೊಂಡಿದ್ದರು. ಸೇಲಾನ್, ಪಾರವೂನ್ ಸಿರ್‌ಮೌರ್, ಅಮೀರ್ ಪುರ ಮೊದಲಾದ ಕೈಗಾರಿಕಾ ಪ್ರದೇಶಗಳಲ್ಲಿ ಮುಷ್ಕರ ಯಶಸ್ವಿಯಾಯಿತು. ಅಲ್ಲದೆ, ಅಂಗನವಾಡಿ, ಮಧ್ಯಾಹ್ನದ ಊಟ ತಯಾರಿಕೆ ಕಾರ್ಮಿಕರು ಕೇಂದ್ರ-ರಾಜ್ಯ ಸರ್ಕಾರಿ ನೌಕರರು, ಬ್ಯಾಂಕ್, ವಿಮಾ, ಟೆಲಿಕಾಂ, ನೌಕರರು ಈ ಮುಷ್ಕರದಲ್ಲಿ ಪಾಲ್ಗೊಂಡಿದ್ದರು.

ಜಾರ್ಖಂಡ್: ಮುಷ್ಕರದಿಂದಾಗಿ ರಾಜ್ಯದ ಕಲ್ಲಿದ್ದಲು, ಬ್ಯಾಂಕಿಂಗ್, ವಿಮಾ, ಮತ್ತು ಕಲ್ಲಿದ್ದಲು ಉತ್ಪಾದನೆ ಮೇಲೆ ಪರಿಣಾಮ ಬೀರಿತು. ರಾಜ್ಯದ್ಯಂತ ರೈಲು ತಡೆ ನಡೆಸಿದ್ದರಿಂದ ರೈಲು ಸಂಚಾರಕ್ಕೆ ಸ್ಥಗಿತಯಾಯಿತು. ಪೆಟ್ರೋಲಿಯಂ ಸಾಗಾಣಿಕೆ ಸ್ಥಗಿತಗೊಂಡಿತು. ಬಾಕ್ಸೈಟ್ ಉದ್ದಿಮೆ ಸಹಾ ಬಂದ್ ಆಗಿತ್ತು. ಹೋರಾಟ ನಿರತ ಸುಮಾರು 175 ಜನ ಕಾರ್ಮಿಕರು ಬಂಧಿಸಲಾಯಿತು. ಹೆಚ್.ಇ.ಸಿ. ಮತ್ತು ಬೊರುಕಾ ಸ್ಟೀಲ್ ಏರಿಯಾದಲ್ಲಿ ಉತ್ಪಾದನೆ ವ್ಯತ್ಯಯ ಉಂಟಾಯಿತು. ರಸ್ತೆ ಸಾರಿಗೆ ಮುಷ್ಕರದಿಂದ ಅಸ್ತವ್ಯಸ್ತ ಉಂಟಾಗಿತ್ತು. ಮಾರುಕಟ್ಟೆಗಳು ಮುಚ್ಚಲ್ಪಟ್ಟಿದ್ದವು. ಅಸಂಘಟಿತ ಕ್ಷೇತ್ರದ ವಿಭಾಗಗಳಾದ, ಕಲ್ಲುಗಣಿ, ಬೀಡಿ, ಕಟ್ಟಡ, ಖಾಸಗೀ ಸಾರಿಗೆ ಕಾರ್ಮಿಕರು

ಮಧ್ಯ ಪ್ರದೇಶ: ರಾಜ್ಯದ ಮೂರು ಜಿಲ್ಲೆಗಳಲ್ಲಿ ಬಂದ್ ವಾತಾವರಣ ಸೃಷ್ಠಿಯಾಗಿತ್ತು. ಕಲ್ಲಿದ್ದಲು ಕ್ಷೇತ್ರದಲ್ಲಿ ಶೇ.8 ರಷ್ಟು ಮುಷ್ಕರವಾಗಿದೆ. ಗುನಾದಲ್ಲಿನ ನ್ಯಾಷನಲ್ ಪರ್ಟಲೈಜರ್ಸ್ ಉತ್ಪಾದನೆಯಲ್ಲಿ ವ್ಯತ್ಯಯ ಉಂಟಾಗಿತ್ತು. ರಕ್ಷಣಾ ವಲಯದ ಸಿಬ್ಬಂದಿ ಶೇ.90 ರಷ್ಟು ಭಾಗವಹಿಸಿದ್ದರು. ಭೂಪಾಲ್, ಗ್ವಾಲಿಯರ್, ಇಂದೋರ್, ಸೇರಿದಂತೆ ಹಲವೆಡೆ ಕೈಗಾರಿಕೆಗಳು ಬಂದ್ ಆಗಿದ್ದವು. ಅಸಂಘಟಿತ ವಿಭಾಗಗಳಾದ ಅಂಗನವಾಡಿ, ಬೀಡಿ, ಹಮಾಲಿ ಮೊದಲಾದ ವಿಭಾಗಗಳು ಮುಷ್ಕರ ನಡೆಸಿದರು.

ಮಹಾರಾಷ್ಟ್ರ:ರಾಜ್ಯದ ಕೈಗಾರಿಕಾ ನಗರಗಳಾದ, ಮುಂಬೈ, ಠಾಣೆ, ನಾಸಿಕ್, ಪುಣೆ, ಸೋಲಾಪುರ, ಇಂಚಲ ಕರಂಜಿ, ನಾಗ್ಪುರ, ಔರಂಗ್‌ಬಾದ್‌ಗಳಲ್ಲಿ ಮುಷ್ಕರಕ್ಕೆ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಬ್ಯಾಂಕಿಂಗ್, ವಿಮಾ, ದೂರ ಸಂಪರ್ಕ ಸೇರಿದಂತೆ, ಅಂಗನವಾಡಿ, ಗ್ರಾಮ ಪಂಚಾಯತ್, ವಿದ್ಯುತ್ ಕ್ಷೇತ್ರದ ಕಾರ್ಮಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ. ಮುಂಬೈಯಲ್ಲಿ 20 ಸಾವಿರ, ನಾಸಿಕ್‌ನಲ್ಲಿ 10 ಸಾವಿರ, ಔರಂಗಬಾದ್‌ನಲ್ಲಿ 5 ಸಾವಿರ, ನಾಗ್ಪುರದಲ್ಲಿ 7 ಸಾವಿರ, ಸೋಲಾಪುರದಲ್ಲಿ 5 ಸಾವಿರ ಕಾರ್ಮಿಕರು ನೌಕರರು ರೈಲು-ರಸ್ತೆ ತಡೆ ನಡೆಸಿದ್ದಾರೆ.

ತಮಿಳುನಾಡು: ರಾಜ್ಯದಲ್ಲಿ ಬಹುತೇಕ ಕೈಗಾರಿಕಾ ಪ್ರದೇಶಗಳಲ್ಲಿ ಮುಷ್ಕರ ಯಶಸ್ವಿಯಾಗಿದೆ. ಚೆನ್ನೈನಲ್ಲಿ ಪ್ರಮುಖ ಸಾರ್ವಜನಿಕ-ಖಾಸಗಿ ಉದ್ದಿಮೆಗಳು ತಮ್ಮ ಕೆಲಸ ಸ್ಥಗಿತಗೊಳಿಸಿದ್ದವು. ಇದಲ್ಲದೆ ಕಲ್ಪವೇಲಂ, ನವೇಲಿಯಾ ವಿವಿಧ ಕಾರ್ಮಿಕರು, ಉಕ್ಕು-ಕಲ್ಲಿದ್ದಲು, ಇಂಧನ ಕ್ಷೇತ್ರಗಳ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಹಲವಾರು ಬಂದರುಗಳ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದರು. ಇದಲ್ಲದೆ ತಿರುಪೂರ್‌ನ ಗಾರ್ಮೆಂಟ್ಸ್ ಕಾರ್ಖಾನೆ, ಕಾರ್ಮಿಕರು, ಆಟೋರಿಕ್ಷಾ, ಕಟ್ಟಡ, ಬೀಡಿ, ಕೈಮಗ್ಗ, ಮೊದಲಾದ ಕಾರ್ಮಿಕರು ರಾಜ್ಯದಲ್ಲಿ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಕನ್ಯಾಕುಮಾರಿ ಜಿಲ್ಲೆಯ 50 ಸಾವಿರ ಗೈರು ಬೀಜ ಕಾರ್ಮಿಕರು ಮತ್ತು 5 ಸಾವಿರ ತೋಟಾ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ರಾಜ್ಯದ ಸುಮಾರು 150 ಕೇಂದ್ರಗಳಲ್ಲಿ ರಸ್ತೆ-ರೈಲು ತಡೆ ನಡೆಸಲಾಗಿದೆ.

ಪಾಂಡಿಚೇರಿ: ಕೇಂದ್ರಾಡಳಿತ ಪ್ರದೇಶವಾದ ಇಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿತ್ತು. ಎಲ್‌ಪಿಜಿ ಬಾಟ್ಲಿಂಗ್ ಕೇಂದ್ರದಲ್ಲಿ ಕೆಲಸ ಸಂಪೂರ್ಣ ಸ್ಥಗಿತಗೊಂಡಿತ್ತು. ಸುಮಾರು 1 ಸಾವಿರ ಜನರು ಬಂಧನಕ್ಕೊಳಗಾಗಿದ್ದಾರೆ. ಪಂಜಾಬ್, ರಾಜಸ್ತಾನ್, ಉತ್ತರ ಪ್ರದೇಶ, ಮಣಿಪುರ ಹೀಗೆ ರಾಷ್ಟ್ರವ್ಯಾಪಿಯಾಗಿ ದುಡಿಯುವ ಜನತೆ ಮುಷ್ಕರದ ಕರೆಗೆ ವ್ಯಾಪಕವಾಗಿ ಸ್ಪಂದಿಸಿದ್ದಾರೆ.

ಎಸ್‌ಎಫ್‌ಐ ಮುಖಂಡ ಅಂಬರೀಷ್‌ಗೆ ಬೇಡಿ; ಮಹಿಳೆಯರಿಗೆ ಲಾಠಿ ರುಚಿ....

ಪುಟ 9 ರಿಂದ

ಹಲವಾರು ಜನಪರ, ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳ ವಿರುದ್ಧ ನಿರಂತರ ಹೋರಾಟಗಳನ್ನು ರೂಪಿಸುತ್ತಾ ಬಂದಿರುವ ಅಂಬರೀಷ್‌ನ ಮೇಲೆ ಕಣ್ಣಿಟ್ಟಿದ್ದ ಪೊಲೀಸರು ಈ ಸಮಯವನ್ನು ದುರುಪಯೋಗ ಮಾಡಿಕೊಂಡು ದುರುದ್ದೇಶಪೂರಿತವಾಗಿ ಬಂಧಿಸಿದ್ದಾರೆ. ಜನಪರ ಚಳವಳಿಗಳನ್ನು ಹತ್ತಿಕ್ಕಲು ಮುಂದಾದ ಜಿಲ್ಲಾ ಪೊಲೀಸ್ ಅಧಿಕಾರಿಗಳು ಅಂಬರೀಷ್‌ನನ್ನು ಕೋಳಗಳಿಂದ ಬಂಧಿಸಿದ್ದಾರೆ. ಭಯೋತ್ಪಾದಕರು, ದೇಶದ್ರೋಹಿಗಳೊಂದಿಗೆ ವರ್ತಿಸುವಂತೆ ಪೊಲೀಸರು ನಡೆದುಕೊಂಡಿದ್ದು, ಮಾನವೀಯ ಮತ್ತು ಪ್ರಜಾಪ್ರಭುತ್ವೀಯ ಹಕ್ಕುಗಳನ್ನು ಉಲ್ಲಂಘಿಸಿದ್ದಾರೆ.

ಅಂಗಡಿ ಮುಂಗಟ್ಟುಗಳು, ಸಾರಿಗೆ, ಶಾಲಾ ಕಾಲೇಜುಗಳನ್ನು ಮುಚ್ಚಿ ಮುಷ್ಕರಕ್ಕೆ ಬೆಂಬಲ ನೀಡುವಂತೆ ಎಲ್ಲಾ ಪ್ರಗತಿಪರ ಸಂಘಟನೆಗಳು ಕೋಲಾರ ಜನತೆಯಲ್ಲಿ ಮನವಿ ಮಾಡಿದ್ದರು. ಇದಕ್ಕೆ ಸ್ಪಂದಿಸಿದ ಕೋಲಾರದ ಜನತೆ ಸ್ವಯಂ ಪ್ರೇರಿತವಾಗಿ ಮುಷ್ಕರಕ್ಕೆ ಬೆಂಬಲ ನೀಡಿದ್ದರು. ಕೆ.ಎಸ್.ಆರ್.ಟಿ.ಸಿ. ಸಿಬ್ಬಂದಿಯು ವಾಹನಗಳನ್ನು ಓಡಿಸುವ ಯತ್ನಕ್ಕೆ ಪ್ರತಿಭಟನಾಕಾರರು ತಡೆಯೊಡ್ಡಿದ್ದರು. ಕೋಲಾರ ನಗರವು ಮುಷ್ಕರಕ್ಕೆ ಬೆಂಬಲವಾಗಿ ಬಂದ್‌ನಂತೆ ಮಾರ್ಪಟ್ಟಿತ್ತು.

ಶಾಂತಿಯುತವಾಗಿ ನಡೆಯುತ್ತಿದ್ದ ಮುಷ್ಕರದಲ್ಲಿ ಪೊಲೀಸರು ಮಧ್ಯೆ ಪ್ರವೇಶಿಸಿ ಗೊಂದಲ ಸೃಷ್ಟಿ ಮಾಡಲು ಸತತ ಪ್ರಯತ್ನಿ ಮಾಡಿದರು. ಬಸ್‌ಗಳನ್ನು ಓಡಿಸುವಂತೆ ಕೆಎಸ್‌ಆರ್‌ಟಿಸಿ ಸಿಬ್ಬಂದಿಯ ಮೇಲೆ ಒತ್ತಡ ಹಾಕಿದ್ದಲ್ಲದೇ ಅನಾವಶ್ಯಕವಾಗಿ ಮಾತಿನ ಚಕಮಕಿ ನಡೆಸಿ ಪ್ರತಿಭಟನಾಕಾರರನ್ನು ಉದ್ರೇಕಿಸಲು ಮುಂದಾಗಿದ್ದರು. ಮುಖಂಡರು ಸಮಾಧಾನದಿಂದ ಪರಿಸ್ಥಿತಿಯನ್ನು ತಿಳಿಗೊಳಿಸಿ ಮುಷ್ಕರವನ್ನು ಯಶಸ್ವಿಯಾಗುವಂತೆ ಎಚ್ಚರಿಕೆ ವಹಿಸಿದ್ದರು.

ನಗರದ ಪ್ರಮುಖ ಬೀದಿಗಳಲ್ಲಿ ಘೋಷಣೆಗಳನ್ನು ಕೂಗುತ್ತ ಮೆರವಣಿಗೆ ಹೊರಟಿದ್ದಾಗ ಗೊಂದಲ ಸೃಷ್ಟಿಸಲು ಸತತವಾಗಿ ಪ್ರಯತ್ನಿಸಿದರು. ಬೆಳಗ್ಗೆ 9 ಗಂಟೆಗೆ ಸಮಯದಲ್ಲಿ ಕ್ಲಾಕ್ ಟವರ್‌ನಿಂದ ನೂತನ ಬಸ್ ನಿಲ್ದಾಣಕ್ಕೆ ಹೋಗುವ ದಾರಿ ಮಧ್ಯೆ ಪ್ರತಿಭಟನಾಕಾರರನ್ನು ಬಂಧಿಸಲು ಪ್ರಯತ್ನಿಸಿದರು. ನಂತರ ಒಂದೆರಡು ನಿಮಿಷಗಳಲ್ಲಿಯೇ ಜಿಲ್ಲಾ ರಕ್ಷಣಾಧಿಕಾರಿ ವಿಮಲ್ ಕುಮಾರ್ ಸೂಚನೆಯ ಮೇರೆಗೆ ಎ.ಎಸ್.ಪಿ. ಯಲ್ಲಪ್ಪ ನೇತೃತ್ವದಲ್ಲಿ ಪ್ರತಿಭಟನಾಕಾರರ ಮೇಲೆ ಧಾಳಿ ನಡೆಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಬಲವಂತವಾಗಿ ವ್ಯಾನಿಗೆ ತುಂಬಿದರು. ಮಹಿಳಾ ಪ್ರತಿಭಟನಾಕಾರರನ್ನು ಅವ್ಯಾಚ್ಯ ಶಬ್ದಗಳಿಂದ ನಿಂದಿಸುವುದರೊಂದಿಗೆ ರಕ್ತ ಸುರಿಯುವಂತೆ ಹಲ್ಲೆ ಮಾಡಿದರು. ಮಹಿಳಾ ಪೊಲೀಸರೇ ಇಲ್ಲದೆ ಮಹಿಳಾ ಪ್ರತಿಭಟನಕಾರರನ್ನು ಬಂಧಿಸಿ ಜಿಲ್ಲಾ ಪೊಲೀಸ್ ಸಶಸ್ತ್ರ ಮೀಸಲು ಪಡೆ ಮೈದಾನದಲ್ಲಿ ಉರಿಬಿಸಿಲಿನಲ್ಲಿ ಕೂಡಿ ಹಾಕಿದರು. ಕನಿಷ್ಠ ಕುಡಿಯಲು ನೀರನ್ನು ಸಹ ನೀಡಲಿಲ್ಲ.

ಪೊಲೀಸರ ಈ ದೌರ್ಜನ್ಯವನ್ನು ಖಂಡಿಸಿ 50 ಕ್ಕೂ ಹೆಚ್ಚು ಮಂದಿ ಜಿಲ್ಲಾಧಿಕಾರಿಗಳ ಕಛೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು. ಈ ಪ್ರತಿಭಟನೆಯ ನೇತೃತ್ವ ವಹಿಸಿದ್ದ ಎಸ್.ಎಫ್.ಐ. ಜಿಲ್ಲಾಧ್ಯಕ್ಷ ವಿ.ಅಂಬರೀಷ್‌ನನ್ನು ವಿನಾಕಾರಣ ಬಂಧಿಸಿದರು. ಇದನ್ನು ವಿರೋಧಿಸಿದ್ದಕ್ಕೆ ನಗರ ವೃತ್ತ ನಿರೀಕ್ಷಕ ಸತ್ಯನಾರಾಯಣ ಕುದೂರ್ ಬೂಟು ಕಾಲಿನಿಂದ ಒದ್ದು, ಲಾಠಿಗಳಿಂದ ಹೊಡೆಯುತ್ತ ಅಂಬರೀಷ್‌ನನ್ನು ಎಳೆದೊಯ್ದರು. ಜೀಪಿನಲ್ಲಿ 15-20 ಮಂದಿ ಪೊಲೀಸರು ತೀವ್ರವಾಗಿ ಹಲ್ಲೆ ನಡೆಸಿದ್ದಾರೆ. ಠಾಣೆಯಲ್ಲಿ ಕೊಲೆ, ದರೋಡೆಕೋರರನ್ನು ನೋಡುವ ರೀತಿಯಲ್ಲಿ ಅಂಬರೀಷನ ಬಟ್ಟೆಗಳನ್ನು ಬಿಚ್ಚಿಸಿ, ಬೇಡಿ ತೊಡಿಸಿ ಚಿತ್ರಹಿಂಸೆ ನೀಡಿ ಮಾನವ ಹಕ್ಕುಗಳನ್ನು ಉಲ್ಲಂಘಿಸಿದ್ದಾರೆ. ಈ ಘಟನೆ ತಿಳಿದ ಪತ್ರಕರ್ತರು ಠಾಣೆಗೆ ಧಾವಿಸಿ ಈ ಅಮಾನುಷ ಕೃತ್ಯವನ್ನು ಖಂಡಿಸಿದ್ದಲ್ಲದೇ ಜಿಲ್ಲಾ ರಕ್ಷಣಾಧಿಕಾರಿಗಳೊಂದಿಗೆ ಮಾತನಾಡಿ ಬೇಡಿಗಳನ್ನು ತೆಗೆಸಿ ಬಟ್ಟೆಗಳನ್ನು ನೀಡಿದರು.

ಈ ಘಟನೆ ಕೋಲಾರದಲ್ಲಿ ಕಾಡ್ಗಿಚ್ಚಿನಂತೆ ಹಬ್ಬಿ ಎಲ್ಲಾ ಪ್ರಗತಿಪರ ಸಂಘಟನೆಗಳ ಮುಖಂಡರು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಪ್ರತಿಭಟನೆ ನಡೆಸಿ ಇದಕ್ಕೆ ಕಾರಣವಾದ ಜಿಲ್ಲಾ ಪೊಲೀಸ್ ಅಧಿಕಾರಿ ವಿಪುಲ್‌ಕುಮಾರ್, ಎ.ಎಸ್.ಪಿ. ಯಲ್ಲಪ್ಪ ಮತ್ತು ವೃತ್ತ ನಿರೀಕ್ಷಕ ಸತ್ಯನಾರಾಯಣಕುದೂರ್ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿಗಳನ್ನು ಆಗ್ರಹಿಸಲಾಯಿತು. ದೌರ್ಜನ್ಯ ನಡೆಸಿದ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಪ್ರತಿಭಟನೆಗಳನ್ನು ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಲಾಯಿತು.

ದೌರ್ಜನ್ಯವನ್ನು ವಿರೋಧಿಸಿ....

ಪೊಲೀಸ್‌ರ ಅಮಾನುಷ ದೌರ್ಜನ್ಯವನ್ನು ಖಂಡಿಸಿ ಕೋಲಾರದ ಎಲ್ಲಾ ಪ್ರಗತಿಪರ ಸಂಘಟನೆಗಳು ಆಗಸ್ಟ್ 21 ರಂದು ಸಭೆ ನಡೆಸಿ ಮುಂದಿನ ಹೋರಾಟಗಳನ್ನು ನಿಗದಿಗೊಳಿಸ ಲಾಯಿತು. ಆಗಸ್ಟ್ 22 ರಂದು ಕೋಲಾರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಘಟನೆಯನ್ನು ಬಹಿರಂಗವಾಗಿ ಖಂಡಿಸಲಾಯಿತು. ಪೊಲೀಸರ ವಿರುದ್ಧಕ್ರಮ ತೆಗೆದುಕೊಳ್ಳಲು ಒತ್ತಾಯಿಸಿ, ಆಗಸ್ಟ್ 27 ರಂದು ಜಿಲ್ಲೆಯ ಎಲ್ಲಾ ಪ್ರಗತಿಪರ ಸಂಘಟನೆಗಳು ಒಟ್ಟಾಗಿ ಕೋಲಾರದ ಗಾಂಧಿ ಪ್ರತಿಮೆ ಮುಂದೆ ಧರಣಿ ಸತ್ಯಾಗ್ರಹ ನಡೆಸಲು ನಿರ್ಧರಿಸಲಾಗಿದೆ. ಜಿಲ್ಲಾ ರಕ್ಷಣಾಧಿಕಾರಿ ವಿಫುಲ್‌ಕುಮಾರ್, ಹೆಚ್ಚುವರಿ ಜಿಲ್ಲಾ ರಕ್ಷಣಾಧಿಕಾರಿ ಯಲ್ಲಪ್ಪ, ನಗರ ವೃತ್ತ ನಿರೀಕ್ಷಕ ಸತ್ಯನಾರಾಯಣ ಕುದೂರ್ ವಿರುದ್ಧ ಮಾನವ ಹಕ್ಕುಗಳ ಆಯೋಗ, ಮಹಿಳಾ ಆಯೋಗ, ಅಟ್ರಾಸಿಟಿ ಪ್ರಕರಣಗಳನ್ನು ಹೂಡಲು ನಿರ್ಧರಿಸಲಾಯಿತು. ಇಷ್ಟಾದರೂ ಪೊಲೀಸರ ವಿರುದ್ಧ ಕ್ರಮ ತೆಗೆದುಕೊಳ್ಳದಿದ್ದಲ್ಲಿ ಆಗಸ್ಟ್ 27ರ ಧರಣಿ ಸಂದರ್ಭದಲ್ಲಿ ಮುಂದಿನ ಹೋರಾಟ ರೂಪಿಸಲು ತೀರ್ಮಾನಿಸಲಾಯಿತು. ಸಭೆಯಲ್ಲಿ ಎಸ್.ಎಫ್.ಐ., ಡಿವೈಎಫ್‌ಐ, ಜೆ.ಎಂ.ಎಸ್., ಕೆ.ಪಿ.ಆರ್.ಎಸ್., ಸಿ.ಐ.ಟಿ.ಯು., ದಲಿತ ಸಂಘರ್ಷ ಸಮಿತಿ, ಜಾತ್ಯಾತೀತ ಯುವ ಜನತಾದಳ, ಆದಿವು ಶಕ್ತಿ ವಿದ್ಯಾರ್ಥಿ - ಯುವಜನ - ಮಹಿಳಾ ಒಕ್ಕೂಟ, [illegible] ನಗರಸಭಾ ಸದಸ್ಯರು ಭಾಗವಹಿಸಿದ್ದರು.

ಸಮರ ಧೀರಸಂಗಾತಿ

ಸುರ್ಜಿತ್‌ರಿಗೆ ಅರ್ಥಪೂರ್ಣ ಶ್ರದ್ಧಾಂಜಲಿ

ಸ್ವಾತಂತ್ರ್ಯ ಚಳುವಳಿಯ ಹಿರಿಯ ಕಲಿ, ರೈತ ಚಳುವಳಿಯ ನೇತಾರ, ದೇಶದ ಕಮ್ಯುನಿಸ್ಟ್ ಚಳುವಳಿಯ ಅಗ್ರ ಪಂಕ್ತಿಯ ನಾಯಕ, ಸಿಪಿಐ(ಎಂ) ಪಕ್ಷದ ಮಾಜಿ ಪ್ರಧಾನ ಕಾರ್ಯದರ್ಶಿ ಕಾಂ. ಹರಿಕಿಶನ್‌ಸಿಂಗ್ ಸುರ್ಜಿತ್‌ರಿಗೆ ಶ್ರದ್ಧಾಂಜಲಿ ಅರ್ಪಿಸುವ ಸಭೆಯು ಬೆಂಗಳೂರಿನಲ್ಲಿ ಆಗಸ್ಟ್ 13 ರಂದು ನಡೆಯಿತು. ವಿವಿಧ ರಾಜಕೀಯ ಪಕ್ಷಗಳ ಗಣ್ಯರು, ವಿವಿಧ ಜನ ಚಳುವಳಿಗಳ ಪ್ರಮುಖರು ಅಗಲಿದ ಚೇತನಕ್ಕೆ ತಮ್ಮ ನುಡಿನಮನ ಶ್ರದ್ಧಾಂಜಲಿ ಸಲ್ಲಿಸಿದರು. ದೇಶಕ್ಕೆ ಮಾತ್ರವಲ್ಲ ಅಂತರ ರಾಷ್ಟ್ರೀಯವಾಗಿಯೂ ಸುರ್ಜೀತ್‌ರವರು ನೀಡಿದ ಕೊಡುಗೆಯನ್ನು ಸ್ಮರಿಸಲಾಯಿತು.

ಬೆಂಗಳೂರಿನ ಎಡಿಎ ರಂಗಮಂದಿರದಲ್ಲಿ ನಡೆದ ಸಮಾರಂಭದಲ್ಲಿ ಅಧ್ಯಕ್ಷತೆಯನ್ನು ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ. ವಿ.ಜೆ.ಕೆ. ನಾಯರ್ ವಹಿಸಿದ್ದರು. ಜನಶಕ್ತಿಯ ಸಂಪಾದಕರು, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್‌ರವರು ನಿರೂಪಿಸಿದ ಕಾರ್ಯಕ್ರಮದ ಆರಂಭದಲ್ಲಿ ಮತ್ತೊಬ್ಬ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್ ಪ್ರಸ್ತಾವಿಕವಾಗಿ ಮಾತನಾಡಿದರು.

ನರಗುಂದ-ನವಲಗುಂದ ಬಂಡಾಯದ ಸ್ಫೂರ್ತಿ

ಹಲವು ರಂಗಗಳ ಹೋರಾಟಗಳ ಕಲಿಯಾಗಿದ್ದ, ಸುರ್ಜಿತ್‌ರವರು ತೀರಿಕೊಂಡ ದಿನ ಕಮ್ಯುನಿಸ್ಟ್‌ರಿಗೆ ಮಾತ್ರವಲ್ಲ ಪ್ರಗತಿಪರರು, ಸಾಮಾಜಿಕ ಚಳುವಳಿಗಾರರಿಗೆಲ್ಲಾ ದುಃಖದ ದಿನ ಎಂದ ಜಿ.ಎನ್.ನಾಗರಾಜ್, ಪಂಜಾಬ್‌ನಲ್ಲಿ ತೀವ್ರ ನೀರಾವರಿ ಯೋಜನೆಗಳು ಜಾರಿಗೆ ನಂತರ ಬೆಳೆದು ಬಂದ ಅತ್ಯಂತ ಶಕ್ತಿಶಾಲಿಯಾದ 'ಅಭಿವೃದ್ಧಿ ಶುಲ್ಕ ವಿರೋಧಿ ಚಳುವಳಿ' ಗೆ ಕಾಂ:ಸುರ್ಜಿತ್ ನೇತೃತ್ವ ನೀಡಿದವರಾಗಿದ್ದರು. ಅತ್ಯಂತ ಪ್ರಭಾವಶಾಲಿಯಾದ ಆ ಹೋರಾಟದ ಮಾದರಿಯ ಆಧಾರದಲ್ಲೇ ಕರ್ನಾಟಕದಲ್ಲಿ ನರಗುಂದ, ನವಲಗುಂದ ರೈತ ಚಳುವಳಿಯನ್ನು ಯೋಜಿಸಲಾಯಿತು ಎಂದರು.

ರಾಷ್ಟ್ರೀಯ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಹಲವು ಬಾರಿ ಇಂದಿರಾಗಾಂಧಿ, ರಾಜೀವ್‌ಗಾಂಧಿಯವರೂ ಸುರ್ಜಿತ್‌ರ ಸಲಹೆ ಪಡೆಯುತ್ತಿದ್ದರು ಎಂದರು. ಎಸ್‌ಎಸ್‌ಎಲ್‌ಸಿ ಕೂಡ ಪಾಸು ಮಾಡದೇ ಇದ್ದ ಸುರ್ಜಿತ್ ಅವರು ತಮ್ಮ ಸ್ವಯಂ ಅಧ್ಯಯನ, ಚಳುವಳಿಗಳ ಮೂಲಕ ಪಡೆದುಕೊಂಡ ಅಪಾರ ವಿದ್ವತ್, ಅದರಲ್ಲೂ ಕೃಷಿ



ಸಮಸ್ಯೆಗಳ ಕುರಿತು ಗಳಿಸಿಕೊಂಡ ಜ್ಞಾನ ಮಹತ್ವದ್ದು ಎಂದರು. ಅವರು ಪಂಜಾಬಿ ಭಾಷೆಯಲ್ಲಿ ಉತ್ತಮ ಪ್ರಭುತ್ವ ಹೊಂದಿದ್ದ ಸಾಹಿತಿ, ಪತ್ರಕರ್ತರೂ ಆಗಿದ್ದರು ಎಂದರು.

ಸುರ್ಜಿತ್ ರಾಷ್ಟ್ರೀಯ ನಾಯಕರು

ಜಾಫರ್‌ಷರೀಫ್, ಸುರ್ಜಿತ್‌ರವರು ಕೇವಲ ಸಿಪಿಐ(ಎಂ) ಮುಖಂಡರು ಮಾತ್ರ ಆಗಿರಲಿಲ್ಲ. ಅವರು ರಾಷ್ಟ್ರೀಯ ನಾಯಕರೂ ಸಹ ಆಗಿದ್ದರು. ಅವರಿಗೆ ರಾಷ್ಟ್ರ ಸನ್ಮಾನ, ಕೇಂದ್ರ ಸರ್ಕಾರದ ಗೌರವದೊಂದಿಗೆ ಅಂತ್ಯಕ್ರಿಯೆ ನಡೆದದ್ದು ದೇಶಕ್ಕೆ ಸಹ ಒಂದು ಗೌರವ ಎಂದು ಮಾಜಿ ಕೇಂದ್ರ ಮಂತ್ರಿಗಳು ಹಿರಿಯ ರಾಜಕಾರಣಿಗಳೂ ಆದ ಶ್ರೀಯುತ ಜಾಫರ್ ಷರೀಫ್‌ರವರು ಹೇಳಿದರು. 16 ಲಕ್ಷ ನೌಕರರಿದ್ದ, ಬೃಹತ್ ಸಾರ್ವಜನಿಕ ಉದ್ದಿಮೆಯಾದ ರೈಲ್ವೆ ಇಲಾಖೆಯಲ್ಲಿನ ಸಮಸ್ಯೆ ಬಗೆಹರಿಸಲು, ಪರಿಸ್ಥಿತಿ ನಿಭಾಯಿಸಲು ನಾನು ಹಲವು ಬಾರಿ ಸುರ್ಜಿತ್‌ರವರ ಸಲಹೆ, ಮಾರ್ಗದರ್ಶನ ಪಡೆದುದಾಗಿ ಹೇಳಿದ ಜಾಫರ್ ಷರೀಫ್‌ರವರು 1992ರಲ್ಲಿ ಬಾಬರಿ ಮಸೀದಿಯನ್ನು ಧ್ವಂಸ ಮಾಡಲಾದ ಭೀಕರವಾದ, ವಿಷಮ ಪರಿಸ್ಥಿತಿಯಲ್ಲಿ ತಮಗೆ ಕೇಂದ್ರ ಸಚಿವರಾಗಿ ಮುಂದುವರಿಯ ಬೇಕೋ ಅಥವಾ ರಾಜೀನಾಮೆ ನೀಡಬೇಕೋ ಸಂದಿಗ್ಧ ಉಂಟಾಗಿತ್ತು. ರಾಜೀನಾಮೆ ನೀಡಬೇಕೆಂಬ ಒತ್ತಡ ಬಾರಿ ಪ್ರಬಲವಾಗಿತ್ತು. ಅಂತಹ ಪರಿಸ್ಥಿತಿಯಲ್ಲಿ ಸುರ್ಜಿತ್‌ರವರು ಅಧಿಕಾರದಲ್ಲಿ ಇದ್ದು ಕೋಮುಗಲಭೆಯಲ್ಲಿ ನೊಂದವರಿಗೆ, ಸಂತ್ರಸ್ತರಾದವರಿಗೆ ನೆರವಾಗ ಬೇಕೆಂಬ ಅಮೂಲ್ಯ ಸಲಹೆ ನೀಡಿದ್ದನ್ನು ಸ್ಮರಿಸಿ ಕೊಂಡರು. ರಾಷ್ಟ್ರದಲ್ಲಿ ಸೈದ್ಧಾಂತಿಕ ರಾಜಕಾರಣ ಮಾಡುತ್ತಿರುವುದು ಬಹುತೇಕ ಎಡಪಕ್ಷಗಳು ಮಾತ್ರ ಎಂದರು.

ಬಿಂದ್ರನ್‌ವಾಲೆ ವಿರುದ್ಧ ಮಾತನಾಡುವ ಧೈರ್ಯ ತೋರಿದವರು

– ಜಿ.ವಿ.ಎಸ್

ದೇಶದ ಐಕ್ಯತೆ ಸಮಗ್ರತೆಗೆ ಉಳಿಸಲು ಅಪಾರ ಕೊಡುಗೆ ಕೊಟ್ಟವರು, ದೇಶದ ಕಮ್ಯುನಿಸ್ಟ್ ಚಳುವಳಿಗೆ ಸರಿಯಾದ ದಾರಿ ತೋರಿದವರು ಸುರ್ಜಿತ್ ಎಂದು ಮಾಜಿ ಶಾಸಕರು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಕಾಂ. ಜಿ.ವಿ.ಶ್ರೀರಾಮರೆಡ್ಡಿಯವರು ಹೇಳಿದರು.

ಅಸ್ಸಾಂ, ಈಶಾನ್ಯ ಭಾರತ, ಪಂಜಾಬ್‌ಗಳಲ್ಲಿ ಪ್ರತ್ಯೇಕತೆಯ ಚಳುವಳಿಯು ಉಲ್ಬಣಗೊಂಡ ಗಂಭೀರ ಪರಿಸ್ಥಿತಿಯಲ್ಲಿ ದೇಶದ ಐಕ್ಯತೆಯ ಪರವಾಗಿ ನಿಂತವರು, ಒಬ್ಬ ಸಿಖ್ ಸಮುದಾಯದಿಂದ ಬಂದ ವ್ಯಕ್ತಿಯಾಗಿ ಪಂಜಾಬ್‌ನ ಪ್ರತ್ಯೇಕತೆಯ ವಿರುದ್ಧ ಬಿಂದ್ರನ್‌ವಾಲೆಯ ವಿರುದ್ಧ ಮಾತನಾಡುವ ಧೈರ್ಯ ತೋರಿದವರು ಎಂದರು. ದೇಶದ ದುಡಿಯುವ ಜನರ ಐಕ್ಯತೆಯನ್ನು ಮುರಿಯುವ ಕೋಮುವಾದದ ವಿರುದ್ಧ ಅವರದ್ದು ದೃಢವಾದ ಹೋರಾಟ ಎಂದರು. ಕಮ್ಯುನಿಸ್ಟ್ ಚಳುವಳಿಯಲ್ಲಿ ಮೊದಲಿಗೆ ಬಲಪಂಥೀಯ ಪರಿಷ್ಕರಣವಾದ, ಆನಂತರದಲ್ಲಿ ಎಡಪಂಥೀಯ ದುಸ್ಸಾಹವಾದವು ಕಂಡು ಬಂದಾಗ ಈ ವಿಚಲನೆಗಳ ವಿರುದ್ಧ ದೃಢ ಹೋರಾಟ ನಡೆಸಿದವರಲ್ಲಿ ಸುರ್ಜಿತ್ ಮುಂಚೂಣಿಯಲ್ಲಿದ್ದರು ಎಂದು ಅವರು ತಿಳಿಸಿದರು.


77 ವರ್ಷಗಳ ಚಳುವಳಿ, ಹೋರಾಟ:


– ಪುಟ್ಟಣ್ಣಯ್ಯ

ರೈತ ಚಳುವಳಿಯಲ್ಲಿ 27 ವರ್ಷಗಳನ್ನು ಕಳೆದಿರುವ ತಮಗೆ ನಿವೃತ್ತಿಯಾಗಬೇಕು ಅಂತ ಅನಿಸುತ್ತಿದೆ. ಅಂತಹದ್ದರಲ್ಲಿ ದೇಶಕ್ಕಾಗಿ 77 ವರ್ಷ ಅವಿರತವಾಗಿ ಶ್ರಮಿಸಿದ ಸುರ್ಜಿತ್ ಒಬ್ಬ ಮಹಾನ್ ಹೋರಾಟಗಾರರು ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಮುಖಂಡರು ಸರ್ವೋದಯ ಪಕ್ಷದ ಕಾರ್ಯಾಧ್ಯಕ್ಷರಾದ ಕೆ.ಎಸ್.ಪುಟ್ಟಣ್ಣಯ್ಯ ಸ್ವಲ್ಪ ಹಾಸ್ಯಭರಿತವಾಗಿ ಹೇಳಿದರು.

ಪಕ್ಷವನ್ನು ಬಲಿಕೊಟ್ಟು ಮನೆ ಕಟ್ಟಿಕೊಳ್ಳುವುದು ರಾಜಕಾರಣದಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ. ಆದರೆ ತಮ್ಮ ಸ್ವಂತ ಹಿತಾಸಕ್ತಿ ಕಡೆಗಣಿಸಿ ಪಕ್ಷ ಕಟ್ಟಿದಂತಹ ಗುಂಪಿಗೆ ಸೇರಿದವರು ಸುರ್ಜಿತ್‌ರವರು ಎಂದವರು ಸಿಪಿಐನ ರಾಜ್ಯ ಮಂಡಳಿ ಕಾರ್ಯದರ್ಶಿ ಕಾಂ. ಸಿದ್ದನಗೌಡ ಪಾಟೀಲರು, 'ನ ಖಲಿಸ್ತಾನ ನ ಹಿಂದೂ ರಾಜ್ ಜುಗ್‌ಜುಗ್ ಹಿಂದೂಸ್ತಾನ್' ಎಂದು ಪ್ರತ್ಯೇಕವಾದದ ವಿರುದ್ಧ ಘೋಷಿಸಿ ಎಡಪಕ್ಷಗಳ ಕಾರ್ಯಕರ್ತರು ದೇಶದ ಐಕ್ಯತೆಗೆ ಪ್ರಾಣ ತೆತ್ತಿದ್ದಾರೆ. ಪಂಜಾಬ್‌ನ ಸಿಪಿಐ, ಸಿಪಿಐ(ಎಂ) ಪಕ್ಷದ ಕಛೇರಿಗಳಿಗೆ ಹೋದರೆ ನೂರಾರು ಹುತಾತ್ಮ ಸಂಗಾತಿಗಳ ಫೋಟೋಗಳನ್ನು ನೋಡಬಹುದು. ಅಂತಹ ಸಮರ್ಪಣ ಮನೋಭಾವಕ್ಕೆ ಸ್ಫೂರ್ತಿಯಾಗಿದ್ದವರು ಸುರ್ಜಿತ್ ಎಂದು ಅವರು ವಿವರಿಸಿದರು. ಜನತಾ ದಳ ರಾಷ್ಟ್ರೀಯ ಅಧ್ಯಕ್ಷರಾದ ದೇವೇಗೌಡರು ಸಮಾರಂಭಕ್ಕೆ ತಲುಪಲಾರದ ಕಾರಣಕ್ಕಾಗಿ ಆ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ರಮೇಶ್ ಬಾಬು ಭಾಗವಹಿಸಿ ಶ್ರದ್ಧಾಂಜಲಿ ಅರ್ಪಿಸಿದರು. ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ರಾಜ್ಯ ಸಂಚಾಲಕರಾದ ಮಾವಳ್ಳಿ ಶಂಕರ್‌ರವರು ಸಹ ಮಾತನಾಡಿ ಸುರ್ಜಿತ್‌ರ ಕೊಡುಗೆಯನ್ನು ಸ್ಮರಿಸಿದರು.

ವೇದಿಕೆಯ ಗಣ್ಯರೆಲ್ಲರೂ ಸುರ್ಜಿತ್‌ರ ಭಾವಚಿತ್ರಕ್ಕೆ ಹೂವಿನ ಪಕುಳೆಯನ್ನು ಅರ್ಪಿಸಿ ಗೌರವ ಸಲ್ಲಿಸಿದರು.





ಸಾಮ್ರಾಜ್ಯಶಾಹಿ ಮತ್ತು ವಿಜ್ಞಾನ

ಪುಟ 2 ರಿಂದ

ಒಂದೋ ಶ್ರೀಮಂತ ವರ್ಗಕ್ಕೆ ಅಥವಾ ಅಮೆರಿಕಾಕ್ಕೆ ರಫ್ತಾಗಬೇಕು!

ಯಾರಿಗೆ ಪ್ರೋಟೀನಿನ ಅಭಾವವಿದೆಯೋ ಅವರಿಗೆ ಅದು ತಲುಪುವುದೇ ಇಲ್ಲ. ಇತ್ತ ದೊರೆಯಬಹುದಾದ ನೆಲಗಡಲೆ ಇನ್ನಿತರ ಬೇಳೆ ಕಾಳುಗಳೂ ದುರ್ಲಭವಾಗುತ್ತಾ ಬಡವರು ಮತ್ತಷ್ಟು ಪಾತಾಳಕ್ಕೆ ತಳ್ಳಲ್ಪಡುವ ಈ ದುರವಸ್ಥೆಯಲ್ಲಿ ನಮ್ಮ ಘನವಿಜ್ಞಾನಿಗಳ ಶಿಫಾರಸು ಯಾವ ಕರ್ಮಕ್ಕೆ? ಇದರರ್ಥ ಇಷ್ಟೆ. ಈ ದಿಸೆಯಲ್ಲಿ ನಮ್ಮ ವಿಜ್ಞಾನಿಗಳು ಸಾಮ್ರಾಜ್ಯಶಾಹಿಯ ಗುಲಾಮರಾಗಿ ವಿಜ್ಞಾನವನ್ನು ಶೋಷಣೆಯ ಒಂದು ಅಸ್ತ್ರವಾಗಿ ಬಳಸುತ್ತಿದ್ದಾರೆ. ಹೀಗಿರುವಲ್ಲಿ ಇಂಥ ವೈಜ್ಞಾನಿಕ ಪ್ರಗತಿ ಯಾವ ಪುರುಷಾರ್ಥಕ್ಕೆ? ಇದರಿಂದ ದೇಶದ ಪ್ರಗತಿಯಾಗುವುದಿಲ್ಲ ಬದಲಿಗೆ ದೇಶ ಮತ್ತಷ್ಟು ಅಧೋಗತಿಗೆ ಇಳಿಯುತ್ತದೆ.

ವಿಜ್ಞಾನ ಅದರಷ್ಟಕ್ಕೇನೆ ಪಕ್ಷಪಾತ ರಹಿತ ವಾದುದು ತಾನೇ? ಹಾಗಿದ್ದ ಮೇಲೆ ಪ್ರೋಟೀನಿನ ಕೊರತೆ, ದೇಶವ್ಯಾಪಿ ಬಡತನದ ವಿರುದ್ಧದ ಸಮರದ ಕೃತ್ರಿಮ ಮಾತೇಕೆ? ಇದರ ಅರ್ಥ ಇಷ್ಟೆ - ದೊಡ್ಡಮಟ್ಟದ ಗ್ರಾಂಟುಗಳು, ವಿದೇಶಿ ಶಿಷ್ಯವೃತ್ತಿ (Scholorship) ಗಳು. ಅತಿಸುಲಭದಲ್ಲಿ ದೊರೆಯುವ ವಿಶೇಷ ಸೌಕರ್ಯದ ಸೆಮಿನಾರುಗಳು, ವಿದೇಶ ಪ್ರಯಾಣ - ಇವೆಲ್ಲಾ ಇರುವಾಗ ಯಾಕೆ ತಾನೆ ವಿಜ್ಞಾನಿಗಳು ಸೋಯಾಬೀನನ್ನು ಬಿಟ್ಟು ನೆಲಗಡಲೆಯನ್ನು ಹಿಡಿದುಕೊಂಡಾರು? ಇದು ಕೃಷಿ ಕ್ಷೇತ್ರದ ಒಂದು ಸಣ್ಣ ಉದಾಹರಣೆ ಅಷ್ಟೇ. ಔಷಧ ಕ್ಷೇತ್ರವನ್ನು ಗಮನಿಸಿದರೆ ಈ ಧುರೀಣರು ಎಂಥ ಮಾನವನಾಶಕ ಔಷಧಿಗಳ ಹಿಂದೆ ಡೋಲು ಬಾರಿಸುತ್ತಿರುತ್ತಾರೆ ಎಂಬುದು ತಿಳಿಯುತ್ತದೆ. (ಈ ಕುರಿತು ಮುಂದೆ ಬರೆಯಲಾಗುವುದು.)

ಏನೇ ಇರಲಿ, ಗೊತ್ತಿದ್ದೋ ಗೊತ್ತಿಲ್ಲದೆಯೋ ಲಾಭಕ್ಕಾಗಿಯೋ ಲೋಭಕ್ಕಾಗಿಯೋ ಭಾರತ ದಂತಹ ಅಭಿವೃದ್ಧಿಶೀಲ ದೇಶಗಳಲ್ಲಿ ವಿಜ್ಞಾನಿಗಳು ಕೂಡಾ ಸಾಮ್ರಾಜ್ಯಶಾಹಿಯ ಸಿಂಹಾಸನದ ಎಡಬಲದಲ್ಲಿ ಚಾಮರ ಬೀಸುತ್ತಿದ್ದಾರೆ!

ಜನಶಕ್ತಿ ಕನ್ನಡ ವಾರಪತ್ರಿಕೆ

ನೀರು ಜನ ಜೀವನದ ಅತ್ಯಾವಶ್ಯಕ ಅಂಶ. ಆದರೆ ಅದನ್ನೇ ಖಾಸಗೀಕರಿಸಿ, ಬಹುರಾಷ್ಟ್ರೀಯ ಕಂಪನಿಗಳಿಗೊಪ್ಪಿಸಿ ವ್ಯಾಪಾರದ ದಂಧೆಯಾಗಿಸುವುದು ಆಳುವ ಜನರ ಒಂದು ನಿರ್ದಯ ನೀತಿ

ಜೀವಜಲದ ದಂಧೆ

'ನೀರು ಜೀವನದ ಅವಿಭಾಜ್ಯ ಅಂಗ, ಬದುಕಿನೊಂದಿಗೆ ಹೆಣೆದುಕೊಂಡಿದೆ. ಅದೊಂದು ತಾಯಿ ಮತ್ತು ಮಾಧ್ಯಮವಿದ್ದಂತೆ. ನೀರಿಲ್ಲದೆ ಜೀವನವೇ ಇಲ್ಲ' ಎಂದು ಜೈವಿಕ ವಿಜ್ಞಾನಿ ಮತ್ತು ಹಂಗೇರಿಯಾದ ಜೈವಿಕ ವಿಜ್ಞಾನಿ ಮತ್ತು ನೋಬೆಲ್ ಪ್ರಶಸ್ತಿ ವಿಜೇತ ಲೇಖಕ ಆಲ್ಬರ್ಟ್ ಜೆಂಟ್ ಯೋರ್ಗಿ ಹೇಳಿದ್ದಾರೆ. ಇದು ಅಕ್ಷರಸಃ ಸತ್ಯ. 20ನೇ ಶತಮಾನದಲ್ಲಿ ತೈಲಕ್ಕಾಗಿ ಯುದ್ಧಗಳು ನಡೆದಿದ್ದರೆ, 21ನೇ ಶತಮಾನದಲ್ಲಿ ನೀರಿಗಾಗಿ ಯುದ್ಧಗಳು ನಡೆಯುವ ಸಾಧ್ಯತೆಗಳಿವೆ.

ವಿಶ್ವ ಸಂಸ್ಥೆಯ ವರದಿಯೊಂದರ ಪ್ರಕಾರ 2025ರ ವೇಳೆಗೆ ಜಗತ್ತಿನ ಒಟ್ಟು ಜನಸಂಖ್ಯೆಯ ಮೂರನೇ ಎರಡು ಭಾಗದಷ್ಟು ಜನಕ್ಕೆ ಶುದ್ಧವಾದ ಕುಡಿಯುವ ನೀರು ಲಭ್ಯವಿರುವುದಿಲ್ಲ. 'ಸರ್ವರಿಗೂ ನೀರು' ಎಂಬ ಘೋಷಣೆಯಡಿ ವಿಶ್ವ ಸಂಸ್ಥೆ 2003ನ್ನು ಅಂತರಾಷ್ಟ್ರೀಯ ನೀರಿನ ದಿನವನ್ನಾಗಿ ಆಚರಿಸಿತು. 2015 ರ ವೇಳೆಗೆ ಕುಡಿಯುವ ನೀರು ದೊರೆಯದಿರುವ ಜನಸಂಖ್ಯೆಯನ್ನು ಈಗಿರುವುದಕ್ಕಿಂತ ಅರ್ಧದಷ್ಟಾದರೂ ಕಡಿಮೆಗೊಳಿಸುವ ಶಪಥ ಮಾಡಿತು. ಶಪಥ ಕೇವಲ ಕಾಗದದ ಮೇಲೆ ಉಳಿದಿದೆಯೇ ವಿನಃ ತೃಣಮಾತ್ರವೂ ಕಾರ್ಯರೂಪಕ್ಕೆ ಬಂದಿಲ್ಲ.

ಅಭಿವೃದ್ಧಿ ಶೀಲ ದೇಶಗಳಲ್ಲಿ ಕಲುಷಿತ ನೀರಿನಿಂದ ಸೃಷ್ಟಿಯಾಗುವ ಸಾಂಕ್ರಾಮಿಕ ಕಾಯಿಲೆಗಳಿಗೆ ಪ್ರತಿ 8 ನಿಮಿಷಕ್ಕೊಂದು ಮಗು ಸಾಯುತ್ತಿದೆ. ಭೀಕರವಾಗಿ ಕಾಡುತ್ತಿರುವ ಈ ಸಮಸ್ಯೆಗೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿರುವ ಪರಿಹಾರವೇನು? ವಿಶ್ವಸಂಸ್ಥೆ ಮತ್ತು ಬಹುರಾಷ್ಟ್ರೀಯ ಕಂಪನಿಗಳು ನೀಡುವ ಪರಿಹಾರವನ್ನು ಕೇಳಿದರೆ ಹೇಸಿಗೆ ಹುಟ್ಟುತ್ತದೆ. ಬಡವರು ಇನ್ನು ಮುಂದೆ ಗುಟುಕು ನೀರಿಗಾಗಿ ಅಹೋರಾತ್ರಿ ಹೋರಾಟ ನಡೆಸುವ ಪರಿಸ್ಥಿತಿ ಎದುರಾಗಲಿದೆ.

ಹೃದಯ ವಿದ್ರಾವಕ

ದೇಶದ ಗ್ರಾಮೀಣ ಪ್ರದೇಶದಲ್ಲಿ ಕುಡಿವ ನೀರಿನ ಸಮಸ್ಯೆ ಜನತೆಯ ಬದುಕನ್ನೇ ಕಿತ್ತು ತಿನ್ನುತ್ತಿದೆ. ಹಣ ನೀಡಿ ನೀರನ್ನು ಖರೀದಿಸುವಂತಹ ಪರಿಸ್ಥಿತಿ ಎದುರಾಗಿದೆ. ಕೂಲಿ ಹಣದಲ್ಲಿ ಕುಡಿವ ನೀರಿಗಾಗಿಯೇ ಇಂತಿಷ್ಟು ಹಣವನ್ನು ಪ್ರತ್ಯೇಕವಾಗಿ ಮೀಸಲಿಡುವ ಪರಿಸ್ಥಿತಿ ಎದುರಾಗಿದೆ. ಇದು ಅತಿ ಹೆಚ್ಚು ಪರಿಣಾಮ ಬೀರಿರುವುದು ಮಹಿಳೆಯರ ಮೇಲೆ. ಅವರ ಪಾಡಂತೂ ಹೇಳತೀರದು. ತಮ್ಮ ಕುಟುಂಬಕ್ಕೆ ಅಗತ್ಯವಾದ ನೀರನ್ನು ಕ್ರೋಢೀಕರಿಸುವುದಕ್ಕಾಗಿ ಒಂದು ವರ್ಷದಲ್ಲಿ ಭಾರತದ ಗ್ರಾಮೀಣ ಮಹಿಳೆಯರ 150 ದಶಲಕ್ಷ ಕೆಲಸದ ದಿನಗಳು ವ್ಯರ್ಥವಾಗುತ್ತಿವೆ. ಅಂದರೆ ಮಹಿಳೆಯರು ನೀರಿಗಾಗಿ ಮೀಸಲಿಡುವ ದಿನಗಳನ್ನು ಉತ್ಪಾದಕತೆಯಲ್ಲಿ ತೊಡಗಿಸಿಕೊಂಡರೆ ಬೊಕ್ಕಸಕ್ಕೆ ಒಂದು ವರ್ಷಕ್ಕೆ 45,000ಕೋಟಿ ರೂ.ಆದಾಯ ಬರಲಿದೆ. ರಾಜಸ್ಥಾನದ ಕೆಲವು ಗ್ರಾಮಗಳಲ್ಲಿ ಮಹಿಳೆಯರು ಪ್ರತಿದಿನ 10ಕ್ಕೂ ಹೆಚ್ಚು ಕಿಲೋ ಮೀಟರ್ ದೂರದಿಂದ ಕುಡಿವ ನೀರು ತರಬೇಕಾದ ಪರಿಸ್ಥಿತಿ ಉದ್ಭವಿಸಿದೆ. ನಗರ ಪ್ರದೇಶದಲ್ಲಿ ತುಂಬಾ ದೂರ ನಡೆಯುವ ಸ್ಥಿತಿ ಇಲ್ಲದಿದ್ದರೂ ಎರಡು ಮೂರು ದಿನಕ್ಕೊಮ್ಮೆ ಬರುವ ನೀರಿಗಾಗಿ ರಾತ್ರಿ ಹಗಲು ಗಂಟೆ ಗಟ್ಟಲೆ ಸಾಲು ನಿಲ್ಲಬೇಕು. ಗ್ರಾಮೀಣ ಪ್ರದೇಶದ ಮಹಿಳೆ ಕುಡಿವ ನೀರನ್ನು ತರಲು ವರ್ಷಕ್ಕೆ ಸರಾಸರಿ 14,000 ಕಿ.ಮೀಟರ್ ನಡೆಯುತ್ತಿದ್ದಾಳೆ ಎಂದರೆ ಎಂತಹವರ ಹೃದಯವೂ ಕ್ಷಣಮಾತ್ರವಾದರೂ ಕಂಪಿಸುತ್ತದೆ.

ಹನಿ ಹನಿ ನೀರಿಗಾಗಿ

- ಮಹಿಳೆಯರ 150 ಕೆಲಸದ ದಿನಗಳ ಹಾನಿ
- 45,000 ಕೋಟಿ ಆದಾಯ ಹರಣ
- ವರ್ಷಕ್ಕೆ 14,000 ಕಿ.ಮಿ. ನಡಿಗೆ

ರಾಜಸ್ಥಾನದ ಹಳ್ಳಿಗಳಲ್ಲಿ ಮನೆಯಲ್ಲಿನ ಮಹಿಳೆ ಅಥವಾ ಯುವತಿಯೊಬ್ಬಳನ್ನು ಕುಡಿವ ನೀರು ತರಲು, ಸಂಗ್ರಹಿಸುವುದು ಮತ್ತು



ನಿರ್ವಹಣೆಗಾಗಿಯೇ ಮೀಸಲಿಡಲಾಗಿದೆ. ಹಲವಾರು ಪ್ರಕರಣಗಳಲ್ಲಿ ಹೆಣ್ಣು ಮಕ್ಕಳು ಶಾಲೆಯನ್ನೇ ತೊರೆಯಬೇಕಾದಂತಹ ಪರಿಸ್ಥಿತಿ ಎದುರಾಗಿದೆ. ಒರಿಸ್ಸಾದ 'ತಿಟ್ಲಾಗರ್' ದೇಶದಲ್ಲೇ ಅತ್ಯಧಿಕ ತಾಪಮಾನ ಇರುವ ನಗರವಾಗಿದ್ದು, ಜನತೆ ಇಲ್ಲಿ ಹಣ ಪಾವತಿಸದಿದ್ದರೆ ಕುಡಿವ ನೀರೇ ಇಲ್ಲ. ಒಂದು ಡಬ್ಬ ನೀರಿಗಾಗಿ 2 ರಿಂದ 8 ರೂ. ಪಾವತಿಸಬೇಕಾಗಿದೆ. ಇದು ಒರಿಸ್ಸಾದ ನಗರ ಪ್ರದೇಶದ ಕಥೆ. ಇನ್ನೂ ಗ್ರಾಮೀಣ ಪ್ರದೇಶದ ಕಥೆ ಹೇಳತೀರದು.

ಭೀಕರ ಭವಿಷ್ಯ

ಬೆಂಗಳೂರಿನಲ್ಲಿ ಈ ಕಥೆ ಭಿನ್ನವಾಗಿಲ್ಲ. ನಗರದ ಶೇಕಡ 35 ರಷ್ಟು ನಾಗರೀಕರಿಗೆ ಮಾತ್ರ ಸಮರ್ಪಕವಾಗಿ ಕುಡಿವ ನೀರು ದೊರೆಯುತ್ತಿದೆ. 2006ರಲ್ಲಿ ಭಾರತದಲ್ಲಿ ಕೃಷಿ ಮನೆ ಬಳಕೆ ಮತ್ತು ಕೈಗಾರಿಕಾ ವಲಯಗಳಿಗೆ 82,900 ಕೋಟಿ ಕ್ಯೂಬಿಕ್ ಮೀಟರ್ ನೀರಿನ ಅಗತ್ಯತೆ ಇತ್ತು. 2008ರ ವೇಳೆಗೆ ಈ ಪ್ರಮಾಣ ಇನ್ನೂ ಹೆಚ್ಚಾಗಿದ್ದು, 2050ರ ವೇಳಗೆ ಈ ಬೇಡಿಕೆ 1.4 ಲಕ್ಷ ಕೋಟಿ ಕ್ಯೂಬಿಕ್ ಮೀಟರ್‌ಗೆ ತಲುಪಲಿದೆ. ಇಷ್ಟೊಂದು ನೀರಿನ ಅಗತ್ಯತೆಯನ್ನು ಪೂರೈಸಲು ನಮ್ಮನ್ನಾಳುವ ಸರ್ಕಾರಗಳು ಈಗಿಂದೀಗಲೇ ಯೋಜನೆಗಳನ್ನು ರೂಪಿಸಬೇಕಾಗಿದೆ. ಒಂದು ವೇಳೆ ಇದರಲ್ಲಿ ನಿರ್ಲಕ್ಷ್ಯತೆ ತೋರಿದಲ್ಲಿ 2050ರ ವೇಳೆಗೆ ಬಹುತೇಕ ಗ್ರಾಮಗಳು, ಪಟ್ಟಣಗಳು ಜನವಸತಿ ಇಲ್ಲದ ಗ್ರಾಮಗಳಾಗಿ ಪರಿವರ್ತನೆಯಾಗುವಂತಹ ಭೀಕರ ಭವಿಷ್ಯ ನಮ್ಮ ಮುಂದಿದೆ.

ಭಾರತದಲ್ಲಿ ಗ್ರಾಮೀಣ ಪ್ರದೇಶಗಳಿಗಿಂತಲೂ ನಗರ ಪ್ರದೇಶದ ಜನತೆ ಹೆಚ್ಚು ನೀರು ವ್ಯಯ ಮಾಡುತ್ತಾರೆ. ಫ್ಲಶ್, ಟಾಯ್ಲೆಟ್‌ಗಳು, ವಾಷಿಂಗ್ ಮೆಷಿನ್‌ಗಳನ್ನು ಹೆಚ್ಚು ಬಳಕೆ ಮಾಡುವುದರಿಂದ ನೀರಿನ ವ್ಯಯ ಹೆಚ್ಚಾಗುತ್ತಿದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 30 ರಷ್ಟು ಸದ್ಯ ನಗರ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. 2050ರ ವೇಳೆಗೆ ಈ ಪ್ರಮಾಣ ಶೇಕಡ 50ಕ್ಕೆ ತಲುಪುವ ಅಂದಾಜುಗಳಿವೆ.

ಸ್ವಯಂಕೃತ ಅಪರಾಧ

ಭಾರತ ಸಂಪೂರ್ಣವಾಗಿ ಭೂಮಿ ಮೇಲಿನ ನೀರು ಮತ್ತು ಅಂತರ್ಜಲದ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿದೆ. ವರ್ಷವೊಂದರಲ್ಲಿ ಸರಾಸರಿ ಮಳೆ ಪ್ರಮಾಣ 4,00,000ಕೋಟಿ ಕ್ಯೂಬಿಕ್ ಮೀಟರ್‌ಗಳಾಗಿವೆ. ಇದರಲ್ಲಿ ಕೇವಲ ಶೇಕಡ 18 ರಷ್ಟು ನೀರನ್ನು ಮಾತ್ರ ಬಳಕೆ ಮಾಡಲು ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆ. ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ 10,81,200 ಕೋಟಿ ಕ್ಯೂಬಿಕ್ ಮೀಟರ್‌ನಷ್ಟು ಅಂತರ್ಜಲ ಸುಲಭವಾಗಿ ಲಭ್ಯವಾಗುತ್ತದೆ. ಈ ಅಂತರ್ಜಲವನ್ನು ಪುನರುಜ್ಜೀವನಗೊಳಿಸುವುದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಮತ್ತು ವೇಗವಾಗಿ ಹೊರತೆಗೆಯಲಾಗುತ್ತಿದೆ. ಪ್ರತಿವರ್ಷ ಅಂತರ್ಜಲ ಪ್ರಮಾಣ ಶೇಕಡ 0.4 ಮೀಟರ್‌ಗಳಷ್ಟು ಇಳಿಮುಖ ಕಾಣುತ್ತಿದೆ. ಅಂತರ ಜಲಕ್ಕೆ ಉಂಟಾಗಿರುವ ಗಂಡಾಂತರ ಪ್ರಾಕೃತಿಕ ಸಮಸ್ಯೆಯೇ ಅಲ್ಲ, ಅದು ಸಂಪೂರ್ಣವಾಗಿ ಮನುಷ್ಯನೇ ಮಾಡಿಕೊಳ್ಳುತ್ತಿರುವ ಸ್ವಯಂಕೃತ ಅಪರಾಧವಾಗಿದೆ.

ವೈಜ್ಞಾನಿಕ ಸಂಶೋಧನೆ ಪ್ರಕಾರ ವ್ಯಕ್ತಿಯೊಬ್ಬನಿಗೆ ಕುಡಿಯಲು ವಾರ್ಷಿಕ 1700 ಕ್ಯೂಬಿಕ್ ಮೀಟರ್‌ನಷ್ಟು ನೀರಿನ ಅವಶ್ಯಕತೆ ಇದೆ. ಇದಕ್ಕಿಂತಲೂ ಕಡಿಮೆಯಾದಲ್ಲಿ ಆ ದೇಶ ಕುಡಿವ ನೀರಿನ ಕೊರತೆ ಅನುಭವಿಸುತ್ತಿದೆ ಎಂತಯೇ ಅರ್ಥ.

ಅಮೇರಿಕಾದಲ್ಲಿ ಒಬ್ಬ ವ್ಯಕ್ತಿಗೆ 1688 ಕ್ಯೂಬಿಕ್ ಮೀಟರ್ ಲಭ್ಯವಾಗುತ್ತಿದ್ದರೆ, ಜಪಾನ್‌ನಲ್ಲಿ 723, ಆಸ್ಟ್ರೇಲಿಯಾ 945, ಚೀನಾ 431, ಭಾರತ 497 ಮತ್ತು ದಕ್ಷಿಣ ಆಫ್ರಿಕಾದಲ್ಲಿ 288 ಕ್ಯೂಬಿಕ್ ಮೀಟರ್ ಒದಗಿಸಲಾಗುತ್ತಿದೆ. ಈ ಪಟ್ಟಿಯಲ್ಲಿ ಭಾರತ 100ನೇ ಸ್ಥಾನದಲ್ಲಿದ್ದರೆ, ಅಮೇರಿಕಾ ಸಹ ಅಗತ್ಯ ಪ್ರಮಾಣದಷ್ಟು ಕುಡಿವ ನೀರು ಒದಗಿಸುತ್ತಿಲ್ಲ. 1951ರಿಂದಲೂ ಜಗತ್ತಿನಲ್ಲಿ ಕುಡಿವ ನೀರಿನ ಲಭ್ಯತೆ ನಿರಂತರವಾಗಿ ಕುಸಿಯುತ್ತಿದೆ.

ಇದೆಂತಹಾ ಸೂಚನೆ

ವಿಶ್ವಸಂಸ್ಥೆ ಮುಂದಿಟ್ಟಿರುವ ಪರಿಹಾರಗಳತ್ತ ಒಮ್ಮೆ ನೋಟಹರಿಸೋಣ. ವಿಶ್ವ ಸಂಸ್ಥೆಯ ಶಿಫಾರಸ್ಸಿನ ಪ್ರಕಾರ 1. ನೀರು ಸರಬರಾಜಿನ ಎಲ್ಲ ಹಂತಗಳನ್ನು ಖಾಸಗೀಕರಣ ಮಾಡಬೇಕು. 2. ಖಾಸಗಿ ಬಂಡವಾಳ ತೊಡಗಿಸಬೇಕು. 3. ನೀರಿನ ದರಗಳನ್ನು ಹೆಚ್ಚಿಸಬೇಕು. 4. ನೀರಾವರಿ ಮತ್ತು ಜಲ ವಿದ್ಯುತ್ ಯೋಜನೆಗಳನ್ನು ಹೆಚ್ಚಿಸಬೇಕು. 5. ನೀರಿಗಾಗಿ ಪ್ರತ್ಯೇಕ ಮಾರುಕಟ್ಟೆಯನ್ನು ರೂಪಿಸಬೇಕು. ಇವು ವಿಶ್ವ ಸಂಸ್ಥೆ ನೀಡುವ ಸಲಹೆಗಳು. ಅಂದರೆ ಪ್ರಕೃತಿ ನೀಡುವ ನೀರನ್ನು ನಾವು ಹಣ ಕೊಟ್ಟು ಖರೀದಿಸುವಂತಾಗುತ್ತದೆ.

ವಿಶ್ವ ಸಂಸ್ಥೆಯ ಅಂಕಿ ಅಂಶಗಳ ಪ್ರಕಾರವೇ ಜಗತ್ತಿನ ಶೇ.80 ರಷ್ಟು ಮಂದಿಯ ಪ್ರತಿದಿನದ ಆದಾಯ 20 ರೂ.ಗಿಂತಲೂ ಕಡಿಮೆ. ಹೀಗಿರುವಾಗ ಕುಡಿಯುವ ನೀರಿಗೂ ಹಣ ನೀಡುವುದೆಂದರೆ ಬಡವರ ಪಾಡೇನು? ಇಂತಹ ವ್ಯವಸ್ಥೆ ಇನ್ನೂ ಜಾರಿಯಾಗಿಲ್ಲ ಎಂದು ಯಾರಾದರೂ ಭಾವಿಸಿದರೆ ತಪ್ಪಾಗುತ್ತದೆ.

ಸುಲಿಗೆಯ ಸಾಮ್ರಾಜ್ಯ

ಜಗತ್ತಿನ ಸುಮಾರು 50 ಕೋಟಿಗೂಹೆಚ್ಚು ಮಂದಿಗೆ ಪ್ರಸ್ತುತ ಬಹುರಾಷ್ಟ್ರೀಯ ಕಂಪನಿಗಳು (ಎಂಎನ್‌ಸಿ) ಹಣ ಪಡೆದು ನೀರು ಸರಬರಾಜು ಮಾಡುತ್ತಿವೆ. ಅಟ್ಲಾಂಟ್, ಬರ್ಲಿನ್, ಕ್ಯಾಸ್‌ಬ್ಲಾಂಕ್, ಹ್ಯೂಸ್ಟನ್, ಒಂಟಾರಿಯೋ, ಸ್ಯಾನ್‌ಫ್ರಾನ್ಸಿಸ್ಕೋನಗರ ನೀರು ಸರಬರಾಜನ್ನು ಸದ್ಯ ಎಂಎನ್‌ಸಿಗಳೇ ನಿರ್ವಹಿಸುತ್ತಿರುವುದು. 2016ರ ವೇಳೆಗೆ ಎಂಎನ್‌ಸಿಗಳಿಂದ ಹಣ ಪಾವತಿಸಿ ನೀರು ಖರೀದಿಸುವ ಜನಸಂಖ್ಯೆ 115 ಕೋಟಿಗೆ ತಲುಪಲಿದೆ ಎಂದು ಸಮೀಕ್ಷೆಗಳು ಹೇಳಿವೆ. ಫ್ರಾನ್ಸ್‌ನ ವಿವೇಂದಿ, ಸೂಯೆಜ್, ಬೊಗ್ಗಿಸ್ ಕಂಪನಿಗಳು ಬ್ರಿಟನ್‌ನ ಕೆಲ್ದಾ ಮತ್ತು ಜರ್ಮನಿಯ ಆರ್‌ಡಬ್ಲ್ಯೂಇ ಕಂಪನಿಗಳು ನೀರಿನ ವಹಿವಾಟಿನಲ್ಲಿ ತೊಡಗಿಸಿಕೊಂಡಿವೆ. 2001 ರಲ್ಲಿ ಈ ಕಂಪನಿಗಳು 16,410 ಕೋಟಿ ಡಾಲರ್ ಲಾಭ ಗಳಿಸಿವೆ.

ಬೊಲಿವಿಯಾದಲ್ಲಿ ಕೊಂಚಬಾಂಬ ನೀರನ್ನು ಬೀಚ್‌ಟೆಲ್ ಕಂಪನಿ 40 ವರ್ಷಗಳ ಗುತ್ತಿಗೆ ಪಡೆಯಿತು. ಕೆಲವೇ ದಿನಗಳಲ್ಲಿ ದರಗಳನ್ನು 300 ರಷ್ಟು ಹೆಚ್ಚಿಸಿತು. ಇದರ ವಿರುದ್ಧ ಬೊಲಿವಿಯಾ ಜನತೆ ಸಮರವನ್ನೇ ಸಾರಿದರು. ಬೀಚ್‌ಟೆಲ್ ಕಂಪನಿಯನ್ನು ದೇಶದಿಂದಲೇ ಹೊರಗೊಡಿಸಿದರು.

ಭಾರತದಲ್ಲೂ ಸಹ ಸೂಯೆಜ್ ಕಂಪನಿ ದೆಹಲಿ ಸಮೀಪ ಘಟಕ ಸ್ಥಾಪಿಸಿದೆ. ತೇಹ್ರಿ ಅಣೆಕಟ್ಟಿನ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಇದರಿಂದಾಗಿ ಶಹರಾನ್‌ಪುರ, ಮೀರತ್, ಗಾಜಿಯಾಬಾದ್ ಸೇರಿದಂತೆ ಹಲವಾರು ನಗರಗಳಲ್ಲಿ ಜನ ಈಗಾಗಲೇ ಕುಡಿವ ನೀರಿನ ಕೊರತೆ ಅನುಭವಿಸುತ್ತಿದ್ದಾರೆ. ಭಾರತದಲ್ಲಿನ ಪ್ಯಾಕೇಜ್ ಕುಡಿವ ನೀರಿನ ಮಾರುಕಟ್ಟೆಯನ್ನು ನೆಸ್ಲೆ, ಕೊಕಾಕೋಲ ಮತ್ತು ಪೆಪ್ಸಿ ಕಂಪನಿಗಳು ಈಗಾಗಲೇ ಆಕ್ರಮಿಸಿದೆ. ಕೇರಳದಲ್ಲಿ ಕೋಕಾಕೋಲ ಕಂಪನಿ ಪ್ರತಿದಿನ 10 ಲಕ್ಷ ಲೀಟರ್ ನೀರನ್ನು ಪಡೆದುಕೊಳ್ಳುತ್ತಿದೆ. ಆಂಧ್ರಪ್ರದೇಶದ ಕಮ್ಮಂ, ತಮಿಳುನಾಡಿನ ಶಿವಗಂಗೈನಲ್ಲೂ ನೀರನ್ನು, ನದಿಯನ್ನು ಖರೀದಿಸಲು ಮುಂದಾಯಿತು. ಆದರೆ ಎಡಪಕ್ಷಗಳು ಮತ್ತು ಪ್ರಗತಿಪರ ಸಂಘಟನೆಗಳು ನಡೆಸಿದ ವ್ಯಾಪಕ ಪ್ರತಿಭಟನೆಗಳಿಂದ ಯೋಜನೆ ಹಿಂಪಡೆದರು. ಈಗ ಕೋಕಾಕೋಲ ತಿರುನಲ್ವೇಲಿಯ ಸೌಥ್ ಇಂಡಿಯಾ ಬಾಟ್ಲಿಂಗ್ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಕೋಕಾಕೋಲಾ ಪಾನೀಯ ಕ್ಷೇತ್ರದಲ್ಲಿ ಜಗತ್ತಿನ ಅಗ್ರಗಣ್ಯ ಕಂಪನಿಯಾಗಿದೆ. ಅಮೇರಿಕಾ ಅಧ್ಯಕ್ಷ ಚುನಾವಣೆಯಲ್ಲಿ ಜಾರ್ಜ್‌ಬುಶ್‌ಗೆ ಶೇ 80-85ರಷ್ಟು ಹಣವನ್ನು ಇದೇ ಕಂಪನಿ ನೀಡಿತ್ತು. ಚತ್ತೀಸ್‌ಘಡ ದಲ್ಲಿ ಶಿಯೋನಾಥ್ ನದಿಯನ್ನು 2002 ರಲ್ಲಿ ಖಾಸಗೀಕರಣಗೊಳಿಸಲು ಮುಂದಾದಾಗ ಎದುರಾದ ತೀವ್ರ ಪ್ರತಿಭಟನೆಗಳಿಂದಾಗಿ ಕಂಪನಿಗಳು ಅಲ್ಲಿಂದ ಕಾಲ್ತೆಗೆದವು.

– ಅಪ್ಪು

ಶರತ್‌ಚಂದ್ರ

ಮುಶರಫ್ ರಾಜೀನಾಮೆ - ಆದರೆ ಪ್ರಜಾಪ್ರಭುತ್ವಕ್ಕೆ ತೊಡಕುಗಳು ಇನ್ನೂ ಇವೆ

ಅಂತೂ ಇಂತೂ ಮುಶರಫ್ ಪಾಕಿಸ್ತಾನದ ಕೊನೆಗೂ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಈಗ ದುರ್ಬಲವಾಗಿರುವ ಅವರ ಬೆಂಬಲಿಗ ಪಕ್ಷ ಮುಸ್ಲಿಂ ಲೀಗ್ ಬಣ ರಾಜೀನಾಮೆಗೆ ನೀಡುವಂತೆ ಹೇಳಿದ್ದು ಮತ್ತು ಮೂರು ಪ್ರಾಂತೀಯ ಅಸೆಂಬ್ಲಿಗಳಲ್ಲಿ ಭಾರೀ ಬಹುಮತದಿಂದ ಅವರ ಮೇಲೆ ದೋಷಾರೋಪಣೆ ಮಂಜೂರಾದ ನಂತರ - ಮುಶರಫ್ ಗೆ ಹೆಚ್ಚಿನ ದಾರಿಗಳಿರಲಿಲ್ಲ. ಪಾಕಿಸ್ತಾನದ ಆದ್ಯಂತ ಅವರ ರಾಜೀನಾಮೆ ಕಂಡು ಬಂದ ಸಂಭ್ರಮ, ವಿಜಯೋತ್ಸವ ಆಚರಣೆ ಸಹ ಇದನ್ನೇ ತೋರಿಸಿತ್ತು. ಆಳುವ ರಂಗ ಅವರ ಮೇಲೆ ದೋಷಾರೋಪಣೆಯಲ್ಲಿ ಹಾಕಿದ ಗುರುತರ ಆಪಾದನೆಗಳು (ಕೊಲೆ, ಪಿತೂರಿ, ಕಾನೂನು ಮತ್ತು ಸಂವಿಧಾನದ ಉಲ್ಲಂಘನೆ ಇತ್ಯಾದಿ), ಅದನ್ನು ಮುಂದೊಯ್ಯುವ ಬಗ್ಗೆ ತೋರಿದ ಧೃಢತೆ ಯಾವುದೇ ಬೇರೆ ಹಾದಿ ಇನ್ನಷ್ಟು ಅಪಾಯಕರ ಎಂಬುದನ್ನು ಸ್ಪಷ್ಟ ಪಡಿಸಿತ್ತು.

ಮುಶರಫ್‌ನ ಅತ್ಯಂತ ದೊಡ್ಡ ಬೆಂಬಲಿಗ ಬುಶ್ ಮತ್ತು ಯುರೋಪಿಯನ್ ಸರ್ಕಾರಗಳು ದೋಷಾರೋಪಣೆ ಪಾಕಿಸ್ತಾನದ ಆಂತರಿಕ ವಿಷಯ ಎಂದು ಅವರ ಕೈ ಬಿಟ್ಟಿತ್ತು. ಆದರೆ ಪರದೆ ಹಿಂದೆ ಪಾಕಿಸ್ತಾನದ ಆಳುವ ರಂಗದ ಮೇಲೆ ಅದರಲ್ಲೂ ಪಿಪಿಪಿ ಜತೆ ಮಾತುಕತೆ ನಡೆಸಿದೆ. ಮುಶರಫ್ ರಾಜೀನಾಮೆ ಕೊಟ್ಟರೆ ಅವರ ಮೇಲೆ ಯಾವುದೇ ಅಪರಾಧಗಳ ವಿಚಾರಣೆ ಕೈ ಬಿಡುವ ಮತ್ತು ಶಿಕ್ಷೆ ಕೊಡದಿರುವ ಬಗ್ಗೆ ಆಶ್ವಾಸನೆ ತೆಗೆದುಕೊಂಡಿದೆ. ಅವರನ್ನು ಸೌದಿ ಅರೇಬಿಯಾದಂತಹ 'ಮಿತ್ರ' ದೇಶಗಳಿಗೆ ದೇಶಾಂತರ ಕಳಿಸುವ ಅಥವಾ ದೇಶದಲ್ಲೇ ಯಾವುದೇ ನಿರ್ಬಂಧ ಇಲ್ಲದೆ ಉಳಿಯುವ ಬಗ್ಗೆ ಸಹ ಗುಪ್ತ ಒಪ್ಪಂದ ಆಗಿದೆ ಎನ್ನಲಾಗಿದೆ. 1999 ರ ಮಿಲಿಟರಿ ಕ್ಷಿಪ್ರಕ್ರಾಂತಿಯಿಂದ



ಹಿಡಿದು ಮುಶರಫ್‌ರ ಎಲ್ಲಾ ಅಪರಾಧಗಳಲ್ಲಿ ಭಾಗಿಯಾಗಿದ್ದ ಪ್ರಮುಖ ಬೆಂಬಲಿಗನಾಗಿದ್ದ ಅಮೆರಿಕನ್ ಸರ್ಕಾರಕ್ಕೆ ಇದು ಬಹಳ ಪ್ರಮುಖ ಕಾಳಜಿ. ಮುಶರಫ್‌ರನ್ನು ವಿಚಾರಣೆಯಿಲ್ಲದೆ ಖುಲಾಸೆ ಮಾಡಬೇಕೆ? ಅಥವಾ ಪ್ರಜಾಪ್ರಭುತ್ವದ ಕತ್ತು ಹಿಸುಕ ಬಯಸುವ ಯಾರಾದರೂ ನಡುಗುವಂತೆ ಮಾಡುವ ವಿಚಾರಣೆ ಮತ್ತು ಶಿಕ್ಷೆ ಕೊಡಬೇಕೆ? ಎಂದು ಪಾಕಿಸ್ತಾನದ ಪ್ರಜಾಪ್ರಭುತ್ವ ಚಳುವಳಿ ನಿರ್ಧರಿಸಬೇಕಿದೆ.

ಒಂಬತ್ತು ವರ್ಷಗಳ ಕಾಲ ಹೆಚ್ಚು ಕಡಿಮೆ ಸರ್ವಾಧಿಕಾರಿಯಾಗಿ ಆಳಿದ ಮುಶರಫ್ ರಾಜೀನಾಮೆ ಕೊಡುವಂತೆ ಮಾಡಿದ್ದು ಪಾಕಿಸ್ತಾನದ ಪ್ರಜಾಪ್ರಭುತ್ವ ಚಳುವಳಿಯ ದೊಡ್ಡ ಸಾಧನೆ ಎನ್ನಬೇಕು. ಪ್ರಜಾಪ್ರಭುತ್ವ ಚಳುವಳಿಯ ಪ್ರಬಲ ಒತ್ತಡ ಇಲ್ಲದಿದ್ದರೆ, ಅಧ್ಯಕ್ಷೀಯ ಅಧಿಕಾರ ಉಪಯೋಗಿಸಿ ಚುನಾಯಿತ ಸರ್ಕಾರ ವಜಾ ಮಾಡುವ ಅಥವಾ ಮಿಲಿಟರಿ ಕ್ಷಿಪ್ರಕ್ರಾಂತಿ ನಡೆಸುವ ದಾರಿ ಹಿಡಿಯಲು ಮುಶರಫ್ ಏನೂ ಮುಲಾಜು ಮಾಡುತ್ತಿರಲಿಲ್ಲ. ಅವರು ಈ ಹಿಂದೆ ಇವೆಲ್ಲವನ್ನೂ ಮಾಡಿ ನಿಭಾಯಿಸಿದವರು. ಒಂಬತ್ತು ವರ್ಷಗಳ ಕಾಲ ಪ್ರಜಾಪ್ರಭುತ್ವ ಅಲೆಯನ್ನು ದುರ್ಬಲಗೊಳಿಸಲು, ಹಿಂದಕ್ಕೆ ತಳ್ಳಲು ಪ್ರಯತ್ನಿಸಿದ್ದು ಮುಶರಫ್ ಅವರ 'ಸಾಧನೆ'. ಕನಿಷ್ಟ ಪಾಕಿಸ್ತಾನದ ಆಳುವ ವರ್ಗದ ಆಕ್ರಾಮಕ ವಿಭಾಗ ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿಯ ದೃಷ್ಟಿಯಿಂದ.

ಮುಶರಫ್‌ರನ್ನು ಅಧಿಕಾರದಿಂದ ಇಳಿಸಲು ಐಕ್ಯತೆ ಮತ್ತು ಧೃಢತೆ ತೋರಿದ ಆಳುವ ರಂಗ, ಆ ಮೇಲಿನ ಪರಿಸ್ಥಿತಿ ನಿಭಾಯಿಸುವಲ್ಲಿ ಅದನ್ನು ತೋರಿಸಿಲ್ಲ. ಹೊಸ ಅಧ್ಯಕ್ಷರ ಆಯ್ಕೆಯಲ್ಲಿ ತೀವ್ರ ಭಿನ್ನಾಭಿಪ್ರಾಯ ತೋರಿದೆ. ಪಿಪಿಪಿ ಬೆನಜಿರ್ ಪತಿ ಜರ್ದಾರಿ ಅವರನ್ನು ಅಭ್ಯರ್ಥಿ ಆಗಿ ಸೂಚಿಸಿದೆ. ಮುಸ್ಲಿಂ ಲೀಗ್ ನಾಯಕ ನವಾಜ್ ಶರೀಫ್ ಬಲೂಚಿಸ್ತಾನ ಅಥವಾ ಗಡಿ ಪ್ರಾಂತ್ಯದಂತಹ ಸಣ್ಣ ಪ್ರಾಂತ್ಯಗಳ ಅಭ್ಯರ್ಥಿಯನ್ನು ಅಧ್ಯಕ್ಷ ಮಾಡುವುದು ಒಳ್ಳೆಯದು ಎಂದು ಹೇಳುವ ಮೂಲಕ ಜರ್ದಾರಿ ಅವರ ಹೆಸರಿಗೆ ವಿರೋಧ ಸೂಚಿಸಿದ್ದಾರೆ. ಮುಶರಫ್ ವಜಾ ಮಾಡಿದ ಸುಪ್ರೀಂ ಕೋರ್ಟು ನ್ಯಾಯಾಧೀಶರ ಮರು ನೇಮಕಾತಿಯಲ್ಲೂ ಭಿನ್ನಾಭಿಪ್ರಾಯ ಮೂಡಿದೆ. ಶರೀಫ್ ಈ ಬಗ್ಗೆ ಪಟ್ಟು ಹಿಡಿದಿದ್ದು, ಪಿಪಿಪಿ ಈ ಬಗ್ಗೆ ಅಷ್ಟು ಆಸಕ್ತಿ ತೋರಿಸಿಲ್ಲ. ಶರೀಫ್ ಇದಕ್ಕೆ ಹಲವು ಗಡುವು ಕೊಟ್ಟಿದ್ದು, ಸರ್ಕಾರದಿಂದ ಹೊರಗೆ ಬರುವ ಬೆದರಿಕೆ ಸಹ ಹಾಕಿದ್ದಾರೆ.

ಈ ನಡುವೆ ಪಾಕಿಸ್ತಾನದ ಹಲವು ಕಡೆ ಭಯೋತಾದ್ವಕ ಸ್ಫೋಟಗಳು ಆಗಿವೆ. ತಾಲಿಬಾನ್ ಮೂಲಭೂತವಾದಿಗಳು ರಾಜಕೀಯವಾಗಿ ಬಲಗೊಳ್ಳುತ್ತಿದ್ದು ಸರ್ಕಾರಕ್ಕೆ ತೀವ್ರ ಸವಾಲು ಒಡ್ಡುತ್ತಿದ್ದಾರೆ. ಸರ್ವಾಧಿಕಾರಕ್ಕೆ ಬದಲಿ ಅರಾಜಕತೆ ಎಂದು ತೋರಿಸುವ ಪ್ರಯತ್ನ ನಡೆದಿದೆ. ಇದರಲ್ಲಿ ತಾಲಿಬಾನ್, ಐ.ಎಸ್.ಐ., ಮಿಲಿಟರಿ, ಆಳುವ ವರ್ಗದ ಕೆಲವು ವಿಭಾಗಗಳು ಮತ್ತು ಸಿ.ಐ.ಎ. ಪರಸ್ಪರ ಸಹಕರಿಸುತ್ತಿದ್ದರೆ ಏನೂ ಆಶ್ಚರ್ಯವಿಲ್ಲ. ಇವರೆಲ್ಲರೂ ಪಾಕಿಸ್ತಾನದ ಬಲಗೊಳ್ಳುತ್ತಿರುವ ಪ್ರಜಾಪ್ರಭುತ್ವದಿಂದ ಭೀತರಾಗಿದ್ದಾರೆ. ಇದು ಪಾಕಿಸ್ತಾನದ ಪ್ರಜಾಪ್ರಭುತ್ವಕ್ಕೆ ತೀವ್ರ ಸವಾಲು ಆಗಿದೆ. ○

ವೆನೆಜುವೆಲಾ ಬ್ಯಾಂಕ್ ರಾಷ್ಟ್ರೀಕರಣ

ಚವೇಜ್ ವೆನೆಜುವೆಲಾದ ಆರ್ಥಿಕ-ಸಾಮಾಜಿಕ ಬೆಳವಣಿಗೆಗೆ ಅಗತ್ಯವಾಗಿರುವ ಸಂಸ್ಥೆಗಳನ್ನು ಸಾರ್ವಜನಿಕ ಒಡೆತನ ಮತ್ತು ಜವಾಬ್ದಾರಿಗೆ ಒಳಪಡಿಸುವ ತಮ್ಮ ಘೋಷಿತ ನೀತಿಯ ಜಾರಿಯನ್ನು ಭರದಿಂದ ಮುಂದುವರೆಸಿದ್ದಾರೆ. ಇತ್ತೀಚೆಗೆ ಅವರು ದೇಶದ ಪ್ರಮುಖ ಬ್ಯಾಂಕ್ ಆದ 'ಬ್ಯಾಂಕ್ ಆಫ್ ವೆನೆಜುವೆಲಾ'ವನ್ನು ಸಾರ್ವಜನಿಕ ಒಡೆತನಕ್ಕೆ ಒಳಪಡಿಸುವ ಕ್ರಮ ತೆಗೆದುಕೊಂಡಿದ್ದಾರೆ. 'ಗ್ರುಪೊ ಸಾಂತಂದರ್' ಎಂಬ ಸ್ಪಾನಿಷ್ ಕಂಪನಿಯ ಒಡೆತನದಲ್ಲಿರುವ 'ಬ್ಯಾಂಕ್ ಆಫ್ ವೆನೆಜುವೆಲಾ'ವನ್ನು ವೆನೆಜುವೆಲಾದ ಖಾಸಗಿ ಹಣಕಾಸು ಕಂಪನಿಯೊಂದಕ್ಕೆ ಮಾರಲು ಸರ್ಕಾರದ ಅನುಮತಿ ಕೇಳಿತ್ತು. ಅನುಮತಿಯನ್ನು ನಿರಾಕರಿಸಿ, ಬ್ಯಾಂಕ್‌ನ್ನು ಸರ್ಕಾರಕ್ಕೆ ಮಾರುವಂತೆ ಚವೇಜ್ ಸರ್ಕಾರ ಸೂಚಿಸಿದೆ. 1996 ರಲ್ಲಿ ಸ್ಪಾನಿಷ್ 'ಗ್ರುಪೊ ಸಾಂತಂದರ್' ಕೈಗೆ ಹೋದ 'ಬ್ಯಾಂಕ್ ಆಫ್ ವೆನೆಜುವೆಲಾ' ಲ್ಯಾಟಿನ್ ಅಮೆರಿಕದ ಮೂರನೇ ಅತಿ ದೊಡ್ಡ ಬ್ಯಾಂಕ್ ಆಗಿದೆ.

ಚವೇಜ್ ಅವರಿಗೆ ಕೊಡಲಾದ ವಿಶೇಷ ಅಧಿಕಾರ ಬಳಸಿ 26 ಹೊಸ ಕಾನೂನುಗಳನ್ನು 'ಸುಗ್ರೀವಾಜ್ಞೆ' ಮೂಲಕ ಜಾರಿಗೆ ತಂದಿದ್ದಾರೆ. ಇದು ನಾಗರಿಕರ ಜೀವನ ಮಟ್ಟ ಉತ್ತಮಗೊಳಿಸಲು ಅಗತ್ಯ ಕ್ರಮ. ಆ ಉದ್ದೇಶದಿಂದ ಹಲವು ಆರ್ಥಿಕ ಕ್ಷೇತ್ರದ (ತೈಲ, 'ಆಯಕಟ್ಟಿನ' ಮತ್ತು ಪ್ರಮುಖ ಸಾಮಾಜಿಕ ಸಂಸ್ಥೆಗಳನ್ನು ಅಗತ್ಯ ಸರ್ಕಾರಿ ನಿರ್ವಹಣೆಗೆ ಒಳಪಡಿಸುವ ಬದಲಾವಣೆಗಳನ್ನು ಈ ಕಾನೂನುಗಳ ಮೂಲಕ ತರಲಾಗುವುದು.

ಈ ಕಾನೂನುಗಳು ಬ್ಯಾಂಕುಗಳು, ಕೃಷಿ, ಸಾಮಾಜಿಕ ಭದ್ರತೆ ವ್ಯವಸ್ಥೆ, ಸಾರ್ವಜನಿಕ ಆಡಳಿತ, ಸೈನ್ಯ ಮತ್ತು ಪ್ರವಾಸಿ ಉದ್ಯಮಗಳಲ್ಲಿ ಮೂಲಭೂತ ಸುಧಾರಣೆಗಳನ್ನು ತರುವ ಉದ್ದೇಶ ಹೊಂದಿವೆ. ದೇಶವನ್ನು ಗುತ್ತೇದಾರಿ ಗುಂಪುಗಳ ಕಬಂಧ ಬಾಹುಗಳಿಂದ ವಿಮೋಚನೆ ಮಾಡಿ, ಜನತೆಯ ಸಾರ್ವಭೌಮತ್ವ ಸ್ಥಾಪಿಸುವ 'ಕ್ರಾಂತಿ'ಯತ್ತ ಇವು ಅಗತ್ಯ ಕ್ರಮಗಳು. ಇದಕ್ಕೆ ಜನ ಬೆಂಬಲ ಮತ್ತು ಸಮ್ಮತಿ ಇದೆ. ಇದನ್ನು ವಿರೋಧಿಸುವ ಶಕ್ತಿಗಳಿಗೆ ಜನ ಬೆಂಬಲದಿಂದ ತಕ್ಕ ರಾಜಕೀಯ ಉತ್ತರ ಕೊಡಲಾಗುವುದು ಎಂದು ಚವೇಜ್ ಹೇಳಿದ್ದಾರೆ.

ಕಳೆದ ವರ್ಷದ ಜನಮತ ಸಂಗ್ರಹದಲ್ಲಿ ಅಲ್ಪಮತದಲ್ಲಿ ಸೋತ ಸಂವಿಧಾನ ಸುಧಾರಣಾ ಕ್ರಮಗಳನ್ನೇ ಕಾನೂನುಗಳಾಗಿ ಅಧ್ಯಕ್ಷೀಯ ಸುಗ್ರೀವಾಜ್ಞೆ ಬಳಸಿ ತರಲಾಗಿದೆ. ಇದು ಸರ್ವಾಧಿಕಾರಿ ಕ್ರಮ. ಇದಕ್ಕೆ ಜನ ಸಮ್ಮತಿ ಇಲ್ಲ ಎಂದು ವಿರೋಧ ಪಕ್ಷಗಳು ಟೀಕಿಸಿವೆ. ಈ ಕ್ರಮದ ವಿರುದ್ಧ ಚಳುವಳಿಗೆ ಕರೆ ಕೊಟ್ಟಿವೆ. ಈ ಸುಧಾರಣಾ ಕ್ರಮಗಳು ಈಗಿನ ಸಂವಿಧಾನದ ಪ್ರಕಾರ ಅಗತ್ಯ - ಪಾರ್ಲಿಮೆಂಟರಿ ಸಮಿತಿಯಲ್ಲಿ ಚರ್ಚೆ, ಸಾರ್ವಜನಿಕ ಚರ್ಚೆ, ಸುಪ್ರೀಂ ಕೋರ್ಟು ಪರಿಶಿಲನೆ ಇತ್ಯಾದಿ - ಎಲ್ಲಾ ಕ್ರಮಗಳ ನಂತರ ಆಖೈರುಗೊಳಿಸಲಾಗಿದೆ ಎಂಬುದು ಚವೇಜ್ ಸರ್ಕಾರದ ಉತ್ತರ.

ವೆನೆಜುವೆಲಾ ಇನ್ನೊಂದು ಪ್ರಮುಖ ಮತ್ತು ಮಹತ್ವದ ಬದಲಾವಣೆಗಳ ಅಲೆಯ ಹೊಸ್ತಿಲಲ್ಲಿ ನಿಂತಿದೆ. ಅದು ಆ ದೇಶದಲ್ಲಿ ಸಾಕಷ್ಟು ಸಾರ್ವಜನಿಕ ಚರ್ಚೆ, ರಾಜಕೀಯ-ಸಾಮಾಜಿಕ ಮಜ್ಜನ- ತಳಮಳ- ಸಂಘರ್ಷ ಉಂಟು ಮಾಡಲಿದೆ. ಆ ಪ್ರಕ್ರಿಯೆ ಮತ್ತು ಅದರ ಫಲಿತಾಂಶ ಇಡೀ ಜಗತ್ತಿಗೆ ಮಹತ್ವ ಹೊಂದಿದೆ. ಅದರ ಬೆಳವಣಿಗೆಯ ದಿಕ್ಕನ್ನು ನಿರ್ಧರಿಸಲಿದೆ ಎಂಬುದು ಖಚಿತ. ○

ಬಿಜೆಪಿಯಿಂದ ಪ್ರಜಾಪ್ರಭುತ್ವಕ್ಕೆ ಕುತ್ತು

ಪುಟ 5 ರಿಂದ

ಸಂಗ್ರಹಿಸಲಾಗಿದ್ದ ಅದಿರನ್ನು ಬಲವಂತದಿಂದ ವಶಪಡಿಸಿಕೊಂಡು ಅದನ್ನು ತೀರಾ ಕಡಿಮೆ ಮೊತ್ತಕ್ಕೆ ಹರಾಜು ಹಾಕಿದೆ. ಹೀಗೆ ದೌರ್ಜನ್ಯದಿಂದ ಮಾಡಿದ ಹರಾಜಿನ ಲಾಭ ದೊಡ್ಡ ಗಣಿಗಾರರಿಗೇ ಸಿಗುವಂತಾಗಿದೆ. ಸರ್ಕಾರದ ಈ ಅನ್ಯಾಯದ ಕ್ರಮದ ವಿರುದ್ಧ ಅಲ್ಲಿಯ ರೈತರು ಹೋರಾಟವನ್ನು ಆರಂಭಿಸಿದ್ದಾರೆ.

ಕೋಮುವಾದಿ ಶಕ್ತಿಗಳಿಗೆ ಕುಮ್ಮಕ್ಕು:-

ಈ ನಡುವೆ ಬೆಂಗಳೂರು ಮಹಾನಗರದಲ್ಲಿ ಸಂಭವಿಸಿದ ಸರಣಿ ಬಾಂಬ್ ಸ್ಫೋಟದಿಂದಾಗಿ ನಗರವಾಸಿಗಳು ತೀವ್ರ ಆತಂಕಕ್ಕೆ ಒಳಗಾಗುವಂತಾಯಿತು. ಒಬ್ಬ ಮಹಿಳೆಯನ್ನು ಬಲಿತೆಗೆದುಕೊಂಡ ಈ ಸ್ಫೋಟಗಳ ಉದ್ದೇಶ ನಗರದಲ್ಲಿ ಶಾಂತಿಯನ್ನು ಕದಡುವುದೇ ಆಗಿತ್ತು ಎನ್ನುವುದರಲ್ಲಿ ಸಂಶಯವಿಲ್ಲ. ಎಲ್ಲ ಸಂಘ ಸಂಸ್ಥೆಗಳು ಈ ಪ್ರಯತ್ನವನ್ನು ಬಲವಾಗಿ ಖಂಡಿಸಿದವು. ಆದರೆ ಸ್ವತಃ ಮುಖ್ಯಮಂತ್ರಿ ಯಡಿಯೂರಪ್ಪ- ತಮ್ಮ ಯಶಸ್ವಿ ಆಡಳಿತವನ್ನು ಸಹಿಸದವರ ಫಿತೂರಿ ಇದು - ಎಂದು ಹೇಳಿಕೆ ನೀಡುವ ಮೂಲಕ ಘಟನೆಗೆ ರಾಜಕೀಯ ಬಣ್ಣ ನೀಡಲು ಯತ್ನಿಸಿದರು. ಬಿಜೆಪಿ ನಾಯಕರು ಪ್ರಚೋದನಕಾರಿ ಹೇಳಿಕೆಗಳನ್ನು ನೀಡಿದರು. ಇದು ಸಾರ್ವಜನಿಕರ ಖಂಡನೆಗೆ ಗುರಿಯಾಯಿತು. ಬಿಜೆಪಿ ಮಾತ್ರ ಪೋಟಾ ಕಾಯ್ದೆ ಮನಃ ಜಾರಿಗೆ ತರಲು ಒತ್ತಾಯಿಸುತ್ತಾ ಕೋಕಾ ಜಾರಿಗೆತರಲು ಆಲೋಚನೆ ಮಾಡುತ್ತಿದೆ. ಇಂತಹ ಕಾನೂನುಗಳನ್ನು ಬಿಜೆಪಿ ದುರುಪಯೋಗ ಪಡಿಸಿಕೊಳ್ಳುವ ಅಪಾಯ ಇರುವುದರಿಂದ ರಾಜ್ಯ ಸರ್ಕಾರದ ಈ ಕ್ರಮವನ್ನು ಬಲವಾಗಿ ವಿರೋಧಿಸಬೇಕಾಗಿದೆ.

ಈ ಅವಧಿಯಲ್ಲಿ ಕೋಮುವಾದಿ ಸಂಘಪರಿವಾರದ ಶಕ್ತಿಗಳು ಹೆಚ್ಚೆಚ್ಚು ಕ್ರಿಯಾಶೀಲವಾಗಿ ಕೋಮು ದ್ವೇಷವನ್ನು ಹರಡುತ್ತಿದ್ದುದು ಮತ್ತು ಸರ್ಕಾರ ಅವುಗಳಿಗೆ ಕುಮ್ಮಕ್ಕು ನೀಡುತ್ತಿರುವುದು ಆತಂಕದ ಬೆಳವಣಿಗೆಯಾಗಿದೆ.

ರಾಜ್ಯಾದ್ಯಂತ ಬಹಳಷ್ಟು ಕೋಲಾಹಲ ಎಬ್ಬಿಸಿದ್ದ ಆದಿ ಉಡುಪಿ ಬೆತ್ತಲೆ ಪ್ರಕರಣ' ದ ವಿಚಾರಣೆ ಉಡುಪಿ ತ್ವರಿತ ನ್ಯಾಯಾಲಯದಲ್ಲಿ ಅಂತಿಮಗೊಂಡು ಎಲ್ಲ 12 ಆರೋಪಿಗಳನ್ನು ಸಾಕ್ಷ್ಯಾಧಾರಗಳ ಕೊರತೆಯಿಂದ ಖುಲಾಸೆಗೊಳಿಸಿ ತೀರ್ಪು ನೀಡಿದೆ. ಪೋಲಿಸರು, ಸಿಓಡಿ ಅಧಿಕಾರಿಗಳು, ಪಬ್ಲಿಕ್ ಪ್ರಾಸಿಕ್ಯೂಟರ್ ಎಲ್ಲರೂ ಶಾಮೀಲಾಗಿ ಆರೋಪಿಗಳನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ. ಹಿಂದೂ ಯು ಸೇನೆಯವರು ಅಂದು ಉಡುಪಿಯಲ್ಲಿ ಮೆರವಣಿಗೆ ಮಾಡಿ, ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದ್ದಾರೆ. ಹಿಂದೂ ಯುವಸೇನೆಯ ಜಿಲ್ಲಾ ಕಾರ್ಯದರ್ಶಿ ಮಾತನಾಡಿ 'ಗೋಹತ್ಯೆ ಮುಂದುವರೆದರೆ ಗಲ್ಲಿ ಗಲ್ಲಿಗಳಲ್ಲಿ ಬೆತ್ತಲೆ ಪ್ರಕರಣಗಳು ನಡೆಯಲಿವೆ' ಎಂದು ಬೆದರಿಕೆ ಹಾಕಿದ್ದಾರೆ. ಪ್ರಕರಣದ ಮರುತನಿಕೆ, ಮರು ವಿಚಾರಣೆ ಆಗಬೇಕೆಂಬ ಒತ್ತಾಯಕ್ಕೆ ದೊರೆಯಬೇಕಾದಷ್ಟು ಸಾರ್ವಜನಿಕ ಬೆಂಬಲ ದೊರೆಯಲಿಲ್ಲ.

ರಾಜ್ಯ ಹೈಕೋರ್ಟಿನ ದ್ವಿಸದಸ್ಯ ಪೀಠ, ಇತ್ತೀಚೆಗೆ ಬಾಬಾಬುಡನ್‌ಗಿರಿ ವಿವಾದದ ಕುರಿತು ಏಕ ಸದಸ್ಯ ಪೀಠದ ಆದೇಶವನ್ನು ಎತ್ತಿ ಹಿಡಿದು ತೀರ್ಪು ನೀಡಿದೆ. ಇದರಿಂದಾಗಿ ಬಾಬಾ ಬುಡನ್‌ಗಿರಿಯ ಸಮಸ್ಯೆ ಮತ್ತೆ ಉಲ್ಬಣಗೊಳ್ಳುವಂತಾಗಿದೆ. ಇಲ್ಲಿ ವೈದಿಕ ಆಚರಣೆ ನಡೆಸುವ ಕುರಿತಾದ ಗೊಂದಲ ಮುಂದುವರೆಯುವಂತಾಗಿ ಹಿಂದುತ್ವ ಸಂಘಟನೆಗಳು ಇದರ ದುರಪಯೋಗ ಮಾಡಿಕೊಳ್ಳುವ ಅಪಾಯ ಉಂಟಾಗಿದೆ. ಇದಕ್ಕೆ ರಾಜ್ಯ ಸರ್ಕಾರವೇ ಹೊಣೆ ಆಗಿದೆ, ಈ ಕುರಿತು ಸುಪ್ರೀಂ ಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಲು ಸರ್ಕಾರ ಹಿಂದೇಟು ಹಾಕುವ ಸಾಧ್ಯತೆಯೇ ಹೆಚ್ಚು,

ಬಹಳಷ್ಟು ಆದಾಯ ಬರುತ್ತಿರುವ ಗೋಕರ್ಣದ ಮಹಾಬಲೇಶ್ವರ ದೇವಸ್ಥಾನವನ್ನು ನಿಯಮಗಳನ್ನು ಗಾಳಿಗೆ ತೂರಿ, ರಾಮಚಂದ್ರಾಪುರ ಮಠಕ್ಕೆ ಹಸ್ತಾಂತರ ಮಾಡುವ ಸರ್ಕಾರದ ನಿರ್ಧಾರದ ಹಿಂದೆ ಆರ್.ಎಸ್.ಎಸ್. ಪಾತ್ರ ಪ್ರಮುಖವಾಗಿದೆ. ಸ್ಥಳೀಯ ಜನತೆಯ ಪ್ರತಿರೋಧವನ್ನು ಕಡೆಗಣಿಸಿ ಸಾರ್ವಜನಿಕ ಸೊತ್ತುಗಳನ್ನು ಖಾಸಗಿ ಸಂಸ್ಥೆಗಳಿಗೆ ನೀಡುವುದು ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಿರುವುದರಿಂದ ಮಾತ್ರ ಸಾಧ್ಯವಾಗಿದೆ.

ಬೆಂಗಳೂರು ಮಹಾನಗರದ ಹೆಬ್ಬಾಳ ಮತ್ತು ಜೆ.ಸಿ.ನಗರದ ಮಸೀದಿಗಳ ಆವರಣದಲ್ಲಿ ಹಂದಿಯ ರುಂಡ ಹಾಕಿದ ಮೂವರು ಶ್ರೀರಾಮ ಸೇನೆ ಕಾರ್ಯಕರ್ತರನ್ನು ಪೋಲಿಸರು ಬಂಧಿಸಿದ್ದಾರೆ. ಪ್ರಕರಣದಿಂದಾಗಿ ಪರಿಸ್ಥಿತಿ ಉದ್ವಿಗ್ನಗೊಂಡು ಕಲ್ಲು ತೂರಾಟ ನಡೆದಿತ್ತು. ಪರಿಸ್ಥಿತಿಯನ್ನು ನಿಯಂತ್ರಿಸಲು ಪೋಲಿಸರು ಲಾಠಿ ಪ್ರಹಾರ ಮತ್ತು ಗಾಳಿಯಲ್ಲಿ ಗುಂಡು ಹಾರಿಸಿದ್ದರು.

ದರ್ಗಾ ಸಂಸತಿಯ ಹಸಿರು ಧ್ವಜವನ್ನು ಪಾಕಿಸ್ತಾನದ ಧ್ವಜವೆಂದು ಸುಳ್ಳು ವದಂತಿ ಹಬ್ಬಿಸಿ ಸಂಘಪರಿವಾರ ದುಷ್ಕರ್ಮಿಗಳು ಸಕಲೇಶಪುರದ ಮಸೀದಿಗೆ ನುಗ್ಗಿ ಅಲ್ಲಿದ್ದ ಧಾರ್ಮಿಕ ಗ್ರಂಥಗಳನ್ನು ಹೊರಗೆಸೆದಿದ್ದಾರೆ. ದಾಂಧಲೆ ಮಾಡಿದ್ದಾರೆಂದು ಆರೋಪಿಸಿ ಅಲ್ಪಸಂಖ್ಯಾತರ ವಿರುದ್ಧವೇ ಪೋಲಿಸರು ಪ್ರಕರಣ ದಾಖಲು ಮಾಡಿದ್ದಾರೆಯೇ ಹೊರತು ಮಸೀದಿಗೆ ನುಗ್ಗಿ ದಾಂಧಲೆ ಮಾಡಿದವರ ವಿರುದ್ಧ ಕ್ರಮ ಜರಗಿಸಲಿಲ್ಲ ಕೆಲದಿನಗಳ ಹಿಂದೆ ತುಮಕೂರಿನಲ್ಲಿಯೂ ಇಂತಹ ಘಟನೆಯೊಂದು ನಡೆದಿತ್ತು.

ಹಿಂದೂ ಸೇನೆಯಲ್ಲಿ 1130 ಆತ್ಮಹತ್ಯಾ ದಾಳಿಕೋರರು ಇದ್ದಾರೆ ಎಂದು ಪ್ರಮೋದ್ ಮುತಾಲಿಕ್ ಬಹಿರಂಗವಾಗಿ ಹೇಳಿದ್ದಾರೆ. ? ಇನ್ನೇನಿದ್ದರೂ ಹತ್ಯೆ ಪರ್ವ? ಎಂದು ಬೆದರಿಕೆ ಹಾಕಿದ್ದಾರೆ. ಇವೆಲ್ಲದರ ಹಿಂದೆ ಬಿಜೆಪಿ ಸರ್ಕಾರದ ಕುಮ್ಮಕ್ಕೂ ಎದ್ದು ಕಾಣುತ್ತದೆ.

ಕಾರ್ಮಿಕ ಮಂತ್ರಿ ಬಚ್ಚೇಗೌಡ ಸರ್ಕಾರಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ'ನನಗೆ ಮತ ಹಾಕದವರಿಗೆ ತಕ್ಕ ಪಾಠ ಕಲಿಸುತ್ತೇನೆ. ಮುಸಲ್ಮಾನರು ನನ್ನನ್ನು ವಂಚಿಸಿದ್ದಾರೆ' ಇತ್ಯಾದಿ ಮಾತುಗಳನ್ನು ಆಡುವ ಮೂಲಕ ಜನತೆಯಲ್ಲಿ ಕೋಮುವಾರು ವಿಭಜನೆಗೆ ಪ್ರಚೋದನೆ ನೀಡಿದ್ದಾರೆ. ಈ ಎಲ್ಲ ಬೆಳವಣಿಗೆಗಳ ಹಿನ್ನಲೆಯಲ್ಲಿ, ದುಡಿಯುವ ಜನರನ್ನು ವರ್ಗ ಆವಶ್ಯಕತೆ ಆಧಾರದಲ್ಲಿ ಸಂಘಟಿಸಿ ಅಣಿನೆರಸುವ ನಮ್ಮ ಹೊಣೆಗಾರಿಕೆ ಹೆಚ್ಚಾಗುತ್ತದೆ.

ಮೂರನೇ ಪರ್ಯಾಯದ ಸಾಧ್ಯತೆ:

ಬಿಜೆಪಿಯ ಆಕ್ರಮಣಕಾರಿ ಕಾರ್ಯಾಚರಣೆಯಿಂದಾಗಿ ಪ್ರಮುಖ ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿ(ಎಸ್) ಕಂಗಾಲಾಗಿವೆ. ಪಕ್ಷಾಂತರಿಗಳ ವಿರುದ್ಧ ಕಾಂಗ್ರೆಸ್ ಪ್ರತಿಭಟನೆಗಳನ್ನು ಸಂಘಟಿಸುತ್ತಿದ್ದರೂ, ಕೇಂದ್ರದಲ್ಲಿ ಬಹುಮತಕ್ಕಾಗಿ ಇದೇ ನೀತಿಯನ್ನು ಅನುಸರಿಸಿದ ಕಾಂಗ್ರೆಸಿಗೆ ಬಿಜೆಪಿಯನ್ನು ಆ ವಿಷಯದಲ್ಲಿ ಎದುರಿಸಲು ನೈತಿಕ ಬಲ ಇಲ್ಲದಂತಾಗಿದೆ. ಬಿಜೆಪಿಯ ಕೋಮುವಾದವನ್ನೂ ದೃಢತೆಯಿಂದ ಎದುರಿಸಲು ಅದಕ್ಕೆ ಸಾಧ್ಯವಾಗುತ್ತಿಲ್ಲ.

ಜೆಡಿ(ಎಸ್) ಅತಿ ಹೆಚ್ಚು ಹಾನಿಗೆ ಒಳಗಾಗಿದೆ. ಅದು ಸಹ ಪಕ್ಷಾಂತರದ ವಿರುದ್ಧ ಪ್ರತಿಭಟನೆಗೆ ಮುಂದಾಗುತ್ತಿದೆ. ಪಕ್ಷವನ್ನು ಕೆಳಮಟ್ಟದಿಂದ ಮನಃ ಕಟ್ಟುವ ಕೆಲಸಕ್ಕೆ ಹೊರಡಲಾಗುತ್ತಿದೆ. ಮಾಜಿ ಮುಖ್ಯಮಂತ್ರಿ.ಕುಮಾರಸ್ವಾಮಿ ರಾಜ್ಯಾದ್ಯಂತ ಪಾದಯಾತ್ರೆ ನಡೆಸಲು ಸಿದ್ಧತೆ ನಡೆಸಿದ್ದಾರೆ.

ಈ ನಡುವೆ ವಿಧಾನ ಪರಿಷತ್ ಸಭಾಪತಿ ಆಯ್ಕೆಯ ವಿಷಯದಲ್ಲಿ ಕಾಂಗ್ರೆಸ್-ಜೆಡಿ(ಎಸ್) ಹೊಂದಾಣಿಕೆ ಮಾಡಿಕೊಂಡು ಕಾಂಗ್ರೆಸ್‌ನ ಮತ್ತಿಕಟ್ಟಿ ಅವಿರೋಧವಾಗಿ ಆಯ್ಕೆಯಾಗುವಂತಾಗಿದೆ. ಮುಂದೆ ಬರುವ ಚುನಾವಣೆಗಳಲ್ಲಿಯೂ ಹೊಂದಾಣಿಕೆ ಮಾಡಿಕೊಳ್ಳುವ ಪ್ರಸ್ತಾವ ಈ ಎರಡು ಪಕ್ಷಗಳ ನಡುವೆ ಚರ್ಚೆಯಾಗುತ್ತಿದೆ. ಆದರೆ ಬಿಜೆಪಿಯ ಮುನ್ನಡೆಯನ್ನು ತಡೆಯಲು, ಸರಿಯಾದ ದಾರಿ ಯಾವುದು ಎನ್ನುವುದನ್ನು ಜೆಡಿ(ಎಸ್) ಅರ್ಥ ಮಾಡಿಕೊಳ್ಳುವುದು ಅಗತ್ಯವಾಗಿದೆ. ರಾಜ್ಯದಲ್ಲಿ ಬಿಜೆಪಿಯನ್ನು ಮತ್ತು ಕಾಂಗ್ರೆಸನ್ನೂ ದೂರವಿಟ್ಟು ಮೂರನೇ ಪರ್ಯಾಯವನ್ನು ಕಟ್ಟಿ ಬೆಳಸಲು ಸಾಕಷ್ಟು ಅವಕಾಶ ಇದೆ ಎಂಬುದನ್ನು ಯಾರು ಕಡೆಗಣಿಸಬಾರದು. ಕಾಂಗ್ರೆಸ್ ವಿರೋಧದ ಅತೃಪ್ತಿಯ ಲಾಭಾ ಬಿಜೆಪಿಗೆ ದೊರೆಯದಂತೆ ಮಾಡಬೇಕಾದರೆ, ಕಾಂಗ್ರೆಸ್ ವಿರೋದಿ ಮತಗಳು ಕ್ರೋಢೀಕರಣಗೊಳ್ಳುವುದನ್ನು ತಡೆಯಬೇಕಾದರೆ, ಮೂರನೇ ಪರ್ಯಾಯವನ್ನು ತುರ್ತಾಗಿ, ಸ್ಪಷ್ಟವಾಗಿ ಜನತೆಯಮುಂದೆ ಇಡಬೇಕಾಗಿದೆ. ಈ ದಿಸೆಯಲ್ಲಿ, ರಾಜ್ಯದ ಎಡ ಶಕ್ತಿಗಳಲಿ ಎಷ್ಟೇ ಬಲಹೀನವಾಗಿದ್ದರೂ, ಅವುಗಳ ಹೊಣೆಗಾರಿಕೆ ಹೆಚ್ಚಾಗಿದೆ ಎಂಬುದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಆನತೆ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ವಿರುದ್ಧ ವಿಶಾಲ ಹಾಗೂ ತಡೆಯಿಲ್ಲದ ಹೋರಾಟಗಳನ್ನು ಕಟ್ಟಿ ಬೆಳೆಸುವ ಮೂಲಕ ಮೂರನೇ ಪರ್ಯಾಯವನ್ನು ಜನರ ಮುಂದಿಡುವುದು ಎಡಶಕ್ತಿಗಳ ಜವಾಬ್ದಾರಿಯಾಗಿದೆ. ಇಂತಹ ಹೋರಾಟಗಳಲ್ಲಿ ಎಡಶಕ್ತಿಗಳ ಜೊತೆಯಲ್ಲಿ ನಿಲ್ಲುವ ಜಾತ್ಯಾತೀತ, ಪ್ರಜಾಸತ್ತಾಕ ಶಕ್ತಿಗಳನ್ನು ಒಳಗೊಂಡ ಮೂರನೇ ಪರ್ಯಾಯ ಹೋರಾಟದ ಅಗ್ನಿಕುಂಡದಲ್ಲಿಯೇ ಮೂಡಿ ಬರಲಿದೆ.

ಆಗಸ್ಟ್ 20ರ ಸಾರ್ವಜನಿಕ ಮುಷ್ಕರದ ಅನುಭವ:

ಆಗಸ್ಟ್ 20ರ ಮುಷ್ಕರಕ್ಕೆ ಕರ್ನಾಟಕದಲ್ಲಿಯೂ ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ಬಹುತೇಕ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ಹಲವಾರು ತಾಲೂಕು ಕೇಂದ್ರಗಳಲ್ಲಿ ಮುಷ್ಕರ ಬಂದ್ ಆಗಿ ಪರಿವರ್ತನೆಯಾಗಿದೆ. ಮಾಧ್ಯಮಗಳು ಅದನ್ನು ಉದ್ದೇಶ ಪೂರ್ವಕವಾಗಿಯೇ ಬಿಂಬಿಸದಿರಬಹುದು. ಬೆಲೆ ಏರಿಕೆಯಿಂದ ತತ್ತರಿಸಿದ ಜನತೆ ಸ್ವಯಂ ಪ್ರೇರಣೆಯಿಂದ ಮುಷ್ಕರವನ್ನು ಬಂದ್ ಆಗಿ ಪರಿವರ್ತಿಸಲು ನೆರವಾಗಿದ್ದಾರೆ. ರಾಜ್ಯದಲ್ಲಿ ಅದು ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಜನತೆಯ ಆಕ್ರೋಶವಾಗಿಯೂ ವ್ಯಕ್ತವಾಗಿದೆ. ಹೀಗಾಗಿ ರಾಜ್ಯದ ಪೋಲೀಸರು ಹಲವಾರು ಕಡೆ ಮುಷ್ಕರದ ಸಂಘಟಕರನ್ನು ಮತ್ತು ಎಡ ಸಂಘಟನೆಗಳ ಕಾರ್ಯಕರ್ತರನ್ನು ಬಂಧಿಸಿ, ಅವರ ವಿರುದ್ಧ ಸುಳ್ಳು ಕೇಸುಗಳನ್ನು ದಾಖಲು ಮಾಡಿ, ಲಾಠಿ ಪ್ರಹಾರ ಮಾಡಿ ದೌರ್ಜನ್ಯವೆಸಗಿದನ್ನು ನೋಡುವಂತಾಯಿತು.

ರಾಜ್ಯ ಬಿಜಿಪಿ ಸರ್ಕಾರ ಯಾವುದೇ ಜನ ಚಳುವಳಿಯನ್ನು ಸಹಿಸುವುದಿಲ್ಲ ಎಂಬುದು ಸಾಬೀತಾಗಿಬಿಟ್ಟದೆ. ಅದರ ಜನ ವಿರೋಧಿ ನೀತಿಗಳ ವಿರುದ್ಧ ಹೋರಾಡುತ್ತಿರುವ ಎಡಶಕ್ತಿಗಳ ವಿರುದ್ಧವೇ ಅದರ ಕಣ್ಣು! ಮಂಗಳೂರು ಮಹಾನಗರ ಪಾಲಿಕೆ ನೀರಿನ ದರಗಳನ್ನು ಸಿಕ್ಕಾಪಟ್ಟೇ ಏರಿಸಿದನ್ನು ಪ್ರತಿಭಟಿಸಿ ಸಿಪಿಐ(ಎಂ) ಕಾರ್ಯಕಾರ್ತರ ಮೇಲೆ ಪೋಲೀಸರು ನಡೆಸಿದ ಅಮಾನುಷ ದೌರ್ಜನ್ಯವೇ ಇದಕ್ಕೆ ಸಾಕ್ಷಿ. ಬಿಜೆಪಿಯ ಈ ದೌರ್ಜನ್ಯಗಳನ್ನು ಕಣ್ಣಾರೆ ಕಾಣುವ ರಾಜ್ಯದ ಜನತೆ ತಮ್ಮ ಭ್ರಮೆಗಳಿಂದ ಹೊರ ಬರದೆ ಇರಲಾರರು.


ಆಗಸ್ಟ್ 20ರ ಮುಷ್ಕರ - ಕುಂದಾಪುರದಲ್ಲಿ

ಮೊಗ್ಗಿನ ಮನಸ್ಸು - ಹದಿಹರಯಕ್ಕೆ ಕಿವಿಮಾತು



ಹದಿಹರಯಕ್ಕೆ ಕಾಲಿಟ್ಟ ಯುವ ಮನಸ್ಸುಗಳ ಆಸೆ, ಆಕಾಂಕ್ಷೆಗಳು ಮತ್ತು ಬಯಕೆ-ತಾಕಲಾಟಗಳ ಚಿತ್ರಣ ಈ ಮೊಗ್ಗಿನ ಮನಸ್ಸು. ನಿರ್ದೇಶಕ ಶಶಾಂಕ್ ಯುವತಿಯರ ಭಾವನೆಗಳ ತಾಕಲಾಟಗಳ ಸೂಕ್ಷ್ಮತೆಯನ್ನು ಅರಿಯಲು ಸಾಕಷ್ಟು ಶ್ರಮ ವಹಿಸಿದ್ದಾರೆ. ಇದೇ ವಿಷಯನ್ನು ವಸ್ತುವಾಗುಳ್ಳ 'ಚಿತ್ರ' ಎಂಬ ಸಿನಿಮಾ ಈಗಾಗಲೇ ಬಂದು ಹೋಗಿದೆ. ಕಾಲೇಜು ಪ್ರವೇಶಿಸುವ ಯುವಕ-ಯುವತಿಯರು ವಯಸ್ಸಿನ ಸಹಜ ಆಕರ್ಷಣೆಗೆ ಒಳಗಾಗಿ ತಮ್ಮ ಮುಂದಿನ ಭವಿಷ್ಯದ ಬಗ್ಗೆ ಯೋಚಿಸದೆ ದುಡುಕಿ, ತಮ್ಮ ಬದುಕನ್ನು ಅಸ್ತವ್ಯಸ್ತ ಮಾಡಿಕೊಳ್ಳುವುದು ಆ 'ಚಿತ್ರ' ದ ಕಥೆಯಾಗಿತ್ತು. ಅಂತಹ ದುಡುಕಿನ-ಕೆಡುಕಿನ ಸವಿವರಗಳ ಚಿತ್ರಣವೇ 'ಮೊಗ್ಗಿನ ಮನಸ್ಸು'.

ನಾಲ್ಕು ಜನ ಬಾಲೆಯರ ಸುತ್ತ ಕೇಂದ್ರೀಕೃತಗೊಂಡಿದೆ ಈ ಚಿತ್ರ. ಹುಡುಗರೂ ಇಂತಹ ಪರಿಸ್ಥಿತಿಯಲ್ಲಿ ಸಿಕ್ಕಿಬೀಳುವ ಉದಾಹರಣೆಗಳಿದ್ದರೂ ನಿರ್ದೇಶಕ ಶಶಾಂಕ ಕೇವಲ ಯುವತಿಯರ ಮೇಲೆ ಮಾತ್ರ ಗಮನವನ್ನು ಕೇಂದ್ರೀಕರಿಸಿದ್ದಾರೆ.

ಹೈಸ್ಕೂಲು ಜೀವನ ಮುಗಿದು ಕಾಲೇಜು ಪ್ರವೇಶಿಸುವ ಯುವತಿಯರ ಕಂಗಳಲ್ಲಿ ಹಲವು ಕನಸುಗಳಿರುತ್ತವೆ, ಬಯಕೆಗಳಿರುತ್ತವೆ. ಆದರೆ ಸುತ್ತಲಿನ ಪರಿಸರ ಅವರನ್ನು ಉನ್ನತ ಮಟ್ಟಕ್ಕೂ ಏರಿಸಬಹುದು ಇಲ್ಲವೇ ಪಾತಾಳಕ್ಕೂ ತಳ್ಳಬಹುದಾದ ಸಾಧ್ಯತೆಗಳನ್ನು ಶಶಾಂಕ್ ಪ್ರೇಕ್ಷಕರ ಮುಂದಿಡುತ್ತಾರೆ.

ಹಳ್ಳಿಯಲ್ಲಿ ಹೈಸ್ಕೂಲು ಓದಿ ಒಳ್ಳೆಯ ಅಂಕ ಗಳಿಸಿದ ಯುವತಿ - ರೇಣುಕಾ ದೇವಿ(ಶುಭಾ ಪೂಂಜಾ) ತಾನು ಡಾಕ್ಟರ್ ಆಗಬೇಕೆಂಬ ಅಪ್ಪನ ಆಸೆಯನ್ನು ಪೂರೈಸಲು ಮಂಗಳೂರು ನಗರದ ಕಾಲೇಜಿಗೆ ಸೇರುತ್ತಾಳೆ. ಮತ್ತೊಬ್ಬಳು-ಚಂಚಲ (ರಾಧಿಕಾ ಪಂಡಿತ್) ಉತ್ತಮ ಕುಟುಂಬದ ವಾತಾವರಣದಲ್ಲಿ ಬೆಳೆದವಳು, ಉನ್ನತ ಶಿಕ್ಷಣದ ಆಶಯದೊಂದಿಗೆ ಅದೇ ಕಾಲೇಜು ಸೇರುತ್ತಾಳೆ. ಅವರಿಬ್ಬರೂ ಹಾಸ್ಟೆಲ್‌ನ ಒಂದೇ ರೂಮಿನಲ್ಲಿರುತ್ತಾರೆ. ಅವರಿಗೆ ಜೊತೆಯಾಗಿ ಹಿರಿಯ ವಿದ್ಯಾರ್ಥಿನಿಯರಾದ ಇನ್ನಿಬ್ಬರು ಯುವತಿಯರು ಇರುತ್ತಾರೆ. ಅವರಿಗೋ ಹುಡುಗರ ಸಹವಾಸ. ಇವರಿಬ್ಬರಿಗೂ ಹುಡುಗರ ಪರಿಚಯವೇ ಇಲ್ಲದಿರುವುದು ಒಂದು ನಗೆಪಾಟಲಿನ ವಿಷಯ. ಸರಿ ಇವರಿಗೂ ಆಸೆ ಚಿಗುರುತ್ತದೆ. ತಮಗೂ ಒಬ್ಬ ಬಾಯ್‌ಫ್ರೆಂಡ್ ಬೇಕೆಂದು ಹಂಬಲಿಸುತ್ತಾರೆ. ಡಾಕ್ಟರ್ ಆಗುವ ಕನಸು ಕಂಡಿದ್ದ ಹುಡುಗಿ ಹುಡುಗನೊಬ್ಬನ ಹಿಂದೆ ಬಿದ್ದು ಓದು, ಅಪ್ಪನ ಕಾಳಜಿ ಎಲ್ಲವನ್ನೂ ಮರೆಯುತ್ತಾಳೆ. ಇನ್ನೊಬ್ಬಾಕೆ ತನಗೆ ಪಾಠ ಹೇಳುವ ಮೇಷ್ಟ್ರನ್ನೇ ಇಷ್ಟಪಡುತ್ತಾಳೆ. ಆದರೆ ಆತ ಮತ್ತೊಬ್ಬಾಕೆಗೆ ಈ ವಯಸ್ಸಿನ ಸಹಜ ಆಕರ್ಷಣೆಯಿಂದಾಗುವ ತಪ್ಪನ್ನು ಮನದಟ್ಟು ಮಾಡಿಕೊಟ್ಟು, ಓದಿನ ಕಡೆ ಗಮನಹರಿಸಲು ಸೂಚಿಸುವುದನ್ನು ಕಂಡು ತನ್ನ ತಪ್ಪನ್ನು ತಿದ್ದಿಕೊಳ್ಳುತ್ತಾಳೆ. ಆದರೆ ಮತ್ತೊಬ್ಬ ರೋಡ್‌ರೋಮಿಯೋ ಇವಳಿಲ್ಲದೇ ತಾನು ಬದುಕುವುದೇ ಇಲ್ಲವೆಂದು ಇವಳಿಗೆ ಗಂಟು ಬೀಳುತ್ತಾನೆ. ಈಕೆಯೂ ಆತನದು ನಿಜವಾದ ಪ್ರೀತಿಯೆಂದು ಭಾವಿಸಿ ಅವನನ್ನು ಪ್ರೇಮಿಸುತ್ತಾಳೆ.

ಇಲ್ಲಿ ನಿರ್ದೇಶಕರು ಪುರುಷ ಪ್ರಾಧಾನ್ಯತೆಯನ್ನು ಮತ್ತು ಪಾಳೆಗಾರಿಕೆಯ ಮನೋಭಾವವನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಚಂಚಲಳನ್ನು ಪ್ರೀತಿಸಿದ ಯುವಕ ಆನಂತರ ಆಕೆ ತನ್ನ ಆಸ್ತಿಯೇನೋ ಎಂಬಂತೆ ನಡೆದುಕೊಳ್ಳುತ್ತಾನೆ. ತನ್ನಿಷ್ಟದಂತೆ ಆಕೆ ನಡೆಯಬೇಕೆಂದು ಆಗ್ರಹಿಸುತ್ತಾನೆ. ತನ್ನ ಇತರ ಸ್ನೇಹಿತರೊಂದಿಗೆ ನಗುನಗುತ್ತಾ ಮಾತನಾಡುವುದನ್ನು ಆತ ಸಹಿಸುವುದಿಲ್ಲ, ತನ್ನ ಪ್ರೀತಿಯ ಲೆಕ್ಚರರ್‌ರೊಂದಿಗೆ ಸಲುಗೆಯಿಂದಿರುವುದನ್ನು ಕಂಡು ಸಂಶಯಿಸುತ್ತಾನೆ. ಆಕೆಯ ಎಲ್ಲಾ ನಡವಳಿಕೆಗಳಿಗೂ ಕಡಿವಾಣ ಹಾಕಲು ಯತ್ನಿಸುತ್ತಾನೆ. ಅಸಮಾಧಾನಗೊಂಡ ಆಕೆ ತಾನೇನು ನಿನ್ನ ಆಸ್ತಿಯೇನು ಎಂದು ಪ್ರಶ್ನಿಸಿದಾಗ ಆತ 'ಇನ್ನೇನು ನೀನು ಸಾರ್ವಜನಿಕ ಆಸ್ತಿನಾ?' ಎಂದು ಮರು ಪ್ರಶ್ನಿಸಿದಾಗ, ದಿಗ್ಭ್ರಾಂತಳಾದ ಆಕೆ ಆತನೊಂದಿಗಿನ ಸ್ನೇಹವನ್ನು ಕಡಿದುಕೊಳ್ಳುತ್ತಾಳೆ.



ಇಷ್ಟೊತ್ತಿಗೆ ವಯಸ್ಸಿನ ಸಹಜ ಆಕರ್ಷಣೆಗೆ ಮರುಳಾಗುವುದರಿಂದಾಗುವ ಪರಿಣಾಮಗಳು ಗೋಚರಿಸುತ್ತವೆ. ಹಳ್ಳಿ ಹುಡುಗಿಯನ್ನು ಭೋಗದ ವಸ್ತುವಾಗಿ ಕಂಡ ಯುವಕ, ಅವಳು ಗರ್ಭಿಣಿ ಎಂದು ತಿಳಿದ ಕೂಡಲೇ ಕೈಕೊಡುತ್ತಾನೆ. ಅವಮಾನಿತಳಾದ ಹುಡುಗಿ ನೇಣಿಗೆ ಶರಣಾಗುತ್ತಾಳೆ. ಮತ್ತೊಬ್ಬ ಹಿರಿಯ ವಿದ್ಯಾರ್ಥಿ ಪ್ರೀತಿಸುವುದಲ್ಲದೆ ಮದುವೆಯೂ ಆಗುತ್ತಾಳೆ. ಸ್ವಲ್ಪ ದಿನಗಳಲ್ಲೇ ಸಾಮರಸ್ಯದ ಕೊರತೆಯಿಂದಾಗಿ ವಿಚ್ಛೇದನ ಕೊಡುವ ಮಟ್ಟಕ್ಕೆ ಬಂದು ನಿಲ್ಲುತ್ತದೆ ಅವರ ಸಂಬಂಧ. ಮತ್ತೊಬ್ಬಾಕೆ ಪುರುಷರ ಇಂತಹ ದಬ್ಬಾಳಿಕೆಯಿಂದ ರೋಷಗೊಂಡು ಸೇಡಿಗೆ ಸೇಡೆಂಬಂತೆ ತಾನು ಪ್ರೀತಿಸುವಂತೆ ನಾಟಕವಾಡಿ ಹುಡುಗರನ್ನು ದೋಚುವುದೇ ಸರಿ ಎಂಬ ತೀರ್ಮಾನಕ್ಕೆ ಬರುತ್ತಾಳೆ.


ಇಲ್ಲಿ ಎಲ್ಲ ಪುರುಷರು ಒಂದೇ ಎಂಬ ತೀರ್ಮಾನಕ್ಕೆ ಬರಲು ನಿರ್ದೇಶಕರು ಬಿಡುವುದಿಲ್ಲ. ಸಹೃದಯರೂ ಇರುತ್ತಾರೆ. ಅಂತಹ ಹೃದಯವಂತ ಹುಡುಗನೊಬ್ಬ ಚಂಚಲೆಯನ್ನು ಪ್ರೀತಿಸುತ್ತಾನೆ. ಆಕೆಗೂ ಅವನ ಮೇಲೆ ಮನಸ್ಸಾಗುತ್ತದೆ. ಆದರೆ ತನ್ನ ಕಣ್ಣ ಮುಂದೆಯ ಪ್ರೀತಿಯ ಸಹವಾಸಕ್ಕೆ ಬಿದ್ದು ಆದ ಪರಿಣಾಮಗಳನ್ನು ಕಂಡು ಆತನಿಂದ ದೂರವಾಗುತ್ತಾಳೆ. ತನ್ನ ತಂದೆ - ತಾಯಿಯ ಆಶಯಗಳನ್ನು ನೆನೆಸಿಕೊಂಡು ಶಿಕ್ಷಣದ ಕಡೆಗೆ ಗಮನ ಕೊಡುತ್ತಾಳೆ. ಮುಂದೆ ಉನ್ನತ ಶಿಕ್ಷಣ ಮುಗಿಸುತ್ತಾಳೆ. ತಾನು ಓದಿದ ಕಾಲೇಜಿನ ಹಳೆಯ ವಿದ್ಯಾರ್ಥಿ ಕಾರ್ಯಕ್ರಮವೊಂದಕ್ಕೆ ಬಂದಾಗ ಆ ಯುವಕ ಆಗಲೂ ಆಕೆಗಾಗಿ ಕಾಯುತ್ತಿರುತ್ತಾನೆ - ಅವಳ ತಂದೆ ತಾಯಿಯರೂ ಕೂಡಾ ಇದು ನಿಜವಾದ ಪ್ರೀತಿಯೆಂದು, ಅವನ ಪ್ರೀತಿಯನ್ನು ಒಪ್ಪಿಕೊಳ್ಳುವಂತೆ ಅವರೇ ಆಕೆಗೆ ಒತ್ತಾಯಿಸುತ್ತಾರೆ - 'ಪ್ರೀತಿಯ ಬೆನ್ನ ಹಿಂದೆ ಬೀಳದಿರಿ - ಅದು ಅದಾಗೇ ಬರಲಿ, ನಿಮ್ಮ ಜೀವನ ಮೊದಲು ರೂಪಿಸಿಕೊಳ್ಳಿ' ಎಂಬ ಸಂದೇಶ ಪರದೆಯ ಮೇಲೆ ಮೂಡುವುದರೊಂದಿಗೆ ಸಿನಿಮಾ ಮುಗಿಯುತ್ತದೆ.

ಇದು 'ಮುಂಗಾರು ಮಳೆ'ಯ ಖ್ಯಾತಿಯ ಇ.ಕೃಷ್ಣಪ್ಪನವರ ನಿರ್ಮಾಣದ ಎರಡನೇ ಚಿತ್ರ. ಸೆನ್ಸಾರ್ ಮಂಡಳಿಯವರು ಈ ಚಿತ್ರಕ್ಕೆ 'ಎ' ಸರ್ಟಿಫಿಕೇಟ್ ನೀಡಿದ್ದರು. ಕಾರಣ ಹದಿಹರೆಯದ ಪ್ರೇಮ-ಕಾಮನೆಗಳ ಚಿತ್ರಣವಿದೆಯೆಂಬುದು. ಈ ಹಿಂದೆ 'ಚೆಲುವಿನ ಚಿತ್ತಾರ'ದಲ್ಲಿನ ಹೈಸ್ಕೂಲು ಹುಡುಗಿಯ ಪ್ರೇಮ ಕಥಾನಕದ ಬಗ್ಗೆ ಹಲವು ದೂರುಗಳು ಇದ್ದುದ್ದರಿಂದ ಈ ಕ್ರಮಕ್ಕೆ ಮುಂದಾಗಿದ್ದರು. ಆದರೆ ಕೃಷ್ಣಪ್ಪ ಮತ್ತು ನಿರ್ದೇಶಕ ಶಶಾಂಕ್‌ರವರ ಉದ್ದೇಶವೇ ಈ ಸಿನಿಮಾವನ್ನು ಹದಿಹರೆಯದ ಹುಡುಗಿಯರು ನೋಡಬೇಕೆಂಬುದು. ಇದು ನಿಜವೂ ಹೌದು. ಶಶಾಂಕ್ ಬಹಳ ಸಂಯಮದಿಂದಲೇ ಚಿತ್ರ ನಿರೂಪಿಸಿದ್ದಾರೆ - ಹದಿಹರೆಯದವರಿಗೆ ಇದು ಒಂದು ಉತ್ತಮ ಚಿತ್ರವೇ. ಹಾದಿ ತಪ್ಪುವಂತದ್ದೇನೂ ಇದರಲ್ಲಿ ಇಲ್ಲ. 'ಎ' ಸರ್ಟಿಫಿಕೇಟ್‌ನಿಂದಾಗಿ ಹೆಂಗೆಳೆಯರು ಚಿತ್ರ ನೋಡಲು ಹಿಂಜರಿಯಬಹುದೆಂಬ ಕಾರಣಕ್ಕೆ ಕೃಷ್ಣಪ್ಪನವರು ದೆಹಲಿಯ ಟ್ರಿಬ್ಯೂನಲ್‌ಗೆ ಹೋಗಿ ಒಪ್ಪಿಗೆ ಪಡೆದು ಚಿತ್ರ ಬಿಡುಗಡೆ ಮಾಡಿದ್ದಾರೆ.

ಆದರೆ ಅಂತಿಮವಾಗಿ ಉಳಿಯುವ ಪ್ರಶ್ನೆಯೆಂದರೆ ಎಲ್ಲಾ ಯುವತಿಯರನ್ನು ಒಂದೇ ತಕ್ಕಡಿಯಲ್ಲಿ ತೂಗುವುದು ಎಷ್ಟು ಸರಿ ಎಂಬುದು. ತಮ್ಮ ಜೀವನ, ಸಾಧನೆ, ಗುರಿಯ ಬಗ್ಗೆ ಸ್ಪಷ್ಟ ಕಣ್ಣೋಟವನ್ನಿಟ್ಟುಕೊಂಡು ಮುನ್ನಡೆಯುವ ಹೆಣ್ಣು ಮಕ್ಕಳೂ ಇರುತ್ತಾರೆಂಬ ಅಂಶವನ್ನು ಶಶಾಂಕ್ ಗಮನಿಸಿದ್ದರೆ ಚೆನ್ನಾಗಿತ್ತು.



ಒಲಂಪಿಕ್ಸ್ ಕೂಟದ ಸೆಮಿಫೈನಲ್ ಹಂತ ಪ್ರವೇಶಿಸಿದ ಭಾರತದ ಮೊತ್ತಮೊದಲ ಬಾಕ್ಸಿಂಗ್ ಪಟು ವಿಜೇಂದರ್ ಕುಮಾರ್ ಭಾರತಕ್ಕೆ ಕಂಚಿನ ಪದಕ ತಂದಿದ್ದಾರೆ.



66 ಕೆ.ಜಿ. ವಿಭಾಗದ ಕುಸ್ತಿ ಸ್ಪರ್ಧೆಯಲ್ಲಿ ಭಾರತಕ್ಕೆ ಕಂಚಿನ ಪದಕ ಗೆದ್ದುಕೊಟ್ಟ ಸುಶೀಲ್ ಕುಮಾರ್

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH